

ವೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ನವೆಂಬರ್ 17 ಸೋಮವಾರ 2025

46

ಸಂಪುಟ: 46 | ಸಂಚಿಕೆ: 209 | ಪುಟಗಳು: 12

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com



50 ಕೋಟಿ ರೂ. ವೆಚ್ಚದಲ್ಲಿ 13 ಕೆರೆಗಳ ಪುನರುಜ್ಜೀವನ


ಮೈಸೂರು–ನಂಜನಗೂಡು ರಸ್ತೆಯ ದಳವಾಯಿ ಕೆರೆ

ಕಾಮಗಾರಿಗೆ ಎಂಡಿಎ ಟೆಂಡರ್



ಮೈಸೂರು, ನ. 16 (ಆರ್‌ಕೆ)– ಬಹುನಿರೀಕ್ಷಿತ ಮೈಸೂರು ನಗರ ಮತ್ತು ಸುತ್ತಮುತ್ತಲಿನ 13 ಕೆರೆಗಳನ್ನು 50 ಕೋಟಿ ರೂ. ಅನುದಾನದಲ್ಲಿ ಪುನರುಜ್ಜೀವನಗೊಳಿಸಲು ಮೈಸೂರು ಅಭಿವೃದ್ಧಿ ಪ್ರಾಧಿಕಾರ (ಎಂಡಿಎ) ಮುಂದಾಗಿದೆ.

ಕೆರೆಗಳ ಅನುದಾನ ಸೆಸ್ ಹಣ ಬಳಸಿಕೊಂಡು ಅಳಿವಿನ ಅಂಚಿನಲ್ಲಿರುವ ಕೆರೆಗಳನ್ನು ಮೂಲ ಸೌಕರ್ಯದೊಂದಿಗೆ ಅಭಿವೃದ್ಧಿಪಡಿಸುವ ಕಾಮಗಾರಿಗಳಿಗೆ ಪ್ರಾಧಿಕಾರವು ಇದೀಗ ಟೆಂಡರ್ ಪ್ರಕ್ರಿಯೆ ಆರಂಭಿಸಿದೆ. ಮೈಸೂರು–ನಂಜನಗೂಡು ರಸ್ತೆಯ ದಳವಾಯಿ ಕೆರೆ, ಹುಯಿಲಾಳು, ಹಿನಕಲ್, ಭುಗತಹಳ್ಳಿ, ವಾಜಮಂಗಲ ಸೇರಿದಂತೆ 13 ಕೆರೆಗಳ ಪುನರುಜ್ಜೀವನಗೊಳಿಸಲು ಈ ಯೋಜನೆಯಲ್ಲಿ ಸೇರಿಸಲಾಗಿದೆ. ▶ 9ನೇ ಪುಟಕ್ಕೆ



“13.33 ಎಕರೆ ವಿಸ್ತಾರದ ಹುಯಿಲಾಳು ಕೆರೆ ಮತ್ತು 5.9 ಎಕರೆ ಪ್ರದೇಶದ ಹಿನಕಲ್ ಕೆರೆಯ ಗಿಡಗಂಟೆ, ಹೂಳು ತೆಗೆಯುವುದು, ಏರಿ ಮೇಲಿನ ಬಂಡ್ ಸುಭದ್ರಗೊಳಿಸುವುದು, ವಾಕಿಂಗ್ ಪಾತ್ ಮಾಡಿ ಇಂಟರ್‌ಲಾಕ್ ಟೈಲ್ಸ್ ಅಳವಡಿಸುವುದು, ಮೆಟ್ಟಿಲು ನಿರ್ಮಾಣ ಹಾಗೂ ಕ್ಯಾಟಲ್ ರ್‍ಯಾಂಪ್ ನಿರ್ಮಿಸಲಾಗುವುದು. ಅದೇ ರೀತಿ ದೇವನೂರು, ವಾಜಮಂಗಲ, ಭೂಗತಹಳ್ಳಿ, ನಾಡನಹಳ್ಳಿ ಕೆರೆಗಳಿಗೂ ಮೂಲ ಸೌಲಭ್ಯ ಕಲ್ಪಿಸುವ ಮೂಲಕ ಸಾರ್ವಜನಿಕರಿಗೆ ಅನುಕೂಲ ಮಾಡಿ ಕೊಡಲಾಗುತ್ತದೆ. ಕೆರೆಗಳನ್ನು ನೈಸರ್ಗಿಕ ತಾಣವಾಗಿಯೇ ಉಳಿಸುವುದು ಈ ಯೋಜನೆಯ ಮುಖ್ಯ ಉದ್ದೇಶವಾಗಿದ್ದು, ಆರು ತಿಂಗಳೊಳಗಾಗಿ ಕಾಮಗಾರಿಗಳನ್ನು ಪೂರ್ಣಗೊಳಿಸಬೇಕೆಂದು ನಿರ್ಧರಿಸಲಾಗಿದೆ.

–ರಕ್ಷಿತ್, ಮುಡಾ ಆಯುಕ್ತ

ಚಿತ್ತಾಪುರದಲ್ಲಿ ಆರ್‌ಎಸ್‌ಎಸ್ ಪಥಸಂಚಲನ

ಚಿತ್ತಾಪುರ, ನ.16– ಕಳೆದ ಒಂದು ತಿಂಗಳಿನಿಂದ ತೀವ್ರ ಗಮನ ಸೆಳೆದಿದ್ದ ಮತ್ತು ಚರ್ಚೆಗೆ ಕಾರಣವಾಗಿದ್ದ ರಾಷ್ಟ್ರೀಯ ಸ್ವಯಂಸೇವಕ ಸಂಘದ (ಆರ್‌ಎಸ್‌ಎಸ್) ಪಥ ಸಂಚಲನವು ಭಾನುವಾರ ಪೊಲೀಸ್ ಬಿಗಿ ಭದ್ರತೆಯ ನಡುವೆ ಶಾಂತಿಯುತವಾಗಿ ಸಂಪನ್ನಗೊಂಡಿತು.

ಸಚಿವ ಪ್ರಿಯಾಂಕ್ ಖರ್ಗೆ ಅವರ ತವರು ಕ್ಷೇತ್ರವಾದ ಚಿತ್ತಾಪುರ ಪಟ್ಟಣದಲ್ಲಿ ಆರ್‌ಎಸ್‌ಎಸ್ ಗಣವೇಷಧಾರಿಗಳು ಪೊಲೀಸರ ಸರ್ಪಗಾವಲಿನ ನಡುವೆ ತನ್ನ ಸಂಘದ ಬಲ ಪ್ರದರ್ಶಿಸಿದರು. ಪಥಸಂಚಲನಕ್ಕೆ ಜಿಲ್ಲಾಡಳಿತ ನೀಡಿದ್ದ ಷರತ್ತುಬದ್ಧ ಅನುಮತಿಯಂತೆ 300 ಗಣವೇಷಧಾರಿಗಳು ಹಾಗೂ ▶ 9ನೇ ಪುಟಕ್ಕೆ

ನ.19 ಇಲ್ಲವೆ 20ರಂದು ಬಿಹಾರ ಸಿಎಂ ಆಗಿ ನಿತೀಶ್‌ಕುಮಾರ್ ಪ್ರಮಾಣವಚನ



ಪಾಟ್ನಾ,ನ.16–ಬಿಹಾರದಲ್ಲಿ ಹೊಸ ಸರ್ಕಾರ ರಚನೆ ಪ್ರಕ್ರಿಯೆ ವೇಗ ಪಡೆದುಕೊಂಡಿದ್ದು, ಪ್ರಧಾನಿ ನರೇಂದ್ರ ಮೋದಿ ಅವರ ಅಂತಿಮ ವೇಳಾಪಟ್ಟಿಯನ್ನು ಅವಲಂಬಿಸಿ, ನವೆಂಬರ್ 19 ಅಥವಾ 20ರಂದು ನಿತೀಶ್ ಕುಮಾರ್ ಅವರು ಪ್ರಮಾಣವಚನ ಸ್ವೀಕರಿಸುವ ನಿರೀಕ್ಷೆಯಿದೆ.

ಪಾಟ್ನಾ ಗಾಂಧಿ ಮೈದಾನದಲ್ಲಿ ಸಿದ್ಧತೆಗಳು ಭರದಿಂದ ಸಾಗಿವೆ. ಈ ಸಮಾರಂಭದಲ್ಲಿ ಪ್ರಧಾನಿ ಮೋದಿ ಮತ್ತು ಬಿಜೆಪಿ ಆಡಳಿತವಿರುವ ರಾಜ್ಯಗಳ ಮುಖ್ಯಮಂತ್ರಿಗಳು ಭಾಗವಹಿಸುವ ಸಾಧ್ಯತೆಯಿದೆ. ಚುನಾವಣಾ ಆಯೋಗವು 18ನೇ ಬಿಹಾರ ವಿಧಾನಸಭಾ ಚುನಾವಣೆ ▶ 9ನೇ ಪುಟಕ್ಕೆ

ರಾಜ್ಯದಲ್ಲಿ ಹಾವು, ನಾಯಿ ಕಡಿತಕ್ಕೆ ತುರ್ತು ಚಿಕಿತ್ಸೆ ಕಡ್ಡಾಯ

ಎಲ್ಲಾ ಆಸ್ಪತ್ರೆಗಳಿಗೆ ಸರ್ಕಾರದ ಸುತ್ತೋಲೆ



ಬೆಂಗಳೂರು, ನ.16– ಇತ್ತೀಚಿನ ದಿನಗಳಲ್ಲಿ ಬೀದಿನಾಯಿಗಳ ಉಪಟಳ ಹೆಚ್ಚಾದ ಬೆನ್ನಲ್ಲೇ, ನಾಯಿ ಕಡಿತ ನಿರ್ವಹಣೆ ಕುರಿತು ಸುಪ್ರೀಂಕೋರ್ಟ್‌ನ ಇತ್ತೀಚಿನ ನಿರ್ದೇಶನಗಳ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರವು ಒಂದು ಮಹತ್ವದ ಸುತ್ತೋಲೆಯನ್ನು ಹೊರಡಿಸಿದೆ. ಎಲ್ಲಾ ಸರ್ಕಾರಿ ಮತ್ತು ಖಾಸಗಿ ಆಸ್ಪತ್ರೆಗಳು ಆಂಟಿ–ರೇಬಿಸ್ ಲಸಿಕೆ, ರೇಬಿಸ್ ಇಮ್ಯುನೊಗ್ಲಾಬ್ಯುಲಿನ್ ಮತ್ತು ಆಂಟಿ–ಸ್ನೇಕ್ ವೆನಮ್ ಔಷಧಿಗಳನ್ನು ಕಡ್ಡಾಯವಾಗಿ ಸದಾ ದಾಸ್ತಾನು ಮಾಡಿರಬೇಕು ಎಂದು ಈ ಸುತ್ತೋಲೆಯಲ್ಲಿ ಸೂಚಿಸಲಾಗಿದೆ.

ರೇಬಿಸ್ ಚಿಕಿತ್ಸೆ ಉಚಿತ, ಕಡ್ಡಾಯ: ಸುಪ್ರೀಂಕೋರ್ಟ್‌ನ ಆದೇಶದ ಮೇರೆಗೆ ಈ ಸುತ್ತೋಲೆ ಹೊರಡಿಸಿದ್ದು, ರಾಜ್ಯದ ಎಲ್ಲಾ ಆರೋಗ್ಯ ▶ 9ನೇ ಪುಟಕ್ಕೆ

“ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆಗಳ ಕಾಯಿದೆ, 2007ರ ಅಡಿಯಲ್ಲಿ ಖಾಸಗಿ ಆಸ್ಪತ್ರೆಗಳು ನಿರ್ದಿಷ್ಟ ಜವಾಬ್ದಾರಿಗಳನ್ನು ಹೊಂದಿವೆ. ಖಾಸಗಿ ಆಸ್ಪತ್ರೆಗಳು ನಾಯಿ, ಇತರ ಪ್ರಾಣಿಗಳು, ಹಾವು ಕಡಿತದ ಸಂತ್ರಸ್ತರಿಗೆ ಮುಂಗಡ ಹಣ ಕೇಳದೆ ತಕ್ಷಣ ಪ್ರಥಮ ಚಿಕಿತ್ಸೆ ಮತ್ತು ಜೀವ ಉಳಿಸುವ ಚಿಕಿತ್ಸೆ ಒದಗಿಸಬೇಕು. ಅಲ್ಲದೆ, ಕರ್ನಾಟಕ ಉತ್ತಮ ನಾಗರಿಕ ಮತ್ತು ವೈದ್ಯಕೀಯ ವೃತ್ತಿಪರರ ಕಾಯಿದೆ, 2016ರ ಪ್ರಕಾರ, ಆಸ್ಪತ್ರೆಗಳು ರೋಗಿಗಳಿಗೆ ಉಚಿತ ವೈದ್ಯಕೀಯ ತಪಾಸಣೆ ಮತ್ತು ಪ್ರಥಮ ಚಿಕಿತ್ಸೆ ನೀಡಬೇಕು. ಸೂಕ್ತ ಸೌಲಭ್ಯಗಳಿಲ್ಲದಿದ್ದರೆ, ಬೇರೆಡೆಗೆ ಕಳುಹಿಸುವ ಮೊದಲು ರೋಗಿಯನ್ನು ಸ್ಥಿರಗೊಳಿಸಬೇಕು ಎಂದು ಸುತ್ತೋಲೆಯಲ್ಲಿ ತಿಳಿಸಲಾಗಿದೆ.

ಮೈಸೂರನ್ನು ಮಾದಕವಸ್ತು ಮುಕ್ತ ನಗರವಾಗಿಸಲು ಪೊಲೀಸರ ಪಣ



ಡ್ರಗ್ಸ್ ಮಾರುವವರಿಗೆ 1 ವರ್ಷ ಜೈಲು ಶಿಕ್ಷೆ ಎಚ್ಚರಿಕೆ

ಮೈಸೂರು, ನ. 16(ಆರ್‌ಕೆ)– ಡ್ರಗ್ಸ್ ಮಾರಾಟ ಮಾಡುವವರ ವಿರುದ್ಧ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳುವುದರ ಮೂಲಕ ಪೊಲೀಸರು ಮೈಸೂರನ್ನು ಮಾದಕವಸ್ತು ಮುಕ್ತ ನಗರವಾಗಿಸಲು ಸೆಣಸಾಡುತ್ತಿದ್ದಾರೆ.

ಮಾದಕವಸ್ತುಗಳಿಗೆ ದಾಸರಾಗಿ ತಮ್ಮ ಭವ್ಯ ಭವಿಷ್ಯದ ಜೀವನ ಮತ್ತು ಅವರ ಕುಟುಂಬವನ್ನು ಹಾಳುಮಾಡುತ್ತಿರುವ ಯುವ ಸಮೂಹವನ್ನು ಈ ಸಂಕೋಲೆಯಿಂದ ಮುಕ್ತಗೊಳಿಸಲು ಮೈಸೂರು ನಗರದಾದ್ಯಂತ ಪೊಲಿಸರು ತೀವ್ರ ಕಾರ್ಯಾಚರಣೆ ನಡೆಸುತ್ತಿದ್ದಾರೆ.

ಗಾಂಜಾ ಮಾರಾಟ, ಶೇಖರಣೆ ಹಾಗೂ ಸೇವನೆಯನ್ನು ತಡೆಗಟ್ಟಲು ಪ್ರತಿನಿತ್ಯ ರಾತ್ರಿ ಗಸ್ತು ತೀವ್ರಗೊಳಿಸಲಾಗಿದ್ದು, ಈಗಾಗಲೇ 2025ರಲ್ಲಿ 395 ಪ್ರಕರಣಗಳನ್ನು ದಾಖಲಿಸಲಾಗಿದ್ದು, 423 ಮಂದಿಯನ್ನು ಬಂಧಿಸಲಾಗಿದೆ. ಇತ್ತೀಚೆಗೆ ಮೈಸೂರು ನಗರದಾದ್ಯಂತ ಟೀ ಅಂಗಡಿಗಳು, ತಾಣಗಳ ಮೇಲೆ ದಾಳಿ ನಡೆಸಿದ ಪೊಲೀಸರು, ಮಾದಕ ವಸ್ತು ಮಾರಾಟ, ಸೇವನೆ, ಸಾಗಣೆ ಮಾಡುತ್ತಿದ್ದವರನ್ನು ವಶಕ್ಕೆ ಪಡೆದು ಠಾಣೆಯಲ್ಲಿ ತೀವ್ರ ವಿಚಾರಣೆ ನಡೆಸಿದ್ದರು.

ಇಂತಹ ಕೃತ್ಯದಲ್ಲಿ ಭಾಗವಹಿಸಿದವರ ವಿರುದ್ಧ ಕೋಟ್ಪಾ (COTPA) ಕಾಯ್ದೆಯಡಿ ಪ್ರಕರಣ ದಾಖಲಿಸಿ 1 ವರ್ಷ ಜೈಲು ಶಿಕ್ಷೆ ಅನುಭವಿಸುವಂತೆ ಕ್ರಮ ವಹಿಸಲಾಗುವುದು ಎಂದು ಪೋಲೀಸರು ಎಚ್ಚರಿಕೆ ನೀಡಿದ್ದಾರೆ. ಇದುವರೆಗೆ 7129 ಪೆಟ್ಟಿ ಕೇಸ್, 3770 ಕೋಟ್ಪಾ ಪ್ರಕರಣಗಳನ್ನು ದಾಖಲಿಸಲಾಗಿದೆ ಎಂದು ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್ 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ.

ಶಾಲಾ–ಕಾಲೇಜು, ಯುವ ಸಂಘಟನೆಗಳು, ಯುವ ಸಮೂಹವಿರುವೆಡೆ, ಉದ್ಯಾನವನ ಹಾಗೂ ಸಾರ್ವಜನಿಕ ಸ್ಥಳಗಳಲ್ಲಿ ಗಾಂಜಾ, ಆಫೀಮು ಇನ್ನಿತರ ಮಾದಕವಸ್ತುಗಳನ್ನು ಸೇವನೆ ಮಾಡದಂತೆ ಜಾಗೃತಿ ಮೂಡಿಸುತ್ತಿರುವ ಪೋಲಿಸರು, ಮೈಸೂರು ನಗರವನ್ನು ಡ್ರಗ್ಸ್ ಮುಕ್ತವಾಗಿಸಲು ಪಣತೊಟ್ಟಿದ್ದಾರೆ.

ಮೈಸೂರು ಡಿಸ್ಟ್ರಿಕ್ಟ್ ವಾಲಿಬಾಲ್ ಅಸೋಸಿಯೇಷನ್ ಪುನರ್ ರಚನೆ

ವರ್ಷವಿಡೀ ವಾಲಿಬಾಲ್ ಚಟುವಟಿಕೆ ನಡೆಸಲು ಸಭೆಯಲ್ಲಿ ತೀರ್ಮಾನ



ಮೈಸೂರಿನ ಖಾಸಗಿ ಹೋಟೆಲ್‌ನಲ್ಲಿ ಭಾನುವಾರ ಮೈಸೂರು ಡಿಸ್ಟ್ರಿಕ್ಟ್ ವಾಲಿಬಾಲ್ ಅಸೋಸಿಯೇಷನ್ ಸಭೆ ನಡೆಸಲಾಯಿತು.

ಮೈಸೂರು,ನ.16(ಜಿಎ)–ಮೈಸೂರು ಡಿಸ್ಟ್ರಿಕ್ಟ್ ವಾಲಿಬಾಲ್ ಅಸೋಸಿಯೇಷನ್ ಪುನರ್ ರಚನೆ ಮಾಡಿ ವರ್ಷವಿಡೀ ವಾಲಿಬಾಲ್ ಚಟುವಟಿಕೆಗಳನ್ನು ಆಯೋಜಿಸಲು ತೀರ್ಮಾನಿಸಲಾಗಿದೆ ಎಂದು ಕರ್ನಾಟಕ ರಾಜ್ಯ ವಾಲಿಬಾಲ್ ಅಸೋಸಿಯೇಷನ್ ಅಧ್ಯಕ್ಷ ಹರ್ಷನ್ ತಿಳಿಸಿದರು.

ಮೈಸೂರಿನ ಖಾಸಗಿ ಹೋಟೆಲ್‌ನಲ್ಲಿ ನಡೆದ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು, 2011ರ ಕ್ರೀಡಾ ಸಂಹಿತೆ ಪ್ರಕಾರ ಜಿಲ್ಲೆಯಲ್ಲಿ ಹಾಲಿ ಇರುವ ಅಸೋಸಿಯೇಷನ್ ವಾಲಿಬಾಲ್ ಚಟುವಟಿಕೆ ಆರಂಭಿಸಲಿದೆ. 1957ರಲ್ಲಿಯೇ ಮೈಸೂರು ಸಂಸ್ಥಾನ ನೇತೃತ್ವದ ರಾಜ್ಯಮಟ್ಟದ ವಾಲಿಬಾಲ್ ಸಂಸ್ಥೆಯ ತಂಡ ಮೊದಲ ಸ್ಥಾನ ಪಡೆದಿತ್ತು. ಅದನ್ನು ಹೊರತುಪಡಿಸಿದರೆ 2019ರಲ್ಲಿ ಮತ್ತೆ ಈ ಸಾಧನೆ ಮಾಡಲು ಸಾಧ್ಯವಾಗಿದೆ ಎಂದರು.

ಅಂದಿನಿಂದಲೂ ಮೈಸೂರಿನಲ್ಲಿ ವಾಲಿಬಾಲ್ ಸಂಸ್ಥೆ ಅಸ್ತಿತ್ವದಲ್ಲಿದೆ. ಇದೀಗ ಹೊಸ ನಿಯಮದನುಸಾರ ತಾಲೂಕು ಮಟ್ಟದ ಸಮಿತಿಗಳನ್ನು ಮಾಡಿ ಅವರು ಜಿಲ್ಲಾ ಮಟ್ಟದ ಅಸೋಸಿಯೇಷನ್ ಪದಾಧಿಕಾರಿಗಳನ್ನು ಆಯ್ಕೆ ಮಾಡಬೇಕಿದೆ. ಆ ಮೂಲಕ ಜಿಲ್ಲಾ ವಾಲಿಬಾಲ್ ಅಸೋಸಿಯೇಷನ್ ಅನ್ನು ಪುನರ್ ರಚಿಸಬೇಕಿದೆ ಅದಕ್ಕಾಗಿ ಈ ಪೂರ್ವಭಾವಿ ಸಭೆ ಕರೆಯಲಾಗಿದೆ ಎಂದು ತಿಳಿಸಿದರು.


ಹಿರಿಯ, ಏಕಲವ್ಯ ಪ್ರಶಸ್ತಿ ಪುರಸ್ಕೃತ ವಾಲಿಬಾಲ್ ಆಟಗಾರರು, ಹಿರಿಯ ಕೋಚ್‌ಗಳು, ವಾಲಿಬಾಲ್ ಕ್ರೀಡಾಭಿಮಾನಿಗಳನ್ನು ಒಳಗೊಂಡಂತೆ ಪೂರ್ವಭಾವಿ ಸಭೆ ನಡೆಸಲಾಗಿದೆ. ಸಾಕಷ್ಟು ಮಂದಿ ಈ ಕ್ರೀಡೆ ಬೆಳವಣಿಗೆಗೆ ಶ್ರಮಿಸಲು ಮುಂದೆ ಬಂದಿದ್ದಾರೆ. ಇವರೆಲ್ಲರ ನೇತೃತ್ವದಲ್ಲಿ ಜಿಲ್ಲೆಯಲ್ಲಿ ಇನ್ನು ಮುಂದೆ ವರ್ಷಪೂರ್ತಿ ವಾಲಿಬಾಲ್ ಟೂರ್ನಿಗಳನ್ನು ಆಯೋಜಿಸಲು ತೀರ್ಮಾನಿಸಲಾಗಿದೆ ಎಂದು ತಿಳಿಸಿದರು.

ಕರ್ನಾಟಕ ರಾಜ್ಯ ವಾಲಿಬಾಲ್ ಅಸೋಸಿಯೇಷನ್ ಕಾರ್ಯದರ್ಶಿ ಆಂಟನಿ ಜೋಸೆಫ್ ಮಾತನಾಡಿ, ವಾಲಿಬಾಲ್ ಕ್ರೀಡೆಯನ್ನು ತಾಲೂಕು, ಹೋಬಳಿ, ಶಾಲೆ, ಕಾಲೇಜು ಮಟ್ಟಕ್ಕೆ ತೆಗೆದುಕೊಂಡು ಹೋಗುವುದು ರಾಜ್ಯ ವಾಲಿಬಾಲ್ ಸಂಸ್ಥೆಯ ಗುರಿಯಾಗಿದೆ. ಅದಕ್ಕಾಗಿ ಸಂಸ್ಥೆಯ ವಾರ್ಷಿಕ ಚಟುವಟಿಕೆಗೆ ಈ ಅಂಶವನ್ನು ಸೇರ್ಪಡೆಗೊಳಿಸಲಾಗುತ್ತಿದೆ ಎಂದರು.

ವಾಲಿಬಾಲ್‌ನಲ್ಲಿ ಭಾರತ ತಂಡವನ್ನು ಪ್ರತಿನಿಧಿಸಿದ ಮೈಸೂರಿನ ಮಾಜಿ ಆಟಗಾರರಾದ ಹೇಮಲತಾ, ತೇಜಸ್ವಿನಿ ಜತ್ತಿ, ಹನಿ ಮುದ್ದಯ್ಯ, ಪವಿತ್ರಾಗೌಡ ಅವರು ಜಿಲ್ಲೆಯಲ್ಲಿ ಜೂನಿಯರ್ ನ್ಯಾಷನಲ್ ಕ್ಯಾಂಪ್ ಅನ್ನು ಮೈಸೂರಿನಲ್ಲಿಯೇ ಆಯೋಜಿಸಬೇಕೆಂದು ಮನವಿ ಮಾಡಿದ್ದಾರೆ. ಅಲ್ಲದೇ ರಾಜ್ಯ ಮಟ್ಟದಲ್ಲಿ ಪ್ರೊ ವಾಲಿ ಲೀಗ್ ನಡೆಸುವಂತೆ ಜಿಲ್ಲಾ ಮಟ್ಟದಲ್ಲಿಯೂ ಪ್ರೊ ವಾಲಿಲೀಗ್ ಪಂದ್ಯಗಳನ್ನು ಆಯೋಜಿಸಲಾಗುವುದು ಎಂದು ತಿಳಿಸಿದರು.

ಹೊಸ ನಿಯಮದಂತೆ 60 ವರ್ಷ ಮೇಲ್ಪಟ್ಟವರಿಗೆ ಅಸೋಸಿಯೇಷನ್‌ನಲ್ಲಿ ಅವಕಾಶವಿರುವುದಿಲ್ಲ. ಒಮ್ಮೆ ಆಯ್ಕೆಯಾದವರಿಗೆ ಪುನರಾಯ್ಕೆಗೆ ಅವಕಾಶ ನೀಡುವುದಿಲ್ಲ ಈ ರೀತಿ ಕಟ್ಟುನಿಟ್ಟಿನ ನಿಯಮಗಳನ್ನು ಪಾಲನೆ ಮಾಡಲಾಗುವುದು ಎಂದು ವಿವರಿಸಿದರು. ಸಭೆಯಲ್ಲಿ ಹಿರಿಯ ವಾಲಿಬಾಲ್ ತರಬೇತುದಾರರಾದ ಕೃಷ್ಣೇಗೌಡ, ಪರಮೇಶ್ವರ್, ಕಾರ್ಯಕ್ರಮ ಆಯೋಜಕರಾದ ಲೋಹಿತ್‌ಗೌಡ, ಆಕಾಶ್, ಸಿದ್ದೇಶ್ ಗೌಡ ಮತ್ತಿತರರು ಉಪಸ್ಥಿತರಿದ್ದರು.

ನಾಳೆ ವಿಶೇಷ ಸ್ವಾತಿ ಪೂಜೆ

ಮೈಸೂರು,ನ.16–ನಗರದ ಕಾಳಿದಾಸ ರಸ್ತೆಯಲ್ಲಿರುವ ಇತಿಹಾಸ ಪ್ರಸಿದ್ಧ ಶ್ರೀ ಯದುಗಿರಿ ಯತಿರಾಜ ಮಠ, ಮೈಸೂರು ಶಾಖೆಯ ಶ್ರೀ ಲಕ್ಷ್ಮೀನರಸಿಂಹಸ್ವಾಮಿ ದೇವಸ್ಥಾನದಲ್ಲಿ ನ.18ರಂದು ಮಂಗಳವಾರ ಸ್ವಾತಿ ನಕ್ಷತ್ರದ ಪ್ರಯುಕ್ತ ವಿಶೇಷ ಪೂಜೆ ಆಯೋಜಿಸಲಾಗಿದೆ. ಅಂದು ಬೆಳಿಗ್ಗೆ 8ಕ್ಕೆ ಸಂಕಲ್ಪ, 9ಕ್ಕೆ ಅಭಿಷೇಕ, 10.30ಕ್ಕೆ ಅಲಂಕಾರ, 11.30ಕ್ಕೆ ಮಹಾ ಮಂಗಳಾರತಿ, ಮಧ್ಯಾಹ್ನ 12.30ಕ್ಕೆ ಶಾತ್ತುಮೊರೈ, 1 ಗಂಟೆಗೆ ತೀರ್ಥ ಪ್ರಸಾದ ವಿನಿಯೋಗ ಏರ್ಪಡಿಸಲಾಗಿದೆ. ಸಂಜೆ 7.30ಕ್ಕೆ ಪ್ರಾಕಾರೋತ್ಸವ ಹಮ್ಮಿಕೊಳ್ಳಲಾಗಿದೆ ಎಂದು ದೇವಸ್ಥಾನದ ಮುಖ್ಯಸ್ಥ ವಿದ್ವಾನ್ ಯೋಗಾನರಸಿಂಹನ್ (ಮುರಳಿ ಅಯ್ಯಂಗಾರ್) ತಿಳಿಸಿದ್ದಾರೆ. ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಸ್ವಾಮಿಯ ಕೃಪೆಗೆ ಪಾತ್ರರಾಗಬೇಕೆಂದು ಕೋರಿದ್ದಾರೆ. ಮಾಹಿತಿಗೆ ಮೊ.9342188323, 7598832271 ಸಂಪರ್ಕಿಸಬಹುದು.

ಇಂದಿನಿಂದ ಜೆಎಸ್‌ಎಸ್ ಫಾರ್ಮಸಿ ಕಾಲೇಜಲ್ಲಿ ಸುಸ್ಥಿರ ಮಿದುಳು ಆರೋಗ್ಯ ಕುರಿತು ಸಮ್ಮೇಳನ

ಮೈಸೂರು,ನ.16(ಜಿಎ)–ಜೆಎಸ್‌ಎಸ್ ಫಾರ್ಮಸಿ ಕಾಲೇಜು ವತಿಯಿಂದ ನ.17ರಿಂದ 19ರವರೆಗೆ ಕಾಲೇಜಿನ ರಾಜೇಂದ್ರ ಸಭಾಂಗಣದಲ್ಲಿ ಸುಸ್ಥಿರ ಮಿದುಳಿನ ಆರೋಗ್ಯ ಕುರಿತ ಅಂತಾರಾಷ್ಟ್ರೀಯ ಸಮ್ಮೇಳನ ಆಯೋಜಿಸಲಾಗಿದೆ ಎಂದು ಪ್ರಾಚಾರ್ಯ ಡಾ.ಟಿ.ಎಂ.ಪ್ರಮೋದ್‌ಕುಮಾರ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನ.17ರಂದು ಬೆಳಗ್ಗೆ 10 ಗಂಟೆಗೆ ಉದ್ಘಾಟನೆ ನೆರವೇರಲಿದ್ದು, ಜೆಎಸ್‌ಎಸ್ ಎಎಚ್‌ಇಆರ್ ಕುಲಪತಿ ಡಾ.ಹೆಚ್.ಬಸವನಗೌಡಪ್ಪ ಅಧ್ಯಕ್ಷತೆ ವಹಿಸುವರು. ಮುಖ್ಯ ಅತಿಥಿಗಳಾಗಿ ಪಾಂಡಿಚೇರಿ ವಿಶ್ವವಿದ್ಯಾನಿಲಯದ ಕುಲಪತಿ ಡಾ.ಪಿ.ಪ್ರಕಾಶ್ ಬಾಬು ಆಗಮಿಸಲಿದ್ದಾರೆ. ಗೌರವ ಅತಿಥಿಗಳಾಗಿ ಸೆಂಟರ್ ಫಾರ್ ಬ್ರೈನ್ ರಿಸರ್ಚ್‌ನ ನಿರ್ದೇಶಕ ಡಾ.ಕೆ.ವಿ.ಎಸ್.ಹರಿ, ಎಫ್‌ಡಿಎಸ್‌ಟಿ ವಿಜ್ಞಾನಿ ಡಾ.ಜಿ.ಹರೀಶ್‌ಕುಮಾರ್, ಸೆಂಟ್ ಹಾಲ್ ವಿವಿಯ ನಿರ್ದೇಶಕ ಡಾ.ಸುಲೀ ಎಲ್.ಚಾಂಗ್, ಡಾ. ಬಿಕಾಶ್ ಮೇಧಿ, ಜೆಎಸ್‌ಎಸ್ ಫಾರ್ಮಸಿ ಕಾಲೇಜಿನ ಪ್ರಾಂಶುಪಾಲ ಡಾ.ಎಸ್.ಪಿ.ಧನಬಾಲ್ ಆಗಮಿಸಲಿದ್ದಾರೆ ಎಂದರು.

ಸಮ್ಮೇಳನದಲ್ಲಿ ಮಿದುಳಿನ ಬಗ್ಗೆ ಸಂಶೋಧನೆ ನಡೆಸುತ್ತಿರುವ ಸುಮಾರು 20 ಮಂದಿ ಅಂತಾರಾಷ್ಟ್ರೀಯ ತಜ್ಞರು, 200 ಮಂದಿ ಪ್ರತಿನಿಧಿಗಳು ಪಾಲ್ಗೊಳ್ಳಲಿದ್ದಾರೆ. ಇಲ್ಲಿ ಮಿದುಳು ಮತ್ತು ಮಾನಸಿಕ ಆರೋಗ್ಯ ಸಂಶೋಧನೆಯ ಇತ್ತೀಚಿನ ಪ್ರಗತಿಗಳು, ಡಿಜಿಟಲ್ ಯುಗದಲ್ಲಿ ಮಾನಸಿಕ ಆರೋಗ್ಯಕ್ಕೆ ಎದುರಾಗಿರುವ ಸವಾಲು, ಕ್ಲಿನಿಕಲ್ ಹಾಗೂ ಪ್ರಯೋಗಾತ್ಮಕ ಕ್ಷೇತ್ರದ ಬೆಳವಣಿಗೆ, ಮಿದುಳಿನ ಆರೋಗ್ಯದ ಮೇಲೆ ಮೊಬೈಲ್, ಡಿಜಿಟಲ್ ಕ್ರಾಂತಿಯಿಂದ ಆಗುತ್ತಿರುವ ಪರಿಣಾಮಗಳ ಚರ್ಚೆ ನಡೆಯಲಿದೆ. ಜೊತೆಗೆ ಪೋಸ್ಟರ್ ಪ್ರಸೆಂಟೇಷನ್ ಸಹ ಇರಲಿದೆ. ಯುವ ಸಂಶೋಧಕರು ಇದನ್ನು ನಡೆಸಿಕೊಡಲಿದ್ದಾರೆ ಎಂದರು. ಸುದ್ದಿಗೋಷ್ಠಿಯಲ್ಲಿ ಡಾ.ಸರವಣ ಬಾಬು ಚಿದಂಬರಂ, ಡಾ.ಕೆಎಲ್.ಕೃಷ್ಣ, ಡಾ.ಎ.ಎಂ.ಮಹಾಲಕ್ಷ್ಮಿ ಉಪಸ್ಥಿತರಿದ್ದರು.

ಮೀಸಲಾತಿ ಪಡೆದ ವಿದ್ಯಾರ್ಥಿಗಳ ಮಾಹಿತಿ ಸಂಗ್ರಹಕ್ಕೆ 8 ನೋಡಲ್ ಅಧಿಕಾರಿಗಳ ನೇಮಕ

ಮೈಸೂರು, ನ.16(ಎಸ್‌ಪಿಎನ್)– ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ವ್ಯಾಪ್ತಿಗೊಳಪಡುವ ಇಲಾಖೆ, ಮಂಡಳಿ, ಕಚೇರಿಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಬೋಧಕ, ಬೋಧಕೇತರರು ಮತ್ತು ಶಿಕ್ಷಣದಲ್ಲಿ ಮೀಸಲಾತಿ ಪಡೆದಿರುವ ವಿದ್ಯಾರ್ಥಿಗಳ ಬಗ್ಗೆ ಮಾಹಿತಿ ಸಂಗ್ರಹಿಸಲು ಶಾಲಾ ಶಿಕ್ಷಣ ಇಲಾಖೆಯ ವಿವಿಧ ಹಂತದ 8 ಅಧಿಕಾರಿಗಳನ್ನು ನೋಡೆಲ್ ಅಧಿಕಾರಿಯನ್ನಾಗಿ ನೇಮಿಸಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ.

ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವಾಲಯದ ಅಧೀನ ಕಾರ್ಯದರ್ಶಿ (ಸಾಮಾನ್ಯ), ಆಯುಕ್ತರ ಕಚೇರಿಯ ಜಂಟಿ ನಿರ್ದೇಶಕ(ಆಡಳಿತ), ಆಯುಕ್ತರ ಕಚೇರಿಯ ಜಂಟಿ ನಿರ್ದೇಶಕ (ಆಡಳಿತ)ರು, ಆಯುಕ್ತರ ಕಚೇರಿ ಪದವಿ ಪೂರ್ವ ಶಿಕ್ಷಣ ಇಲಾಖೆ ಜಂಟಿ ನಿರ್ದೇಶಕರು (ಆಡಳಿತ), ಕರ್ನಾಟಕ ರಾಜ್ಯ ಮೌಲ್ಯಮಾಪನ ಮತ್ತು ಪರೀಕ್ಷಾ ಮಂಡಳಿ ನಿರ್ದೇಶಕರ ಕಚೇರಿಯ ಉಪನಿರ್ದೇಶಕರು, ಮುದ್ರಣ, ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳ ಇಲಾಖೆ ನಿರ್ದೇಶಕರ ಕಚೇರಿ ಸಹಾಯಕ ನಿರ್ದೇಶಕರು (ಆಡಳಿತ) ಇವರನ್ನು ನೋಡಲ್ ಅಧಿಕಾರಿಗಳಾಗಿ ನೇಮಿಸಿದ್ದು, ತಮ್ಮ ಕಚೇರಿ ವ್ಯಾಪ್ತಿಯಲ್ಲಿರುವ ಬೋಧಕ ಹಾಗ ಬೋಧಕೇತರ ವಿವಿಧ ಪ್ರವರ್ಗಗಳ ಸೇರಿದ ಗ್ರೂಫ್–ಎ,ಬಿ,ಸಿ ಮತ್ತು ಡಿ ವೃಂದವಾರು ಮಾಹಿತಿ ಹಾಗೂ ವಿದ್ಯಾರ್ಥಿಗಳ ಮಾಹಿತಿಯನ್ನು ಕ್ರೋಢೀಕರಿಸಿ ಸಲ್ಲಿಸುವಂತೆ ಶಾಲಾ ಶಿಕ್ಷಣ ಇಲಾಖೆ ಮತ್ತು ಸಾಕ್ಷರತಾ ಇಲಾಖೆಯ ಅಧೀನ ಕಾರ್ಯದರ್ಶಿ(ಸಾಮಾನ್ಯ) ಪ್ರಕಾಶ್ ಸುತ್ತೋಲೆ ಹೊರಡಿಸಿದ್ದಾರೆ.

ದುಷ್ಕರ್ಮಿಗಳ ಗುಂಡೇಟಿಗೆ ಆರ್‌ಎಸ್‌ಎಸ್ ನಾಯಕನ ಪುತ್ರ ಬಲಿ



ಫಿರೋಜ್‌ಪುರ: ಆರ್‌ಎಸ್‌ಎಸ್ ನಾಯಕನ ಪುತ್ರನನ್ನು ಮೋಟಾರ್ ಸೈಕಲ್‌ನಲ್ಲಿ ಬಂದ ಇಬ್ಬರು ಅಪರಿಚಿತ ದುಷ್ಕರ್ಮಿಗಳು ಗುಂಡಿಕ್ಕಿ ಕೊಂದಿದ್ದಾರೆ ಎಂದು ಪೊಲೀಸರು ಭಾನುವಾರ ತಿಳಿಸಿದ್ದಾರೆ. ಸಂತ್ರಸ್ತನನ್ನು ನವೀನ್ ಅರೋರಾ (32) ಎಂದು ಗುರುತಿಸಲಾಗಿದೆ ಎಂದು ಅವರು ತಿಳಿಸಿದ್ದಾರೆ.

ಮೂಲಗಳ ಪ್ರಕಾರ, ನವೀನ್ ಅವರ ತಂದೆ ಬಲದೇವ್ ರಾಜ್ ಅರೋರಾ ಕಳೆದ ಹಲವು ವರ್ಷಗಳಿಂದ ರಾಷ್ಟ್ರೀಯ ಸ್ವಯಂಸೇವಕ ಸಂಘ (ಆರ್‌ಎಸ್‌ಎಸ್)ನೊಂದಿಗೆ ಸಂಬಂಧ ಹೊಂದಿದ್ದರು. ಶನಿವಾರ ನವೀನ್ ಅವರು ತಮ್ಮ ಅಂಗಡಿಯಿಂದ ಡಾ.ಸಾಧು ಚಂದ್ ಚೌಕ್ ಬಳಿಯಿರುವ ತಮ್ಮ ನಿವಾಸಕ್ಕೆ ನಡೆದುಕೊಂಡು ಹೋಗುತ್ತಿದ್ದಾಗ ಈ ಘಟನೆ ಸಂಭವಿಸಿದೆ.

ಮೋಟಾರ್ ಸೈಕಲ್‌ನಲ್ಲಿ ಬಂದ ಇಬ್ಬರು ಅಪರಿಚಿತ ಯುವಕರು ನವೀನ್ ಮೇಲೆ ಪಾಯಿಂಟ್–ಬ್ಲಾಂಕ್ ದೂರದಿಂದ ಗುಂಡು ಹಾರಿಸಿ ಪರಾರಿಯಾಗಿದ್ದಾರೆ. ನಂತರ ನವೀನ್‌ನನ್ನು ಖಾಸಗಿ ಆಸ್ಪತ್ರೆಗೆ ಸಾಗಿಸಲಾಯಿತಾದರೂ, ಆವೇಳೆಗಾಗಲೇ ಅವರು ಮೃತಪಟ್ಟಿರುವುದಾಗಿ ವೈದ್ಯರು ತಿಳಿಸಿದ್ದಾರೆ.

ಎಲ್ಲಾ ಆಯಾಮಗಳಲ್ಲೂ ಕನ್ನಡ ಮುಂಚೂಣಿಯಲ್ಲಿದೆ ಎಂಬುದಕ್ಕೆ ಅತೀ ಹೆಚ್ಚು ಜ್ಞಾನಪೀಠ ಪ್ರಶಸ್ತಿ ಬಂದಿರುವುದೇ ಸಾಕ್ಷಿ

ಶಾಸಕ ಟಿ.ಎಸ್.ಶ್ರೀವತ್ಸ ಅಭಿಮತ



ಮೈಸೂರಿನ ಕುವೆಂಪುನಗರದಲ್ಲಿರುವ ತಪೋನಂದನ ಪಾರ್ಕ್‌ನಲ್ಲಿ ಕನ್ನಡ ರಾಜ್ಯೋತ್ಸವ ಆಚರಿಸಲಾಯಿತು.

ಮೈಸೂರು,16(ಎಂಕೆ)– ಎಲ್ಲಾ ಆಯಾಮಗಳಲ್ಲಿಯೂ ಕನ್ನಡ ಭಾಷೆ ಮುಂಚೂಣಿಯಲ್ಲಿದೆ ಎಂಬುದಕ್ಕೆ ಅತಿ ಹೆಚ್ಚು ಜ್ಞಾನಪೀಠ ಪ್ರಶಸ್ತಿಗಳು ಬಂದಿರುವುದೇ ಸಾಕ್ಷಿಯಾಗಿದೆ ಎಂದು ಶಾಸಕ ಟಿ.ಎಸ್.ಶ್ರೀವತ್ಸ ಹೇಳಿದರು.

ಮೈಸೂರಿನ ಕುವೆಂಪುನಗರದಲ್ಲಿರುವ ತಪೋನಂದನ ಪಾರ್ಕ್‌ನಲ್ಲಿ ತಪೋನಂದನ ಉದ್ಯಾನ ಬಳಗದ ವತಿಯಿಂದ ಆಯೋಜಿಸಿದ್ದ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ನಾಡಿನೆಲ್ಲೆಡೆ ಕನ್ನಡ ರಾಜ್ಯೋತ್ಸವವನ್ನು ಅತ್ಯಂತ ಸಡಗರ, ಸಂಭ್ರಮದಿಂದ ಆಚರಿಸಲಾಗುತ್ತದೆ. ನಮ್ಮ ಭಾಷೆಯ ಶ್ರೀಮಂತಿಕೆಯನ್ನು ಪರಿಚಯಿಸುವ ಹಾಗೂ ಇದಕ್ಕಾಗಿ ಕೆಲಸ ಮಾಡಿದವರನ್ನು ಸ್ಮರಿಸಲಾಗುತ್ತದೆ ಎಂದು ಹೇಳಿದರು.

ಕನ್ನಡ ಭಾಷೆಗೆ ಧಕ್ಕೆಯಾದರೇ ಕನ್ನಡಿಗರು ಸಹಿಸುವುದಿಲ್ಲ ಎಂಬುದಕ್ಕೆ ಕೆಲ ತಿಂಗಳ ಹಿಂದೆ ಖ್ಯಾತ ನಟರೊಬ್ಬರ ಹೇಳಿಕೆ ವಿರುದ್ಧ ಇಡೀ ಕನ್ನಡ ನಾಡು ಒಕ್ಕೊರಲಿನಿಂದ ಪ್ರತಿಭಟಿಸಿದ ನಿದರ್ಶನವನ್ನು ಮರೆಯುವಂತಿಲ್ಲ. ಹಾಗೆಯೇ ದೇಶದಲ್ಲಿ ಇತ್ತೀಚೆಗೆ ಆಗಬಾರದ ಘಟನಗೆಳೆಲ್ಲಾ ಆಗುತ್ತಿವೆ. ನಮ್ಮ ನಂಬಿಕೆಗಳ ಮೇಲೆ ಗದಾಪ್ರಹಾರ ಮಾಡಲಾಗುತ್ತಿದೆ. ರೈತರು ಬೆಳೆದ ಕಬ್ಬಿಗೆ ಸರಿಯಾದ ಬೆಲೆ ಸಿಗುತ್ತಿಲ್ಲ. ಹತ್ತಾರು ಸಮಸ್ಯೆಗಳಿದ್ದು, ಅವುಗಳಿಗೆ ಪರಿಹಾರ ಹುಡುಕಬೇಕಾಗಿದೆ ಎಂದರು.

ಸಾರ್ವಜನಿಕ ಶಿಕ್ಷಣ ಇಲಾಖೆಯ ನಿವೃತ್ತ ಜಂಟಿ ನಿರ್ದೇಶಕ ಎ.ಎಸ್.ರಾಮಪ್ಪ ಮಾತನಾಡಿ, ಒಂದರಿಂದ ಐದನೇ ತರಗತಿವರಿಗೆ ಕಡ್ಡಾಯವಾಗಿ ಮಾತೃ ಭಾಷೆಯಲ್ಲಿ ಶಿಕ್ಷಣ ನೀಡುತ್ತಿಲ್ಲ. ಶಿಕ್ಷಣ ಇವತ್ತು ವ್ಯಾಪಾರೀಕರಣವಾಗಿದೆ. ಒಂದು ಭಾಷೆಯಾಗಿ ಇಂಗ್ಲಿಷ್ ಕಲಿಯಲು ನಮ್ಮ ವಿರೋಧ ಇಲ್ಲ. ಆದರೆ ಮಾಧ್ಯಮವಾಗಿ ಐದನೇ ತರಗತಿವರೆಗೆ ಮಾತೃಭಾಷೆಯಲ್ಲಿಯೇ ಕಲಿಯಬೇಕು ಎಂದು ಆಗ್ರಹಿಸಿದರು.

ಮಾಜಿ ಮೇಯರ್ ಶಿವಕುಮಾರ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಹಿರಿಯರಾದ ರಾಮಕೃಷ್ಣೇಗೌಡ, ಕನ್ನಡ ಹೋರಾಟಗಾರ ಮೂಗೂರು ನಂಜುಂಡಸ್ವಾಮಿ, ರಂಗಾಂತರಂಗದ ಎಂ.ಜೆ.ಗೌರಿ, ಪುರುಷೋತ್ತಮ, ನೆರಳು ಚಾರಿಟಬಲ್ ಟ್ರಸ್ಟ್ ಗೌರವಾಧ್ಯಕ್ಷ ಎಂ.ಮೋಹನ್, ಮೈಸೂರು ವಿವಿ ಗಾಂಧಿ ಭವನ ಉಪನ್ಯಾಸಕ ಡಾ.ಎಂ.ಡಿ.ಉಮೇಶ್ ಮತ್ತಿತರರಿದ್ದರು.

ಎಐ ಅಳವಡಿಕೆ ಕುರಿತ ಕಾರ್ಯಾಗಾರ



ಎಐ ಅಳವಡಿಕೆ ಕುರಿತು ಎಂಐಟಿ ಕ್ಯಾಂಪಸ್‌ನಲ್ಲಿ ಕಾರ್ಯಾಗಾರ ನಡೆಯಿತು.

ಮೈಸೂರು: ತಾಂಡವಪುರ ಮಹಾರಾಜ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಸಂಸ್ಥೆ ಹಾಗೂ ಅಡಾಪ್ಟ್ ಎಐ ಟೆಕ್ನಾಲಜೀಸ್ ಪ್ರೈ. ಲಿ. ಸಂಯುಕ್ತ ಆಶ್ರಯದಲ್ಲಿ ಉತ್ಪಾದನೆಗಾಗಿ ಎಐ ಅನ್ನು ಹೇಗೆ ಅಳವಡಿಸಿಕೊಳ್ಳುವುದು ವಿಷಯದ ಕುರಿತು ಎಂಐಟಿ ಕ್ಯಾಂಪಸ್‌ನ ಅಭಿನಂದನ್ ವರ್ಧಮಾನ್ ಸಭಾಂಗಣದಲ್ಲಿ ಕಾರ್ಯಾಗಾರ ಆಯೋಜಿಸಲಾಗಿತ್ತು.

ಅಧ್ಯಕ್ಷತೆ ವಹಿಸಿದ್ದ ತಾಂಡವಪುರ ಎಂಐಟಿ ಪ್ರಿನ್ಸಿಪಾಲ್ ಡಾ.ವೈ.ಟಿ.ಕೃಷ್ಣೇಗೌಡ ಮಾತನಾಡಿ, ಕೈಗಾರಿಕೆ, ಶೈಕ್ಷಣಿಕ ಸಂಸ್ಥೆಗಳ ಸಹಕಾರದ ಮಹತ್ವ, ಅನುಭವಾಧಾರಿತ ಕಲಿಕೆಯ ಪ್ರಾಮುಖ್ಯತೆ ವಿವರಿಸಿದರು. ತಾತ್ವಿಕ ಜ್ಞಾನವನ್ನು ಕೈಗಾರಿಕಾ ಅನುಭವದೊಂದಿಗೆ ಸಂಪರ್ಕಗೊಳಿಸುವುದು ಇಂದಿನ ತಾಂತ್ರಿಕ ಯುಗದ ಬೇಡಿಕೆಯನ್ನು ಪೂರೈಸಲು ಅತ್ಯವಶ್ಯಕವೆಂದರು.

ನಾಗರಾಜ ಗರ್ಗೇಶ್ವರಿ ಮಾತನಾಡಿ, ಎಂಜಿನಿಯರಿಂಗ್ ಕ್ಷೇತ್ರದಲ್ಲಿ ತಾಂತ್ರಿಕ ಪದಗಳ ಮಹತ್ವವನ್ನು ವಿವರಿಸಿದರಲ್ಲದೆ, ಕಂಪ್ಯೂಟರ್‌ಗಳ ಅಭಿವೃದ್ಧಿಯ ಹಾದಿ, ವಿಜ್ಞಾನ ಮತ್ತು ತಂತ್ರಜ್ಞಾನಗಳ ನಡುವಿನ ವ್ಯತ್ಯಾಸಗಳ ಬಗ್ಗೆ ಮಾತನಾಡಿ, ವಿಜ್ಞಾನವೆಂದರೆ ಹೊಸದೇನನ್ನಾದರೂ ಕಂಡುಹಿಡಿಯುವುದು. ತಂತ್ರಜ್ಞಾನವೆಂದರೆ ಅದನ್ನು ಮಾನವ ಕುಲದ ಒಳಿತಿಗೆ ಬಳಸುವುದು ಎಂದು ಅರ್ಥಪೂರ್ಣವಾಗಿ ವಿವರಿಸಿದರು.

ಡಾ.ಜಯ ಭರತೀಶ ಸಿಂಹ ಮಾತನಾಡಿ, ಕೃತಕ ಬುದ್ಧಿಮತ್ತೆ ಮಾನವ ಕೆಲಸವನ್ನು ಕಸಿದುಕೊಳ್ಳುವ ತಂತ್ರಜ್ಞಾನವಲ್ಲ. ಬದಲಾಗಿ ಅದು ಮಾನವ ಸಾಮರ್ಥ್ಯವನ್ನು ವೃದ್ಧಿಸುವ ಒಂದು ಸಾಧನವೆಂದು ಹೇಳಿದರು. ಮಹಾರಾಜ ಎಜುಕೇಶನ್ ಟ್ರಸ್ಟ್ ಸಂಯುಕ್ತ ಕಾರ್ಯದರ್ಶಿ ಡಾ.ಎಚ್.ಕೆ.ಚೇತನ ಉಪಸ್ಥಿತರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

17.11.2025 ಸೋಮವಾರ, ಮಳೆ ನಕ್ಷತ್ರ: ವಿಶಾಖ, 6.11.2025ರಿಂದ 19.11.2025 ವಿಶ್ವಾವಸು ನಾಮ ಸಂವತ್ಸರ, ದಕ್ಷಿಣಾಯನ, ಶರದ್ ಋತು, ಕಾರ್ತಿಕ ಮಾಸ, ಕೃಷ್ಣ ಪಕ್ಷ, ತಿಥಿ: ತ್ರಯೋ., ನಕ್ಷತ್ರ: ಚಿತ್ರ, ರಾಹುಕಾಲ: ಬೆಳಗ್ಗೆ 7.30ರಿಂದ 9ರವರೆಗೆ

- **ಶ್ರೀ ಮಲೆಮಹದೇಶ್ವರ ಸ್ವಾಮಿ ದೇವಸ್ಥಾನ ಟ್ರಸ್ಟ್:** 48ನೇ ವರ್ಷದ ಕಾರ್ತಿಕ ಮಾಸದ ಶ್ರೀ ಮಲೆಮಹದೇಶ್ವರ ಸ್ವಾಮಿ ಜಾತ್ರಾ ಮಹೋತ್ಸವ. 27ನೇ ವರ್ಷದ ಮಹಾ ಕುಂಭಾಭಿಷೇಕ ಮತ್ತು 11ನೇ ವರ್ಷದ ಹಾಲರವಿ ಉತ್ಸವ. ಬೆಳಗ್ಗೆ 6 ಗಂಟೆಗೆ ಶ್ರೀಸ್ವಾಮಿಗೆ ಮಹಾರುದ್ರಾಭಿಷೇಕ ಮತ್ತು ವಿಶೇಷ ಪೂಜೆ. ಸಂಜೆ 7 ಗಂಟೆಗೆ ಶ್ರೀ ಸ್ವಾಮಿಯ ಹುಲಿ ವಾಹನ ಮತ್ತು ಸುವರ್ಣ ಕೊಳಗದ ಮೆರವಣಿಗೆ. ಸ್ಥಳ: ದೇವಸ್ಥಾನದ ಪ್ರಾಂಗಣ, ಗರಡಿಕೇರಿ, ಲಷ್ಕರ್ ಮೊಹಲ್ಲಾ. ಅಂಧ ಮತ್ತು ಮೂಕ ಮಕ್ಕಳ ಶಾಲೆಯಲ್ಲಿ ಭೋಜನ ವ್ಯವಸ್ಥೆ.
- **ಶ್ರೀ ನಾಮದೇವ ಸಿಂಪಿ ಸಮಾಜ, ಶ್ರೀ ಪಾಂಡುರಂಗ ಶ್ರೀ ವಿಠ್ಠಲ–ರುಕ್ಮಾಯಿ ದೇವಸ್ಥಾನ:** ಕಾರ್ತಿಕ ಸೋಮವಾರದ ಪೂಜಾ ಮಹೋತ್ಸವ. ಬೆಳಗ್ಗೆ 6.30ರಿಂದ ಪ್ರತ್ಯೇಕ ಸಂಕಲ್ಪ, ಅರ್ಚನೆ. ಶ್ರೀ ಗಣಪತಿ, ಶ್ರೀ ಸತ್ಯನಾರಾಯಣ ಸ್ವಾಮಿ, ಶ್ರೀ ವಿಠ್ಠಲ–ರುಕ್ಮಾಯಿ, ನವಗ್ರಹ ದೇವರಿಗೆ ಕ್ಷೀರಾಭಿಷೇಕ, ಪಂಚಾಮೃತ ಅಭಿಷೇಕ. ಲೋಕ ಕಲ್ಯಾಣಾರ್ಥವಾಗಿ ಶ್ರೀ ಗಣಪತಿ ಹೋಮ, ನವಗ್ರಹ ಹೋಮ, ಮಹಾ ಮೃತ್ಯುಂಜಯ ಹೋಮ, ರುದ್ರ ಹೋಮ, ಪೂರ್ಣಾಹುತಿ, ಮಹಾಮಂಗಳಾರತಿ. ತ್ರಿಶತಿ ಅರ್ಚನೆ, ಸಾಂಬಸದಾಶಿವ ಮೂರ್ತಿಗೆ 250 ಕೆ.ಜಿ. ಹಣ್ಣಿನಿಂದ ಫಲಾಭಿಷೇಕ. ಸಂಜೆ 6.15ಕ್ಕೆ ಕಾರ್ತಿಕ ಲಕ್ಷ ದೀಪೋತ್ಸವ. ಸಂತ ಶಿರೋಮಣಿ ಶ್ರೀ ನಾಮದೇವ ಮಹಾರಾಜರ 755ನೇ ವರ್ಷದ ಜಯಂತ್ಯೋತ್ಸವ. ಸ್ಥಳ: ದೇವಾಲಯದ ಪ್ರಾಂಗಣ, ವಿವೇಕಾನಂದನಗರ.
- **ಶ್ರೀ ವೀರಭದ್ರೇಶ್ವರ ಸ್ವಾಮಿ ಹಾಗೂ ಶ್ರೀಚಾಮರಾಜೇಶ್ವರ ಸ್ವಾಮಿ ದೇವಸ್ಥಾನ ಟ್ರಸ್ಟ್:** ಕಾರ್ತಿಕ ಮಾಸದ ವಿಶೇಷ ಪೂಜಾ ಮಹೋತ್ಸವ, ಅಗ್ನಿ ಕೊಂಡೋತ್ಸವ ಮತ್ತು ಗಿರಿಜಾ ಕಲ್ಯಾಣ ಕಾರ್ಯಕ್ರಮ. 4ನೇ ಕಾರ್ತಿಕ ಸೋಮವಾರ. ಬೆಳಗ್ಗೆ 7 ಗಂಟೆಗೆ ಶ್ರೀವೀರಭದ್ರೇಶ್ವರ ಸ್ವಾಮಿ ಹಾಗೂ ಶ್ರೀ ಚಾಮರಾಜೇಶ್ವರ ಸ್ವಾಮಿಗೆ ತೈಲಾಭಿಷೇಕ, ಪಂಚಾಮೃತಾಭಿಷೇಕ, ಮಹಾರುದ್ರಾಭಿಷೇಕ ಮತ್ತು ಸಹಸ್ರ ಬಿಲ್ವಾರ್ಚನೆ, ಮಹಾಮಂಗಳಾರತಿ. ಶ್ರೀ ಚಾಮರಾಜೇಶ್ವರ ಸ್ವಾಮಿಗೆ ಪ್ರೀತ್ಯರ್ಥವಾಗಿ ಗಿರಿಜಾ ಕಲ್ಯಾಣ ಮಹೋತ್ಸವ. ಸಂಜೆ 7 ಗಂಟೆಗೆ ಶಾಲ್ಯನ್ನ ಅಲಂಕಾರ, ಒಳ ಆವರಣದಲ್ಲಿ ಉತ್ಸವ. ಸ್ಥಳ: ದೇವಸ್ಥಾನದ ಆವರಣ, ಡಿ.ಬನುಮಯ್ಯ ರಸ್ತೆ, ಕೆ.ಆರ್.ಮೊಹಲ್ಲಾ.
- **ಶ್ರೀ ನನ್ನೇಶ್ವರ ಸ್ವಾಮಿ ದೇವರ ಕಲ್ಯಾಣಿ(ಕೊಳ) ಮತ್ತು ಹಿನಕಲ್ ಗ್ರಾಮದ ಅಭಿವೃದ್ಧಿ ಸಮಿತಿ:** ಕಡೇ ಕಾರ್ತಿಕ ಸೋಮವಾರದ ಅಂಗವಾಗಿ ಲಕ್ಷ ದೀಪೋತ್ಸವ. ಸ್ಥಳ: ದೇವಸ್ಥಾನದ ಆವರಣ, ಹಿನಕಲ್. ಸಂಜೆ 7 ಗಂಟೆಗೆ
- **ಶ್ರೀ ಶ್ರೀ ಆವನಿ ಶೃಂಗೇರಿ ಜಗದ್ಗುರು ಶಂಕರಾಚಾರ್ಯ ಮಹಾಸಂಸ್ಥಾನಂ (ಶ್ರೀ ಆವನಿ ಶೃಂಗೇರಿ ಮಠ, ಮೈಸೂರು ಶಾಖೆ):** ಶ್ರೀ ವಿಶ್ವಾವಸು ನಾಮ ಸಂವತ್ಸರ–2025, ಕಾರ್ತಿಕ ಮಾಸದ ವಿಶೇಷ ಪೂಜೆ. ಬೆಳಗ್ಗೆ 8 ಗಂಟೆಗೆ ಮಹಾ ಸಂಕಲ್ಪ, ಅಭಿಷೇಕ ಮತ್ತು ವಿಶೇಷ ಪೂಜೆ, ಮಹಾಮಂಗಳಾರತಿ. ಸಂಜೆ 6.30ಕ್ಕೆ ಗಮಕ ವಿದುಷಿ ಶ್ರೀಮತಿ ದಾಕ್ಷಾಯಿಣಿ ಮತ್ತು ಗಮಕ ವ್ಯಾಖ್ಯಾತೃ ಡಾ. ನಿರಂಜನ್ ಅವರಿಂದ ವಾಚನ ವ್ಯಾಖ್ಯಾನ. ವಿಷಯ: 'ಶಿವಭಕ್ತಿ ಇಳೆಯಾಂಡ ಗುಡಿಮಾರ'. ರಾತ್ರಿ 8.15ಕ್ಕೆ ದೀಪಾರಾಧನೆ, ಮಹಾಮಂಗಳಾರತಿ, ತೀರ್ಥಪ್ರಸಾದ ವಿನಿಯೋಗ. ಸ್ಥಳ: ಮಠದ ಆವರಣ, ವಿದ್ಯಾರಣ್ಯಪುರಂ.
- **ರಾಮ್‌ಸನ್ಸ್ ಬೊಂಬೆ ಮನೆ:** ದಸರೆಯ ಬೊಂಬೆ ಪ್ರದರ್ಶನದ 21ನೇ ಅವತರಣಿಕೆ. ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ. ಬೆಳಗ್ಗೆ 10 ರಿಂದ.

ಮೈಸೂರು ಆಕಾಶವಾಣಿ




ಬೆಳಗ್ಗೆ: 6.10–ಚಿಂತನ–ಮುನಿರಾಜ ರೆಂಜಾಳ, 6.15–ಗೀತಾ ರಾಧನ, 6.35 ಮತ್ತು ಸಂಜೆ 6.10: ಸಸ್ಯ ಸಿರಿ ಮನೆಯಂಗಳದಲ್ಲಿರುವ ಔಷಧೀಯ ಸಸ್ಯಗಳು, ಪ್ರಸ್ತುತಿ: ಡಾ.ಟಿ.ಶಿವಕುಮಾರ್, 6.40–ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ: ಎಂ.ಆರ್. ಸುಧಾ, ವ್ಯಾಖ್ಯಾನ –ಡಾ.ಲತಾ ಮೈಸೂರು, 6.50–ರೈತರಿಗೆ ಸಲಹೆ, 7.15 ಭಾವಗೀತೆಗಳು, 7.45 ಚಿತ್ರಗೀತೆಗಳು, 8.30 ಚಿತ್ರಗೀತೆಗಳು, 9.00 ನೆನಪಿನಂಗಳ (ಧ್ವನಿ ಭಂಡಾರದಿಂದ) ನೆನಪಿನಂಗಳ (ಧ್ವನಿ ಭಂಡಾರದಿಂದ) 1974ರ ನವೆಂಬರ್ 14ರಂದು ಪುನರ್ ಪ್ರಾರಂಭಗೊಂಡ ಮೈಸೂರು ಆಕಾಶವಾಣಿ ಕೇಂದ್ರದ ಉದ್ಘಾಟನಾ ಸಮಾರಂಭದ ಅವತರಣಿಕೆಯ ಧ್ವನಿ ಮುದ್ರಣ. 10.00 ಕರ್ನಾಟಕ ಶಾಸ್ತ್ರೀಯ ಸಂಗೀತ ಡೆಲ್ಲಿ ವಿ.ಮುತ್ತುಕುಮಾರ್–ಹಾಡುಗಾರಿಕೆ, 10.30 ಹಿಂದಿ ಚಿತ್ರಗೀತೆಗಳು, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ –ಗೇಮ್ ಷೋ, ಪ್ರಸ್ತುತಿ: ದಿಗ್ವಿಜಯ್.ಬಿ, 12.05 ವನಿತಾ ವಿಹಾರ, 12.35 ದೇವರನಾಮ, 12.45 ನಮ್ಮ ಆರೋಗ್ಯ ಮೈಯೋಸೈಟಿಸ್ ಲಕ್ಷಣಗಳು ಮತ್ತು ಚಿಕಿತ್ಸೆ ಕುರಿತು ತಿಳಿಸಿಕೊಡಲಿದ್ದಾರೆ ಮೈಸೂರಿನ ಜೆಎಸ್‌ಎಸ್ ಮೆಡಿಕಲ್ ಕಾಲೇಜು ಮತ್ತು ಆಸ್ಪತ್ರೆಯ ಸಂಧಿವಾತ ವಿಭಾಗದ ಸಹಾಯಕ ಪ್ರಾಧ್ಯಾಪಕರಾದ ಡಾ. ಮಹಬಲೇಶ್ವರ ಮಮದಾಪುರ. ಇವರೊಂದಿಗೆ ಭಾಗವಹಿಸುತ್ತಾರೆ: ಬೇದ್ರೆ ಮಂಜುನಾಥ, 1.00 ಪ್ರಗತಿ ಪಥ, ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು, ಸಂಧ್ಯಾ ಎಂ. ಎ., 2.30 ಪ್ರದೇಶ ಸಮಾಚಾರ, 2.40 ಚಿತ್ರಗೀತೆಗಳು, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ: ಚಿತ್ರ ಶ್ರೀಕೃಷ್ಣ–ಹಾಡುಗಾರಿಕೆ, 4.00 ಮಹಿಳಾರಂಗ–ಮಹಿಳಾರಂಗ–ನನ್ನ ಹಕ್ಕು ನನ್ನ ಜವಾಬ್ದಾರಿ –ಮಹಿಳಾ ಕಾನೂನು ಜಾಗೃತಿ ಕಾರ್ಯಕ್ರಮ. ಭಾಗವಹಿಸುತ್ತಾರೆ–ಮಹಿಳಾ ಮತ್ತು ಮಕ್ಕಳ ಹಕ್ಕುಗಳ ವಕೀಲರಾದ ಅಂಜಲಿ ರಾಮಣ್ಣ. ಪ್ರಸ್ತುತಿ–ಸಹನಾ, 4.30 ಹಿಂದಿ ಚಿತ್ರಗೀತೆಗಳು, 4.45 ಹಿಂದಿ ಪಾಠ ಪ್ರಸ್ತುತಿ : ಸ್ಮಿತಾ ಚಿಪ್ಳೂಣ್ಕರ್, 5.00 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.50 ಕೃಷಿರಂಗ: ಕೃಷಿರಂಗ: ಕೃಷಿ ದೀವಿಗೆ ಸಂಶೋಧನಾ ಸಂಸ್ಥೆಯೊಂದಿಗೆ ಕೃಷಿ ಕಲಿಕೆ ಕುರಿತ ಬಾನುಲಿ ಸರಣಿ ಕಾರ್ಯಕ್ರಮ. ಸಮಗ್ರ ಕೃಷಿ ಪದ್ಧತಿಗಳನ್ನ ಕುರಿತು ಸಂವಾದ. ಭಾಗವಹಿಸುತ್ತಾರೆ –ಮಂಡ್ಯದ ವಿ.ಸಿ.ಫಾರಂ ಕೃಷಿ ಮಹಾವಿದ್ಯಾಲಯದ ಪ್ರಾಧ್ಯಾಪಕರಾದ ಎಸ್.ಬಿ.ಯೋಗಾನಂದ ಮತ್ತು ಸಹಾಯಕ ಪ್ರಾಧ್ಯಾಪಕರಾದ ಡಾ.ಜೆ.ಸಿ.ಬೊಮ್ಮೇಶ್. ಪ್ರಸ್ತುತಿ–ಎನ್.ಕೇಶವಮೂರ್ತಿ, 7.45 ಕನ್ನಡ ಚಿತ್ರಗೀತೆಗಳು, 8.00 ಯುವವಾಣಿ: ಯುವ ಕೊಳಲುವಾದಕ ಶ್ರೀನಿಧಿ ಶಿರೂರು ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ ದಿಗ್ವಿಜಯ್.ಬಿ, 8.30–ಹಿಂದಿ ಚಿತ್ರಗೀತೆಗಳು, 9.30 ಕರ್ನಾಟಕ ಶಾಸ್ತ್ರೀಯ ಸಂಗೀತ : ಎಂ.ಕೆ.ಸರಸ್ವತಿ – ವೀಣಾವಾದನ, 10.00–ನಿನಾದ: ವೈಣಿಕ ವಾಗ್ಗೇಯ ವಾಹಿನಿ. 10.30 ಸವಿನೆನಪು.

- **ಕಾವೇರಿ ಆಯುರ್ವೇದ ಆಸ್ಪತ್ರೆ:** ಪಿಸಿಓಡಿ ಮತ್ತು ಮಕ್ಕಳಲ್ಲಿ ಕಂಡು ಬರುವ ಚರ್ಮರೋಗಕ್ಕೆ ಉಚಿತ ತಪಾಸಣೆ ಮತ್ತು ಚಿಕಿತ್ಸೆ. ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್ ಹತ್ತಿರ, ಕೆಬಿಎಲ್ ಲೇಔಟ್. ಬೆಳಗ್ಗೆ 10ರಿಂದ.
- **ಜೆಎಸ್‌ಎಸ್ ಕಾಲೇಜ್ ಆಫ್ ಫಾರ್ಮಸಿ, ಜೆಎಸ್‌ಎಸ್ ಅಕಾಡೆಮಿ ಆಫ್ ಹೈಯರ್ ಎಜುಕೇಷನ್ ಅಂಡ್ ರಿಸರ್ಚ್, ಮೈಸೂರು:** ಸುಸ್ಥಿರ ಮೆದುಳಿನ ಆರೋಗ್ಯ ಕುರಿತು ಅಂತರರಾಷ್ಟ್ರೀಯ ಸಮ್ಮೇಳನ, ಸೋಷಿಯಾಲಿಟಿ ಫಾರ್ ನ್ಯೂರೋ ಕೆಮಿಸ್ಟ್ರೀ ಕುರಿತು 39ನೇ ವಾರ್ಷಿಕ ಸಭೆ. ಸ್ಥಳ: ಶ್ರೀ ರಾಜೆಂದ್ರ ಆಡಿಟೋರಿಯಂ, ಕಾಲೇಜು ಆವರಣ. ಬೆಳಗ್ಗೆ 10ಕ್ಕೆ
- **ಜೆಎಸ್‌ಎಸ್ ಅಕಾಡೆಮಿ ಆಫ್ ಹೈಯರ್ ಎಜುಕೇಷನ್ ಅಂಡ್ ರಿಸರ್ಚ್, ಮೈಸೂರು. ಪೌಷ್ಟಿಕಾಂಶ ಮತ್ತು ಆಹಾರ ಪದ್ಧತಿ ವಿಭಾಗ:** ಕ್ರೀಡಾ ಪೋಷಣೆ ನಾವೀನ್ಯತೆ ಪ್ರದರ್ಶನ. ಸ್ಥಳ ಕಾಲೇಜು ಆವರಣ. ಬೆಳಗ್ಗೆ 11.30ಕ್ಕೆ.
- **ಶ್ರೀ ರಾಘವೇಂದ್ರಸ್ವಾಮಿ ಸೇವಾ ಸಮಿತಿ:** ಪ್ರವಚನ: ಪಂಡಿತ್ ವ್ಯಾಸತೀರ್ಥಚಾರ್ಯ ಅವರಿಂದ. ವಿಷಯ: 'ಮಹಾಭಾರತ ತಾತ್ಪರ್ಯ ನಿರ್ಣಯ'. ಸ್ಥಳ: ಮಠದ ಆವರಣ, ಜಯಲಕ್ಷ್ಮೀಪುರಂ. ಸಂಜೆ 5 ಗಂಟೆಗೆ.
- **ಶ್ರೀ ಸಂಗಮೇಶ್ವರ ದೇವಸ್ಥಾನ:** ಕಾರ್ತಿಕ ಮಾಸ ಸೋಮವಾರಗಳಂದು ವಿಶೇಷ ಪೂಜಾ ಮಹೋತ್ಸವ, ಶರಣ ಚಿಂತನೆ. ಸಾನ್ನಿಧ್ಯ: ತಿ.ನರಸೀಪುರ ತಾಲೂಕು ಮುಡುಕುತೊರೆಯ ಶ್ರೀಕಲ್ಮಠದ ಶ್ರೀ ನಂದಿಕೇಶ್ವರ ಸ್ವಾಮಿಗಳು. ಉದ್ಘಾಟನೆ ಮತ್ತು ಪ್ರವಚನ: ಹುಣಸೂರು ಡಿ.ದೇವರಾಜ ಅರಸು ಸರ್ಕಾರಿ ಪದವಿ ಕಾಲೇಜಿನ ಪ್ರಾಧ್ಯಾಪಕ ಪ್ರೊ. ಬಿ.ವಿ.ವಸಂತಕುಮಾರ್. ವಿಷಯ: ಅಲ್ಲಮನ ಅನುಭಾವದ ನೆಲೆಗಳು. ಸ್ಥಳ: ಶ್ರೀ ನಟರಾಜ ಸಭಾ ಭವನ, ಶ್ರೀ ಹೊಸಮಠ, ಉಪನ್ಯಾಸ 7 ಗಂಟೆಗೆ, ಮಹಾಪ್ರಸಾದ ರಾತ್ರಿ 8 ಗಂಟೆಗೆ.

ಸಹಕಾರ ಕ್ಷೇತ್ರದಿಂದ ರೈತರು, ಬಡವರು ಸಂಕಷ್ಟದಿಂದ ಪಾರು

ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳದ ಅಧ್ಯಕ್ಷರೂ ಆದ ಶಾಸಕ ಜಿ.ಟಿ.ದೇವೇಗೌಡ ಅಭಿಮತ





ಮಂಗಳೂರಿನಲ್ಲಿ ನಡೆದ 72ನೇ ಅಖಿಲ ಭಾರತ ಸಹಕಾರ ಸಪ್ತಾಹ ಕಾರ್ಯಕ್ರಮವನ್ನು ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳದ ಅಧ್ಯಕ್ಷರೂ ಆದ ಶಾಸಕ ಜಿ.ಟಿ.ದೇವೇಗೌಡ, ವಿಧಾನಸಭಾಧ್ಯಕ್ಷ ಯು.ಟಿ.ಖಾದರ್ ಇನ್ನಿತರ ಗಣ್ಯರು ದೀಪ ಬೆಳಗಿಸಿ, ಉದ್ಘಾಟಿಸಿದರು. ಕಾರ್ಯಕ್ರಮದ ಸ್ಥಳಕ್ಕೆ ಸಹಕಾರ ಮಹಾಮಂಡಳದ ಅಧ್ಯಕ್ಷ ಜಿಟಿಡಿ ಅವರನ್ನು ಮೆರವಣಿಗೆಯಲ್ಲಿ ಕರೆತಂದಿದ್ದನ್ನು ಬಲಚಿತ್ರದಲ್ಲಿ ಕಾಣಬಹುದು.

ಮೈಸೂರು, ನ.16– ಸಹಕಾರ ಬ್ಯಾಂಕ್‌ಗಳ ಸ್ಥಾಪನೆಯಿಂದಾಗಿ ಗ್ರಾಮೀಣ ಪ್ರದೇಶದಲ್ಲಿ ರೈತರು ಹಾಗೂ ಬಡವರು ಖಾಸಗಿ ವ್ಯಕ್ತಿಗಳ ಸಾಲದ ಸುಳಿಯಿಂದ ಹೊರಬಂದಿದ್ದಾರೆ ಎಂದು ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳದ ಅಧ್ಯಕ್ಷರೂ ಆದ ಶಾಸಕ ಜಿ.ಟಿ.ದೇವೇಗೌಡ ಹೇಳಿದರು.

ಮಂಗಳೂರಿನಲ್ಲಿ ನಡೆದ 72ನೇ ಅಖಿಲ ಭಾರತ ಸಹಕಾರ ಸಪ್ತಾಹ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಸಹಕಾರ ಬ್ಯಾಂಕ್‌ಗಳ ಸ್ಥಾಪನೆಗೂ ಹಿಂದೆ ರೈತರು ಹಾಗೂ ಬಡವರು ಖಾಸಗಿ ವ್ಯಕ್ತಿಗಳಿಂದ ಸಾಲ ಮಾಡಿ, ಅದಕ್ಕೆ ಜೀವನವಿಡೀ ಬಡ್ಡಿ–ಚಕ್ರಬಡ್ಡಿ ಕಟ್ಟುವ ಶೋಚನೀಯ ಸ್ಥಿತಿಯಿದ್ದರು. ಸಾಲದಿಂದ ಶೋಷಣೆಗೆ ಒಳಗಾಗುತ್ತಿದ್ದರು. ಆದರೆ ಸಹಕಾರ ಕ್ಷೇತ್ರವು ಬಡವರನ್ನು ಸಂಕಷ್ಟದಿಂದ ಪಾರು ಮಾಡುತ್ತಿದೆ ಎಂದರು.

ದೇಶದ ಪ್ರಥಮ ಪ್ರಧಾನಮಂತ್ರಿ ಪಂಡಿತ್ ಜವಾಹರಲಾಲ್ ನೆಹರು ಅವರ ಹುಟ್ಟುಹಬ್ಬದ ಅಂಗವಾಗಿ ನ.14ರಿಂದ 20ರವರೆಗೆ ದೇಶದಾದ್ಯಂತ ಸಹಕಾರ ಸಪ್ತಾಹ ನಡೆಸಲಾಗುತ್ತದೆ. ನ.14ರಂದು ಬೆಂಗಳೂರಿನಲ್ಲಿ ಸಪ್ತಾಹಕ್ಕೆ ಚಾಲನೆ ನೀಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಸಹಕಾರ ಕ್ಷೇತ್ರದ ಹಲವು ಬೇಡಿಕೆಗಳನ್ನು ಈಡೇರಿಸುವ ಭರವಸೆ ನೀಡಿದ್ದಾರೆ. 1995ರಲ್ಲಿ ಮುಖ್ಯಮಂತ್ರಿಯಾಗಿದ್ದ ಹೆಚ್.ಡಿ.ದೇವೇಗೌಡರಿಂದ ರಾಮನಗರದ ಅಂಕನಹಳ್ಳಿಯಲ್ಲಿ ಸಹಕಾರ ಸಪ್ತಾಹ ಉದ್ಘಾಟನೆ ಮಾಡಿಸಿದ ನಂತರದಿಂದ ಚುನಾಯಿತ ಪ್ರತಿನಿಧಿಗಳು ಭಾಗವಹಿಸಿ, ಚಿಂತನ–ಮಂಥನ ನಡೆಸುವ ಸಂಪ್ರದಾಯ ಆರಂಭವಾಯಿತು ಎಂದು ತಿಳಿಸಿದರು.

> ರಾಜ್ಯದಲ್ಲಿ ನಿತ್ಯ ಒಂದು ಕೋಟಿ ಲೀಟರ್‌ಗೂ ಹೆಚ್ಚು ಹಾಲು ಉತ್ಪಾದನೆಯಾಗುತ್ತಿದ್ದು, ಸುಮಾರು 30 ಕೋಟಿ ರೂ. ಹಾಲು ಉತ್ಪಾದಕರ ಕೈ ಸೇರುತ್ತಿದೆ. ಹಾಲು ಉತ್ಪಾದನೆಯಲ್ಲಿ ಮೊದಲ ಸ್ಥಾನದಲ್ಲಿರುವ ಗುಜರಾತ್‌ನಲ್ಲಿ ನಿತ್ಯ ಎರಡೂ ವರೆ ಕೋಟಿ ಲೀಟರ್ ಸೇರಿದಂತೆ ದೇಶದಲ್ಲಿ ಐದು ಕೋಟಿ ಲೀಟರ್‌ಗೂ ಹೆಚ್ಚು ಹಾಲು ಉತ್ಪಾದನೆ ಆಗುತ್ತದೆ. ಇದು ಸಹಕಾರ ಕ್ಷೇತ್ರದ ಸಾಧನೆಗೆ ಸಾಕ್ಷಿಯಾಗಿದೆ.
> – ಜಿ.ಟಿ.ದೇವೇಗೌಡ, ಶಾಸಕ


ಮಂಗಳೂರು ಭಾಗದಲ್ಲಿ ಪ್ರತಿ ಮನೆಗೂ ಸಹಕಾರ ಕ್ಷೇತ್ರ ತಲುಪಿದೆ. ಪಟ್ಟಣ ಸಹಕಾರಿ ಬ್ಯಾಂಕುಗಳು ಮತ್ತು ಕ್ರೆಡಿಟ್ ಬ್ಯಾಂಕುಗಳು ಬೀದಿ ವ್ಯಾಪಾರಿಗಳಿಗೆ, ವಿದ್ಯಾರ್ಥಿಗಳಿಗೆ ಕಡಿಮೆ ಬಡ್ಡಿದರದಲ್ಲಿ ಸಾಲ ನೀಡುತ್ತಿವೆ. ಇತ್ತೀಚೆನ ವರ್ಷಗಳಲ್ಲಿ ಸಹಕಾರ ಕ್ಷೇತ್ರದಲ್ಲಿ ಮಹಿಳೆಯರ ಪಾಲ್ಗೊಳ್ಳುವಿಕೆ ಹೆಚ್ಚಾಗಿದೆ.

ಈ ಭಾಗದ ಹಿರಿಯ ಸಹಕಾರ ಧುರೀಣರಾದ ರಾಜೇಂದ್ರ ಕುಮಾರ್ ಅವರು ನವೋದಯ ಸ್ವಸಹಾಯ ಸಂಘದ ಮೂಲಕ ಮಹಿಳೆಯರಿಗೆ ನೆರವಾಗಿದ್ದಾರೆ. ಶ್ರೀ ಧರ್ಮಸ್ಥಳ ಟ್ರಸ್ಟ್ ಕೂಡ ಮಹಿಳೆಯರು ಸೇರಿದಂತೆ ಗ್ರಾಮೀಣ ಅಭಿವೃದ್ಧಿಗೆ ನೆರವಾಗುತ್ತಿದೆ ಎಂದು ಸಂತಸ ವ್ಯಕ್ತಪಡಿಸಿದರು.

ಬ್ಯಾಂಕುಗಳನ್ನು ಪ್ರಾರಂಭಿಸಿದವರು ಮಂಗಳೂರಿನವರು. ಹಾಗಾಗಿ ಸಹಕಾರ ಕ್ಷೇತ್ರವನ್ನು ಗಟ್ಟಿಯಾಗಿ ಉಳಿಸಿ, ಬೆಳೆಸಿದ್ದಾರೆ. ಕುಂಬಾರಿಕೆ, ಮೀನುಗಾರಿಕೆ, ನೇಕಾರಿಕೆ ಕೃಷಿ, ತೋಟಗಾರಿಕೆ, ಕೈಗಾರಿಕೆ ಹೀಗೆ ಪ್ರತಿಯೊಂದು ವೃತ್ತಿಗೂ ಸಹಕಾರ ಕ್ಷೇತ್ರ ನೆರವಾಗುತ್ತಿದೆ. ಒಂದು ಗಂಟೆಯಲ್ಲಿ ಚಿನ್ನದ ಮೇಲೆ ಸಾಲ ಸಿಗುವಂತಹ ವ್ಯವಸ್ಥೆ ಇದೆ. ಯು.ಟಿ. ಖಾದರ್ ಪ್ರತಿನಿಧಿಸುವ ಈ ಕ್ಷೇತ್ರದಲ್ಲಿ ಎಲ್ಲಾ ಕೋಮಿನವರೂ ಸಾಮರಸ್ಯದಿಂದ ಸಹಕಾರ ಕ್ಷೇತ್ರದ ಮೂಲಕ ಸಮಾಜವನ್ನು ಸದೃಢಗೊಳಿಸುತ್ತಿದ್ದಾರೆ. ಸಹಕಾರ ಕ್ಷೇತ್ರದಿಂದ ಬಹಳಷ್ಟು ಮಂದಿ ನಾಯಕರಾಗಿ ಬೆಳೆದಿದ್ದಾರೆ. 1970ರಲ್ಲಿ ಸಹಕಾರ ಸಂಘದ ಕಾರ್ಯದರ್ಶಿಯಾಗಿದ್ದ ನಾನು ಈ ಹಂತಕ್ಕೆ ಬೆಳೆದಿರುವುದೇ ನಿದರ್ಶನ ಎಂದರು.

ಕಾರ್ಯಕ್ರಮದಲ್ಲಿ ವಿಧಾನಸಭಾಧ್ಯಕ್ಷರಾದ ಯು.ಟಿ.ಖಾದರ್, ರಾಜ್ಯ ಮಾರಾಟ ಮಹಾಮಂಡಳದ ಅಧ್ಯಕ್ಷರೂ ಆದ ದಕ್ಷಿಣ ಕನ್ನಡ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ಅಧ್ಯಕ್ಷ ಎಂ.ಎನ್.ರಾಜೇಂದ್ರ ಕುಮಾರ್, ಶಾಸಕರಾದ ವೇದವ್ಯಾಸ್ ಕಾಮತ್, ಯಶ್‌ಪಾಲ್ ಸುವರ್ಣ, ವಿಧಾನ ಪರಿಷತ್ ಸದಸ್ಯರಾದ ಐವಾನ್ ಡಿಸೋಜ, ಮಂಜುನಾಥ್ ಭಂಡಾರಿ, ಸಹಕಾರ ಇಲಾಖೆ ನಿಬಂಧಕ ಕುಮಾರ್, ಉಡುಪಿ ಜಿಲ್ಲಾ ಸಹಕಾರ ಯೂನಿಯನ್ ಅಧ್ಯಕ್ಷ ಜಯಕರ ಶೆಟ್ಟಿ ಇಂದ್ರಾಳಿ ಮತ್ತಿತರರು ಪಾಲ್ಗೊಂಡಿದ್ದರು.

ಪರಿಸರ ಜಾಗೃತಿ ಚಿತ್ರಕಲಾ ಸ್ಪರ್ಧೆ



ಮಕ್ಕಳ ದಿನಾಚರಣೆ ಅಂಗವಾಗಿ 'ಪರಿಸರ ಜಾಗೃತಿ ಕುರಿತ ಚಿತ್ರಕಲಾ ಸ್ಪರ್ಧೆ' ನಡೆಸಲಾಯಿತು.

ಮೈಸೂರು,16(ಎಂಕೆ)– ಮೈಸೂರಿನ ಕುವೆಂಪುನಗರದ ವಿಶ್ವಮಾನವ ಜೋಡಿ ರಸ್ತೆ ಸಮೀಪದಲ್ಲಿರುವ ಸುಮಸೋಪಾನ ಉದ್ಯಾನವನವನದಲ್ಲಿ ಮಕ್ಕಳ ದಿನಾಚರಣೆ ಅಂಗವಾಗಿ ಹೆಚ್.ವಿ.ರಾಜೀವ್ ಸ್ನೇಹ ಬಳಗದ ವತಿಯಿಂದ 10 ರಿಂದ 14 ವರ್ಷದೊಳಗಿನ ಮಕ್ಕಳಿಗೆ 'ಪರಿಸರ ಜಾಗೃತಿ ಕುರಿತ ಚಿತ್ರಕಲಾ ಸ್ಪರ್ಧೆ' ನಡೆಸಲಾಯಿತು.

ನಗರದ ವಿವಿಧ ಶಾಲೆಗಳಿಂದ ಆಗಮಿಸಿದ್ದ 150ಕ್ಕೂ ಹೆಚ್ಚು ಮಕ್ಕಳು ಪರಿಸರ ಸಂರಕ್ಷಣೆ, ಪರಿಸರ ನಾಶಕ್ಕೆ ಕಾರಣಗಳೇನು, ಸಾಲು ಮರದ ತಿಮ್ಮಕ್ಕ ಅವರ ಪರಿಸರ ಪ್ರೀತಿ, ಪರಿಸರ ಮಾಲಿನ್ಯದಿಂದಾಗುತ್ತಿರುವ ಹವಾಮಾನ ವೈಪರಿತ್ಯ ಕುರಿತಾದ ಆಕರ್ಷಕ ಚಿತ್ರಗಳನ್ನು ಬಿಡಿಸಿ ಜನಜಾಗೃತಿ ಮೂಡಿಸಿದರು. ಇದಕ್ಕೂ ಮುನ್ನ ಮೌನಾಚರಣೆ ಮೂಲಕ ವೃಕ್ಷಮಾತೆ ಸಾಲುಮರದ ತಿಮ್ಮಕ್ಕ ಅವರಿಗೆ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಸಂಜೆ ವೇಳೆ ನಡೆದ ವೇದಿಕೆ ಕಾರ್ಯಕ್ರಮದಲ್ಲಿ ಚಿತ್ರಕಲಾ ಸ್ಪರ್ಧೆಯಲ್ಲಿ ವಿಜೇತರಾದ ಮಕ್ಕಳಿಗೆ ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್ ಬಹುಮಾನ ವಿತರಿಸಿದರು. ಬಳಿಕ ಮಾತನಾಡಿದ ಅವರು, ಮಕ್ಕಳಲ್ಲಿ ಪರಿಸರ ಜಾಗೃತಿ ಮೂಡಿಸುವುದು ಅತ್ಯಂತ ಅವಶ್ಯವಾಗಿದೆ. ಈ ನಿಟ್ಟಿನಲ್ಲಿ ಚಿತ್ರಕಲಾ ಸ್ಪರ್ಧೆಯನ್ನು ಪ್ರತೀ ವರ್ಷವೂ ಆಯೋಜನೆ ಮಾಡಲಾಗುತ್ತಿದೆ ಎಂದು ತಿಳಿಸಿದರು. ಹೆಚ್.ವಿ. ರಾಜೀವ್ ಸ್ನೇಹ ಬಳಗದ ಆರ್. ಕುಮಾರ್(ಹುಡ್ಕೋ) ಮತ್ತಿತರರಿದ್ದರು.



ಪಕ್ಷಕ್ಕೆ ಬ್ಲ್ಯಾಕ್‌ಮೇಲ್ ಮಾಡುವ ವ್ಯಕ್ತಿ ನಾನಲ್ಲ; ಕೆಪಿಸಿಸಿ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡಲ್ಲ

ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್

ನವದೆಹಲಿ, ನ.16– ನಾನು ಯಾವುದೇ ಕಾರಣಕ್ಕೂ ಕಾಂಗ್ರೆಸ್ ಪಕ್ಷಕ್ಕೆ ಬ್ಲಾಕ್‌ಮೇಲ್ ಮಾಡುವ ವ್ಯಕ್ತಿಯಲ್ಲ. ಕೆಪಿಸಿಸಿ ಅಧ್ಯಕ್ಷ ಸ್ಥಾಮಕ್ಕೆ ರಾಜೀನಾಮೆ ನೀಡುವುದಿಲ್ಲ. ಮಾಧ್ಯಮಗಳು ಯಾವುದೇ ಗಾಳಿ ಸುದ್ದಿಯನ್ನು ಪ್ರಕಟಿಸಬೇಡಿ ಎಂದು ಡಿಸಿಎಂ ಡಿಕೆ ಶಿವಕುಮಾರ್ ಹೇಳಿದ್ದಾರೆ.



ದೆಹಲಿಯಲ್ಲಿ ಇಂದು ಮಾಧ್ಯಮಗಳ ಜೊತೆ ಮಾತನಾಡಿದ ಅವರು, ಎಲ್ಲಿಯ ತನಕ ಕಾಂಗ್ರೆಸ್ ಪಕ್ಷ ಯಾವ ಸ್ಥಾನದಲ್ಲಿ ಕೆಲಸ ಮಾಡು ಎನ್ನುತ್ತದೋ ಅಲ್ಲಿಯವರೆಗೆ ನಾನು ಒಬ್ಬ ಶಿಸ್ತಿನ ಸಿಪಾಯಿ ತರ ಕೆಲಸ ಮಾಡುತ್ತೇನೆ. ಹಗಲು ರಾತ್ರಿ ಪಕ್ಷ ಕಟ್ಟಿ ಕೆಲಸ ಮಾಡಿದ್ದೇನೆ. ಪಕ್ಷಕ್ಕೆ ದುಡಿದಿದ್ದೇನೆ, ಮುಂದಕ್ಕೂ ಕಟ್ಟುತ್ತೇನೆ. ಮುಂದೆಯೂ ನಮ್ಮ ಪಕ್ಷ ಅಧಿಕಾರಕ್ಕೆ ಬರಲಿದೆ ಇದಕ್ಕೆ ಏನು ಮಾಡಬೇಕೋ ಮಾಡುತ್ತೇನೆ. ನಾನೇಕೆ ಕೆಪಿಸಿಸಿ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ಕೊಡುತ್ತೇನೆ. ಆ ಸಂದರ್ಭ ಉದ್ಭವ ಆಗಿಲ್ಲ. ಸುಮ್ಮನೇ ಗಾಳಿ ಸುದ್ದಿ ಮಾಡಬೇಡಿ ಎಂದರು.

ಡಿಸೆಂಬರ್ ಒಳಗೆ ನೂರು ಕಾಂಗ್ರೆಸ್ ಕಚೇರಿಗಳಿಗೆ ಭೂಮಿ ಪೂಜೆ ಮಾಡಬೇಕಿದ್ದು, ಅದಕ್ಕೆ ದಿನಾಂಕ ನಿಗದಿಯಾಗಬೇಕಿದೆ. ಡಿಸೆಂಬರ್ 1 ಸಂಸತ್ ಅಧಿವೇಶನ ಶುರುವಾಗಲಿರುವುದರಿಂದ ಒಂದು ಶನಿವಾರ ಅಥವಾ ಭಾನುವಾರ ಬನ್ನಿ ಎಂದು ಕರೆಯಲು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರನ್ನು ಕರೆಯಲು ಬಂದಿದ್ದೇನೆ. ರಾಹುಲ್ ಗಾಂಧಿ ಮತ್ತು ಖರ್ಗೆ ಸಾಹೇಬರು ಬಂದು ಈ ಕಾರ್ಯ ಮಾಡಬೇಕು ಎನ್ನುವ ಆಸೆ ನನಗಿದೆ. 70 ರಿಂದ 80 ಕಡೆ ಜಾಗ ಸಿದ್ಧವಾಗಿದೆ ಎಂದು ಹೇಳಿದರು.

ಸಂಪುಟ ಪುನರ್ ರಚನೆ ವಿಚಾರ ಸಿಎಂ ಸಿದ್ದರಾಮಯ್ಯನವರ ಕರ್ತವ್ಯ ಮತ್ತು ಹೈಕಮಾಂಡ್ ಅವರಿಗೆ ಬಿಟ್ಟ ವಿಚಾರ. ನನ್ನನ್ನು ಕರೆದಾಗ ಹೋಗುತ್ತೇನೆ. ನಾನು ಖರ್ಗೆ ಅವರ ಬಳಿ ಈ ವಿಚಾರ ಚರ್ಚೆ ಮಾಡುವುದಿಲ್ಲ. ನಾನು ಸೀದ ಡೇಟ್ ಕೇಳಲು ಹೋಗುತ್ತಿದ್ದೇನೆ ಎಂದರು. ನಾಯಕತ್ವ ಬದಲಾವಣೆ ವಿಚಾರ ನೀವು ಚರ್ಚೆ ಮಾಡುತ್ತಿದ್ದೀರಿ. ನನ್ನಲ್ಲಿ, ಸಿದ್ದರಾಮಯ್ಯ, ಹೈಕಮಾಂಡ್ ಜೊತೆ ಎಲ್ಲೂ ಚರ್ಚೆ ನಡೆದಿಲ್ಲ ಎಂದು ತಿಳಿಸಿದರು.

ಸುತ್ತೂರು ಜಾತ್ರೆ: ಉಚಿತ ಸಾಮೂಹಿಕ ವಿವಾಹ

ಮೈಸೂರು,ನ.16–ಸುತ್ತೂರು ಶ್ರೀ ಕ್ಷೇತ್ರದಲ್ಲಿ ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಜಾತ್ರಾ ಮಹೋತ್ಸವವು ಜ.15ರಿಂದ 20ರವರೆಗೆ ನಡೆಯಲಿದ್ದು, ಇದರ ಅಂಗವಾಗಿ ಜ.16ರಂದು ಉಚಿತ ಸಾಮೂಹಿಕ ವಿವಾಹ ಏರ್ಪಡಿಸಲಾಗಿದೆ.

ಸಾಮೂಹಿಕ ವಿವಾಹದಲ್ಲಿ ಪಾಲ್ಗೊಳ್ಳಲು ಎಲ್ಲಾ ಸಮಾಜದ ವಧು–ವರರಿಗೂ ಮುಕ್ತ ಅವಕಾಶವಿರುತ್ತದೆ. ವಧುವಿಗೆ ಮಾಂಗಲ್ಯ, ಸೀರೆ, ಕುಪ್ಪಸ, ಕಾಲುಂಗುರಗಳನ್ನು ಹಾಗೂ ವರನಿಗೆ ಪಂಚೆ, ವಲ್ಲಿ, ಷರ್ಟ್‌ಗಳನ್ನು ನೀಡಲಾಗುತ್ತದೆ ವಿವಾಹವಾಗಬಯಸು ವವರು ಹೆಚ್ಚಿನ ವಿವರಗಳಿಗೆ ಜಾತ್ರಾ ಮಹೋತ್ಸವ ಕಾರ್ಯಾಲಯ ಅಥವಾ ಸಂಚಾಲಕರಾದ ಆರ್. ಕುಮಾರಸ್ವಾಮಿ, ಸಹ ಸಂಚಾಲಕರಾದ ವೀರಭದ್ರಯ್ಯ, ಸಿ. ಮಹದೇವಪ್ರಸಾದ್ ಅವರನ್ನು ದೂ. 0821–2548212, 9448674702, 9741342222 ಸಂಪರ್ಕಿಸಿ ನಿಗದಿತ ಅರ್ಜಿಯನ್ನು ಪಡೆಯಬಹುದಾಗಿದೆ. ಅರ್ಜಿಯಲ್ಲಿ ಪೂರ್ಣ ವಿವರಗಳನ್ನು ಭರ್ತಿ ಮಾಡಿ ಅಗತ್ಯ ದಾಖಲಾತಿಗಳೊಂದಿಗೆ ಡಿ.31 ರೊಳಗೆ ನೋಂದಾಯಿಸಿಕೊಳ್ಳಲು ಕೋರಲಾಗಿದೆ.

ಹಸಿರು ನಮ್ಮ ಉಸಿರು

ಸ್ಪರ್ಧಾತ್ಮಕ ಜಗತ್ತಿನಲ್ಲಿ ಇಂಗ್ಲೀಷ್ ಇನ್ನಿತರ ಭಾಷೆಗಳ ಕಲಿಕೆ ಅನಿವಾರ್ಯ

ರೈಲ್ವೆ ಕೋ ಆಪರೇಟಿವ್ ಬ್ಯಾಂಕ್ ನಿರ್ದೇಶಕ ಎಂ.ಬಿ.ಮಂಚೇಗೌಡ ಅಭಿಪ್ರಾಯ



ಕನ್ನಡ ರಾಜ್ಯೋತ್ಸವ ಹಾಗೂ ಮಕ್ಕಳ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಲಾಯಿತು.

> 18 ವರ್ಷ ಮೇಲ್ಪಟ್ಟ ಭಾವಗೀತೆ ಸ್ಪರ್ಧೆಯಲ್ಲಿ (ಸಿನಿಯರ್)ರಾಜಾ ಎಸ್.ವಿಜಯನಂದನ (ಪ್ರ), ಆರ್.ಸಾನ್ವಿ(ದ್ವಿ), ಪುಣ್ಯ(ತೃ), ರಕ್ಷ, ಎನ್.ನಂದಿ ಸಮಾಧಾನಕರ ಬಹುಮಾನ ಪಡೆದಿದ್ದಾರೆ. 18 ವರ್ಷದೊಳಗಿನ ಭಾವಗೀತೆ(ಜೂನಿಯರ್) ಸ್ಪರ್ಧೆಯಲ್ಲಿ ಎಸ್.ಅನುಷ್ಕಾ(ಪ್ರ), ಲಕ್ಷಣ(ದ್ವಿ), ಹಂಸಿನಿ, ಎಂ.ವಸಿಷ್ಟ(ತೃ), ಪವನಶ್ರೀ ಸಮಾಧಾನ ಬಹುಮಾನ ಪಡೆದರು.
>
> 2–5 ವರ್ಷದೊಳಗಿನ ವೇಷ ಭೂಷಣ ಸ್ಪರ್ಧೆಯಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್ ವೇಷಭೂಷಣದಲ್ಲಿ ಅಲೇಖ್ಯ (ಪ್ರ), ರೈತ ಮಹಿಳಾ ವೇಷಭೂಷಣದಲ್ಲಿ ಹಾರ್ವಿಕಾ(ದ್ವಿ), ಪ್ರತಿಕ್ಷಾ ನೇಸರ(ತೃ) ಸ್ಥಾನ ಪಡೆದು ಬಹುಮಾನ ಪಡೆದರು. 5–9 ವರ್ಷದೊಳಗಿನ ನವ್ರುತ(ಪ್ರ), ದೀಪಕ್(ದ್ವಿ), ಸುಚಿತಾ(ತೃ) ಹಾಗೂ ಪಿ.ಕುಶ್ವಿಲ್ಲಾ ಸಮಾಧಾನಕರ ಬಹಮಾನ ಪಡೆದರು.

ಮೈಸೂರು, ನ.16(ಎಸ್‌ಪಿಎನ್)–ಪ್ರಸ್ತುತ ಜಾಗತಿಕ ಸ್ಪರ್ಧಾ ಜಗತ್ತಿನಲ್ಲಿದ್ದೇವೆ. ಹಾಗಾಗಿ ಓದು ವ್ಯವಹಾರಕ್ಕಾಗಿ ಇಂಗ್ಲಿಷ್ ಇನ್ನಿತರೆ ಭಾಷೆಗಳನ್ನು ಕಲಿಯುವುದು, ಬಳಸುವುದು ಅನಿವಾರ್ಯವಾಗಿದೆ ಎಂದು ರೈಲ್ವೆ ಕೋ ಆಪರೇಟಿವ್ ಬ್ಯಾಂಕ್ ನಿರ್ದೇಶಕ ಎಂ.ಬಿ.ಮಂಚೇಗೌಡ ಅಭಿಪ್ರಾಯಪಟ್ಟರು.

ಮೈಸೂರಿನ ಜಯನಗರ(ಹೊಸ ಜಿಲ್ಲಾ ನ್ಯಾಯಾಲಯದ ಮುಂಭಾಗ)ದ ನೇಗಿಲಯೋಗಿ ಮರುಳೇಶ್ವರ ಸೇವಾ ಭವನದಲ್ಲಿ ಮೈಸೂರಿನ ನೇಗಿಲಯೋಗಿ ಸಮಾಜ ಸೇವಾ ಟ್ರಸ್ಟ್ ಮತ್ತು ನೇಗಿಲಯೋಗಿ ಮಹಿಳೆಯರ ಹಿತೈಷಿಗಳ ಸೇವಾ ಬಳಗ ಸಹಯೋಗದೊಂದಿಗೆ ಏರ್ಪಡಿಸಿದ್ದ ಕನ್ನಡ ರಾಜ್ಯೋತ್ಸವ ಹಾಗೂ ಮಕ್ಕಳ ದಿನಾಚರಣೆಯಲ್ಲಿ ಭಾಗವಹಿಸಿ ಮಾತನಾಡಿದರು.

ತಂತ್ರಜ್ಞಾನ ಆವಿಷ್ಕಾರಗೊಂಡಂತೆ ಉದ್ಯೋಗಾವಕಾಶಗಳು ಜಗತ್ತಿನೆಲ್ಲೆಡೆ ಸೃಷ್ಟಿಯಾಗುತ್ತಿವೆ. ಹಾಗಾಗಿ ಇಂಗ್ಲಿಷ್ ಜೊತೆಗೆ ಬೇರೆ ಕಲಿಕೆ ಅನಿವಾರ್ಯ. ಈ ಸತ್ಯವನ್ನು ಎಲ್ಲರೂ ಒಪ್ಪಿಕೊಳ್ಳೋಣ. ಆದರೆ, ನಮ್ಮ ಮಾತೃ ಭಾಷೆ ಕನ್ನಡ ನಮ್ಮ ಉಸಿರು ಮತ್ತು ಬದುಕಾಗಬೇಕು ಎಂದು ಹೇಳಿದರು.

ಕನ್ನಡ ದಿನಾಚರಣೆ ಮತ್ತು ಮಕ್ಕಳ ದಿನಾಚರಣೆ ಒಂದಕ್ಕೊಂದು ಅವಿನಾವಭಾವ ಸಂಬಂಧ ಹೊಂದಿದೆ. ಮಕ್ಕಳಿಗೆ ಈಗಿನಿಂದಲೇ ನಾಡು–ನುಡಿ, ಭಾಷೆ, ನೆಲ–ಜಲ ಕುರಿತು ಅಭಿಮಾನ ಮೂಡಿಸಲು ಇದು ಸಹಕಾರಿಯಾಗುತ್ತದೆ ಎಂದು ನುಡಿದರು. ಪೋಷಕರು ತಮ್ಮ ಮಕ್ಕಳಿಗೆ ಹಣ, ಆಸ್ತಿ ಕೂಡಿಟ್ಟು ಅವರ ಬದುಕನ್ನು ಉತ್ತಮ ಮಾಡುವ ಪ್ರಯತ್ನಕ್ಕಿಂತ ಉತ್ತಮ ಸಂಸ್ಕಾರವಂತ, ಆರೋಗ್ಯವಂತ ಮಕ್ಕಳನ್ನಾಗಿ ರೂಪಿಸಬೇಕು. ಅವರನ್ನೇ ನಮ್ಮ ಆಸ್ತಿಯನ್ನಾಗಿಸಬೇಕಿದೆ ಎಂದು ಸಲಹೆ ನೀಡಿದರು.

ಸರ್ಕಾರಿ ಪಿಯು ಕಾಲೇಜಿನ ಉಪನ್ಯಾಸಕ ಡಾ.ನೀ.ಗೂ.ರಮೇಶ್ ಮಾತನಾಡಿ, ಇಂಗ್ಲಿಷ್‌ಗೆ ಒಬ್ಬನೇ ವಿಲಿಯಂ ಶೇಕ್ಸ್‌ಪೀಯರ್, ಆದರೆ, ಕನ್ನಡ ನಾಡಿನಲ್ಲಿ ಷೇಕ್ಸ್‌ಪಿಯರ್‌ರನ್ನು ಮೀರಿಸುವ ಹಲವು ಸಾಹಿತಿಗಳಿದ್ದಾರೆ. ದೇಶದಲ್ಲಿಯೇ ಅತೀ ಹೆಚ್ಚು ಜ್ಞಾನ ಪೀಠ ಪ್ರಶಸ್ತಿಗಳನ್ನು ಪಡೆದ ಭಾಷೆ ಕನ್ನಡ ಮಾತ್ರ. ಅದು ನಮ್ಮ–ನಿಮ್ಮೆಲ್ಲರ ಹೆಗ್ಗಳಿಕೆ ಎಂದು ಹರ್ಷ ವ್ಯಕ್ತಪಡಿಸಿದರು.

ಕಾರ್ಯಕ್ರಮದಲ್ಲಿ ವೇಷಭೂಷಣ ಸ್ಪರ್ಧೆ, ಸಾಂಸ್ಕೃತಿಕ ಕಾರ್ಯಕ್ರಮ, ನೃತ್ಯ ಕಾರ್ಯಕ್ರಮ, ಪುನೀತ್ ರಾಜ್‌ಕುಮಾರ್ ಹಾಡುಗಳ ಗಾಯನ ಏಕಾಭಿನಯ ನಡೆಸಿಕೊಟ್ಟರು. ಸೇವಾ ಬಳಗದ ಸಂಚಾಲಕಿ ಶ್ರೀಮತಿ ಜಿಶೋಭ ಅಧ್ಯಕ್ಷತೆ ವಹಿಸಿದ್ದರು. ವೇದಿಕೆಯಲ್ಲಿ ಕನ್ನಡ ಉಪನ್ಯಾಸಕಿ ಡಾ.ಕೆ.ಮಾಲತಿ, ರವಿಕುಮಾರ್, ಡಯೆಟ್ ಉಪನ್ಯಾಸಕ ಶ್ಯಾಮೇಶ್ ಅತ್ತಿಗುಪ್ಪೆ, ಜಿಲ್ಲಾ ಆಸ್ಪತ್ರೆಯ ದಂತ ವೈದ್ಯೆ ಡಾ.ಮೀನಾ ಕುಮಾರಿ, ಮಹಿಳಾ ಮುಖಂಡರಾದ ರಾಣಿ ಮಹೇಶ್, ವಿಜಯಲಕ್ಷ್ಮೀ ಇತರೆ ಪದಾಧಿಕಾರಿಗಳು ಉಪಸ್ಥಿತರಿದ್ದರು.

ನಕ್ಕರೆ ಅದೇ ಸ್ವರ್ಗ

ಹೆಂಡತಿ ತವರು ಮನೆಯಿಂದ ವಾಪಸ್ ಬಂದ್ಲು,
ಗಂಡ ಬಾಗಿಲು ತೆಗೆದು ನಗಲಾರಂಭಿಸಿದ

ಹೆಂಡತಿ : ಯಾಕೆ ಹೀಗೆ ನಗ್ತಾ ಇದ್ದೀರಿ?

ಗಂಡ : ನಮ್ಮ ಸ್ವಾಮೀಜಿಗಳು ಹೇಳಿದ್ದಾರೆ. ಕಷ್ಟ ಎದುರಿಗೆ ಬಂದಾಗ ನಗುತ್ತಲೇ ಅದನ್ನು ಎದುರಿಸು ಅಂತ.

ಮೈಸೂರು ಮಿತ್ರ

ಸೋಮವಾರ, 17 ನವೆಂಬರ್ 2025

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ.........

ಒಂಟಿಯಾದೆ ಎಂದು ಚಿಂತಿಸಬಾರದು. ನಮ್ಮ ಸಾವಿನಲ್ಲೂ ನಾವು ಒಂಟಿಯೇ ಹೊರತು ಅದನ್ನು ಹಂಚಿಕೊಳ್ಳುವವರಿಲ್ಲ.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಹಿರಿಯರ ಮಾತಿಗೆ ಕಿವಿಗೊಡು, ಚುಚ್ಚು ಮಾತಿಗೆ ಬೆನ್ನು ಕೊಡು.

ನಿಮ್ಮ ಪತ್ರಗಳು

ವೃಕ್ಷ ಮಾತೆಗೆ ಗೌರವಪೂರ್ವಕ ವಿದಾಯಗಳು

ಮಾನ್ಯರೇ,

ವೃಕ್ಷ ಮಾತೆ ಎಂದೇ ಕರೆಯಲ್ಪಡುತ್ತಿದ್ದ ಸಾಲುಮರದ ತಿಮ್ಮಕ್ಕ ನಿಧನರಾಗುವುದರೊಂದಿಗೆ ಓರ್ವ ಶತಾಯುಷಿ ಪರಿಸರ ಪ್ರೇಮಿಯ ಬದುಕು ಅಂತ್ಯಗೊಂಡಿದೆ.



ತುಮಕೂರು ಜಿಲ್ಲೆ ಗುಬ್ಬಿ ತಾಲೂಕಿನಲ್ಲಿ 1911ರಲ್ಲಿ ಜನಿಸಿದ ತಿಮ್ಮಕ್ಕ ದಂಪತಿಗೆ ಮಕ್ಕಳಾಗಲಿಲ್ಲ. ಈ ದುಃಖವನ್ನು ಶಮನ ಮಾಡಿಕೊಳ್ಳಲು ತುಮಕೂರಿನ ಕುದೂರಿನಿಂದ ಹುಲಿಕಲ್ಲಿನ ರಾಷ್ಟ್ರೀಯ ಹೆದ್ದಾರಿಯವರೆಗೆ ಆಲದ ಸಸಿಗಳನ್ನು ನೆಡುವ ಮೂಲಕ ತಮ್ಮ ಪರಿಸರ ಪ್ರೇಮ ಅನಾವರಣಗೊಳಿಸಿದರು.

ಮುಂದೆ ಇವು ಬೆಳೆದು ಮರಗಳಾದಾಗ ಅತ್ಯಂತ ಸಂತೋಷ ಮತ್ತು ಸಂಭ್ರಮಪಟ್ಟ ತಿಮ್ಮಕ್ಕ ಸಸಿ ನೆಡುವ, ಮರ ಬೆಳೆಸುವ ಕಾಯಕವನ್ನೇ ತಮ್ಮ ಬದುಕಿನ ಮುಖ್ಯ ಧ್ಯೇಯವನ್ನಾಗಿಸಿಕೊಂಡರು ಹಾಗೂ ಜೀವನದ ಉಸಿರನ್ನಾಗಿಸಿಕೊಂಡರು. ವೃಕ್ಷಗಳನ್ನೇ ತಮ್ಮ ಮಕ್ಕಳೆಂದು ಭಾವಿಸಿ, ಅಕ್ಕರೆಯಿಂದ, ಆಸ್ಥೆಯಿಂದ, ನೋಡಿಕೊಳ್ಳುತ್ತಿದ್ದ ತಿಮ್ಮಕ್ಕ, 114 ವರ್ಷಗಳಷ್ಟು ಸುದೀರ್ಘ ಹಾಗೂ ಅರ್ಥಪೂರ್ಣ ಬದುಕನ್ನು ಸವೆಸಿ, ಪ್ರಕೃತಿಯಲ್ಲಿ ಲೀನವಾಗಿದ್ದಾರೆ. ಇವರ ಪರಿಸರ ಪ್ರೇಮವನ್ನು ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ಕೊಂಡಾಡಲಾಗುತ್ತಿದೆ. 2019ರಲ್ಲಿ ಪದ್ಮಶ್ರೀ ಪ್ರಶಸ್ತಿಗೆ ಭಾಜನರಾದ ತಿಮ್ಮಕ್ಕನವರಿಗೆ, ನಾಡೋಜ ಪ್ರಶಸ್ತಿ, ಇಂದಿರಾ ಪ್ರಿಯದರ್ಶಿನಿ ಪ್ರಶಸ್ತಿ ಸೇರಿದಂತೆ ಹಲವಾರು ರಾಷ್ಟ್ರೀಯ ಹಾಗೂ ಅಂತರಾಷ್ಟ್ರೀಯ ಪ್ರಶಸ್ತಿಗಳು ಪ್ರಾಪ್ತವಾಗಿವೆ. ಅನಕ್ಷರಸ್ಥ ಓರ್ವ ಮಹಿಳೆ ಈ ಮಟ್ಟ ತಲುಪಿದ್ದು ಒಂದು ದಾಖಲೆಯೇ ಸರಿ. ವೃಕ್ಷಮಾತೆಗೆ ಗೌರವಪೂರ್ವಕ ಅಂತಿಮ ವಿದಾಯಗಳು. **–ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ಮೈಸೂರು.**

ಮಾತನಾಡುವ ಕನ್ನಡ ತುರ್ತಾಗಿ ಬೇಕು

ಮಾನ್ಯರೆ,

ಕನ್ನಡ ಉಳಿಸಿ ಬೆಳೆಸಲು ಮೊದಲು ಕನ್ನಡಿಗರಾದ ನಾವು ನಮ್ಮ ಮನೆ, ಕಚೇರಿ ಹಾಗೂ ದೈನಂದಿನ ಜೀವನದಲ್ಲಿ ಕನ್ನಡ ಮಾತನಾಡುವುದನ್ನು ರೂಡಿಸಿಕೊಳ್ಳಬೇಕು. ಮುಖ್ಯಮಂತ್ರಿ ಸಿದ್ದರಾಮಯ್ಯರ ಮಾತಿನಂತೆ ರಾಜ್ಯದಲ್ಲಿರುವ ಪ್ರತಿ ಕನ್ನಡಿಗರು, ಕನ್ನಡ ಮಾತನಾಡಲು ಮೊದಲು ಕಲಿಯಬೇಕು. 1983ಕ್ಕೆ ಮೊದಲೇ ಸರೋಜಿನಿ ಮಹಿಷಿ ಸಮಿತಿ ವರದಿ ಪ್ರಕಾರ 15 ವರ್ಷಗಳಿಗೂ ಅಧಿಕ ಕಾಲದಿಂದ ಕರ್ನಾಟಕದಲ್ಲಿ ವಾಸಿಸುತ್ತಿದ್ದು ಓದಲು, ಬರೆಯಲು, ಮಾತನಾಡಲು ಬಲ್ಲವರು ಕನ್ನಡಿಗರು ಎಂದು ಪ್ರತಿಪಾದಿಸಿತ್ತು. ನೆಲ್ಸನ್ ಮಂಡೇಲಾ ಹೇಳಿರುವಂತೆ ಓರ್ವ ವ್ಯಕ್ತಿಗೆ ತಿಳಿದಿರುವ ಭಾಷೆಯಲ್ಲಿ ನೀನು ಮಾತನಾಡಿದರೆ ಅದು ಅವನ ತಲೆಗೆ ಹೋಗುತ್ತದೆ. ಆದರೆ ಅವನ ಭಾಷೆಯಲ್ಲಿ ಮಾತನಾಡಿದರೆ ಅದು ಅವನ ಹೃದಯಕ್ಕೆ ಮುಟ್ಟುತ್ತದೆ. ಮಾತನಾಡುವ ಕನ್ನಡಕ್ಕೆ ಆದ್ಯತೆ ನೀಡಬೇಕು. ಏಕೆಂದರೆ ಜನರು ಪರಸ್ಪರ ಅರ್ಥ ಮಾಡಿಕೊಳ್ಳುವುದನ್ನು ನಿಲ್ಲಿಸಿದಾಗ ಪರಸ್ಪರ ಅಪಾರ್ಥಕ್ಕೆ ಎಡೆಮಾಡಿ ಕೊಡುತ್ತದೆ. ಸರ್ಕಾರವು ಮೊದಲಿಗೆ ಮಾತನಾಡುವ ಕನ್ನಡವನ್ನು ಉತ್ತೇಜಿಸಬೇಕೆ ಹೊರತು ಬರವಣಿಗೆಯ ಕನ್ನಡವಲ್ಲ, ಕನ್ನಡಭಾಷೆ ತನ್ನ ಏಳ್ಗೆ ಹೊಂದಲು ಹೆಚ್ಚು ಹೆಚ್ಚು ಸಂಖ್ಯೆಯ ಕನ್ನಡ ಮಾತನಾಡುವವರೇ ಹೊರತು, ಬರೀ ಕನ್ನಡದ ಸಾಹಿತಿಗಳಲ್ಲ ಎಂದು ವಿಕ್ರಂ ಮುತ್ತಣ್ಣ ಅವರು ತಮ್ಮ ಬಿಚ್ಚು ನುಡಿ ಅಂಕಣದಲ್ಲಿ ಹೇಳಿರುವುದು ಮೆಚ್ಚುವಂತದ್ದು. **–ಬೆಸಗರಹಳ್ಳಿ ರವಿಪ್ರಸಾದ್, ಮೈಸೂರು.**

ಸಮಸ್ಯೆಗಳಿಗೆ ಸಂಬಂಧಿಸಿದವರು ಕ್ರಮ ಕೈಗೊಳ್ಳಲಿ

ಮಾನ್ಯರೆ,

ಕೆಲವರಿಗೆ ತಲೆ ನೋವು ಹೇಳಿಕೆಗಳು ಏನು ಅಂದರೆ ಯಾವ ಯಾವ ಇಲಾಖೆಗಳು ಯಾರ ವ್ಯಾಪ್ತಿಗೆ ಬರುತ್ತವೆ ಎಂಬ ಗೊಂದಲ. ಅದರಲ್ಲೂ ರಾಜ್ಯದಲ್ಲಿ ಬೇರೆ ಪಕ್ಷ ಕೇಂದ್ರದಲ್ಲಿ ಬೇರೆ ಪಕ್ಷ ಅಧಿಕಾರದಲ್ಲಿ ಇದ್ದರಂತು ಮುಗಿತು ಕಥೆ. ಅವರ ಮೇಲೆ ಇವರು, ಇವರ ಮೇಲೆ ಅವರು ಹಾಕಿ ಕೈ ತೊಳೆದುಕೊಳ್ಳುತ್ತಾರೆ. ಒಬ್ಬ ವ್ಯಕ್ತಿ ತಮ್ಮೂರಲ್ಲಿ ಬೀದಿ ದೀಪಗಳನ್ನು ಸರಿಪಡಿಸುವಂತೆ ಪ್ರಧಾನಿಗೆ ಪತ್ರ ಬರೆದಿದ್ದ. ಆ ಪತ್ರ ಮೇಲಾಧಿಕಾರಿಗಳಿಂದ ಕೆಳ ಅಧಿಕಾರಿಗಳಿಗೆ ರವಾನೆ ಆಗುತ್ತಾ ಆಗುತ್ತಾ ಸಂಬಂಧಿಸಿದ ಪಿಡಿಒಗೆ ಕ್ರಮ ಕೈಗೊಳ್ಳುವಂತೆ ಸೂಚಿಸುತ್ತದೆ. ಬೀದಿದೀಪಗಳನ್ನು ಸರಿಪಡಿಸಿದರೋ ಬಿಟ್ರೊ ಗೊತ್ತಿಲ್ಲ. ಆದರೆ ಒಂದಂತೂ ನಿಜ ಸಮಸ್ಯೆಗಳನ್ನು ಯಾರು ಮೈಮೇಲೆ ಹಾಕಿಕೊಳ್ಳುವುದಿಲ್ಲ. ಸಂಬಂಧಿಸಿದ ಅಧಿಕಾರಿಗಳಿಗೆ ರವಾನೆ ಮಾಡುತ್ತಾರೆ. ಪ್ರಬಲರಿಗೂ ಪತ್ರ ಬರೆದರು, ಅದು ರವಾನೆಯಾಗುವುದು ಸಂಬಂಧಿಸಿದ ಅಧಿಕಾರಿಗೆ ಬರುವುದು. ಒಂದು ವೇಳೆ ಪಕ್ಕ ಇಲಾಖೆಗಳು ಯಾರೂ ವ್ಯಾಪ್ತಿಗೆ ಬರುತ್ತದೆ ಎಂದು ತಿಳಿದುಕೊಳ್ಳಬೇಕಾದರೆ ಪ್ರಧಾನಿಗೆ ಅಥವಾ ಮುಖ್ಯಮಂತ್ರಿಗಳಿಗೆ ಪತ್ರ ಬರೆಯಿರಿ. ಆಗ ಗೊತ್ತಾಗುತ್ತದೆ. ಯಾವ ಯಾವ ಸಮಸ್ಯೆ ಯಾರ ವ್ಯಾಪ್ತಿಗೆ ಒಳಪಡುತ್ತವೆಂದು. ಇಲ್ಲಿ ಕೇಂದ್ರ ಸರ್ಕಾರದ ಇಲಾಖೆಗಳು ಬೇರೆ, ರಾಜ್ಯ ಸರ್ಕಾರದ ಇಲಾಖೆಗಳು ಬೇರೆ. ಆಯಾ ಇಲಾಖೆಯ ನೀತಿ ನಿಯಮಗಳು ಏನೇನಿವೆ ಎಂದು ಬಹುತೇಕರಿಗೆ ಗೊತ್ತಿಲ್ಲ. ಇದರಿಂದ ಗೊಂದಲ ಸೃಷ್ಟಿಯಾಗುತ್ತದೆ. ಸಾಮಾನ್ಯವಾಗಿ ರೈತರ ಬೆಳೆಗಳಿಗೆ ಸೂಕ್ತ ದರ ಬೆಂಬಲ ಬೆಲೆ ನಿಗದಿಪಡಿಸುವ ಪ್ರಾಧಿಕಾರ ಕೇಂದ್ರ ಸರ್ಕಾರವಾದರೂ. ಅದರ ನೀತಿ ನಿಯಮಗಳು ಏನೇನಿವೆಂತ ಜನರಿಗೆ ಗೊತ್ತೇ ಇಲ್ಲ. ರಾಜ್ಯ ಅಥವಾ ಕೇಂದ್ರ ಸರ್ಕಾರದ ಮೇಲೆ ಗೂಬೆ ಕೂರಿಸುವ ಬದಲು ಜನರ ಸಮಸ್ಯೆಗಳನ್ನು ಸಂಬಂಧಿಸಿದವರು ಶೀಘ್ರ ಕ್ರಮ ಕೈಗೊಂಡರೆ ಸಾಕು ಕಿತ್ತಾಡಿಕೊಳ್ಳುವುದು ಅವಶ್ಯಕತೆ ಇರುವುದಿಲ್ಲ.

–ವೀರೇಶ ಧೂಪದಮಠ, ಮೈಸೂರು.

ಮೈಸೂರು ವಿವಿ ಹಾಸ್ಟೆಲ್‌ನಲ್ಲಿ ನೀರಿನ ಸಮಸ್ಯೆ

ಮಾನ್ಯರೆ,

ಪ್ರಸ್ತುತ ಮೈಸೂರಿನ ವಿಶ್ವವಿದ್ಯಾಲಯದ ಬಾಲಕರ ವಿದ್ಯಾರ್ಥಿನಿಲಯವಾದ 3ನೇ ಬ್ಲಾಕ್‌ನಲ್ಲಿ ಕುಡಿಯುವ ನೀರಿನ ಕೊರತೆ ವಿದ್ಯಾರ್ಥಿಗಳನ್ನು ತೊಂದರೆಗೆ ಒಳಪಡಿಸಿದೆ. ದೂರದ ಊರುಗಳಿಂದ ವಿದ್ಯಾಭ್ಯಾಸಕ್ಕಾಗಿ ನಗರಕ್ಕೆ ಬರುವ ವಿದ್ಯಾರ್ಥಿಗಳು ಇಲ್ಲಿ ವಸತಿ ಪಡೆದು ಓದು ಮುಂದುವರಿಸಬೇಕಾದ ಸ್ಥಿತಿಯಲ್ಲಿರುತ್ತಾರೆ. ಆದರೆ ಶುದ್ಧ ಕುಡಿಯುವ ನೀರು ಸರಿಯಾಗಿ ಲಭ್ಯವಾಗದಿರುವುದು ಅವರ ದೈನಂದಿನ ಚಟುವಟಿಕೆಗಳನ್ನೇ ವ್ಯತ್ಯಯಗೊಳಿಸಿದೆ. ವಿದ್ಯಾರ್ಥಿಗಳು ನಮ್ಮ ದೇಶದ ಭವಿಷ್ಯ. ಅವರಿಗೆ ಮೂಲ ಸೌಲಭ್ಯಗಳು ಲಭ್ಯವಾಗುವುದು ಅತ್ಯಂತ ಅಗತ್ಯ. ಆದ್ದರಿಂದ ಸಂಬಂಧಿಸಿದ ಅಧಿಕಾರಿಗಳು ಕೂಡಲೇ ಕ್ರಮ ಕೈಗೊಂಡು ವಿದ್ಯಾರ್ಥಿನಿಲಯದಲ್ಲಿ ನೀರಿನ ಸರಬರಾಜು ವ್ಯವಸ್ಥೆಯನ್ನು ಸರಿಪಡಿಸಿ, ಸ್ಥಿರವಾಗಿ ನೀರು ಲಭ್ಯವಾಗುವಂತೆ ನೋಡಿಕೊಳ್ಳಬೇಕೆಂದು ಕೋರುತ್ತೇನೆ.

–ಎನ್.ದರ್ಶನ್ ಪತ್ರಿಕೋದ್ಯಮ ವಿದ್ಯಾರ್ಥಿ, ಮೈಸೂರು ವಿವಿ.



ಜಿ. ಎಲ್. ತ್ರಿಪುರಾಂತಕ
ಮೊ: 96866–77284

ಅರಿವು

ಸಂಸ್ಕಾರವೇ ಸ್ವರ್ಗ; ಅಹಂಕಾರವೇ ನರಕ...!

ಶಿಲಾಯುಗದಿಂದ ಸಿಲಿಕಾನ್ ಯುಗದವರಗೆ ಮನುಷ್ಯನ ಬದುಕಿನ ಶೈಲಿಯಲ್ಲಿ ಅಜಗಜಾಂತರ ವ್ಯತ್ಯಾಸವನ್ನು ಕಾಣಬಹುದು. ನಿಸರ್ಗದಲ್ಲಿ ಬಲಶಾಲಿಯಾದ ಆನೆಯು ನಡೆದದ್ದೇ ಹಾದಿ ಎನ್ನುತ್ತಾರೆ. ಅಂತಹ ಆನೆಯ ನಡೆಯನ್ನೇ ದಿಕ್ಕುತಪ್ಪಿಸುವಷ್ಟು, ಆನೆಯನ್ನೇ ಪಳಗಿಸಿ ತನ್ನ ಬೆರಳ ತುದಿಯಲ್ಲಿ ಆಟ ಆಡಿಸುವಂತಹ ಕಲೆಯನ್ನು ಮನುಷ್ಯ ಕರಗತ ಮಾಡಿಕೊಂಡಿರುವ ಕಾರಣಕ್ಕೆ ಅವನು ಈ ಭೂಮಿಯ ಅನಭಿಷಕ್ತ ದೊರೆಯಾಗಿ ಮೆರೆಯುತ್ತಿದ್ದಾನೆ. ಮನುಷ್ಯನಿಗೆ ಬುದ್ಧಿ ಹೆಚ್ಚಾಗುತ್ತಿರುವಂತೆ ಅಹಂಕಾರವೂ ಹೆಚ್ಚಾಗುತ್ತಿದ್ದು, ಅದು ಅವನತಿಯತ್ತ ಅವನನ್ನು ದೂಡುತ್ತಿದೆ. ತನ್ನ ಬುದ್ಧಿ ಶಕ್ತಿಯಿಂದಲೇ ಈ ಭೂಮಿಯನ್ನು ಸ್ವರ್ಗ ಮಾಡುತ್ತೇನೆ ಎಂದು ತಪ್ಪಾಗಿ ಭಾವಿಸಿ, ಸ್ವರ್ಗ ಸದೃಶವಾಗಿರುವ ಭೂಭಾಗವನ್ನೆಲ್ಲಾ ತನ್ನ ಸ್ವಾರ್ಥಕ್ಕೆ ಬಳಸಿ ಕೊಂಡು ನಿಜಕ್ಕೂ ನರಕ ಸದೃಶ ಮಾಡುತ್ತಿದ್ದಾನೆ. ಹೆಚ್ಚು ಹೆಚ್ಚು ಶಿಕ್ಷಿತನಾದಷ್ಟು ಶಿಷ್ಟನಾಗುವ ಬದಲು ದುಷ್ಟನಾಗಿ ಮಾರ್ಪಾಡಾಗುತ್ತಾ, ತನ್ನ ಸಮಾಧಿಯ ಗುಂಡಿಯನ್ನು ತಾನೇ ತೋಡಿಕೊಳ್ಳುತ್ತಿದ್ದಾನೆ.

ಶಿಕ್ಷಣವನ್ನು ಶಾಲೆಯಲ್ಲಿ ಕೊಡಬಹುದು, ಇನ್ನೂ ಮುಂದೆ ಹೋಗಿ ಟ್ಯೂಷನ್ ತರಗತಿಯಲ್ಲಿ ಕೊಡಬಹುದು. ಆದರೆ ಸಂಸ್ಕಾರವನ್ನು ಮನೆಯಲ್ಲಿ ಹಿರಿಯರು, ಸಮಾಜದಲ್ಲಿ ಜನರು ಕೊಡಬೇಕಾದ ಸಂಗತಿ. ಶತಶತಮಾನಗಳಿಂದ ಸಂಸ್ಕಾರವು ಪರಿಷ್ಕರಣೆಗೊಂಡು ಮನುಷ್ಯ ಕೆಲವು ಅಲಿಖಿತ ಕಾನೂನು ಕಟ್ಟಲೆಗಳನ್ನು ಹೇರಿಕೊಂಡ ಕಾರಣಕ್ಕೆ ಪ್ರಾಣಿಗಳಿಗಿಂತ ಭಿನ್ನವಾಗಿ ಬದುಕುತ್ತಿದ್ದಾನೆ. ಅನಾಗರೀಕ ವರ್ತನೆಯಿಂದ ಮುಕ್ತಿ ಪಡೆಯಲು ಅವನಿಗೆ ಕಲೆ, ಸಾಹಿತ್ಯ, ಸಂಸ್ಕೃತಿ, ಸಂಸ್ಕಾರ ಎಲ್ಲವೂ ಅಗತ್ಯವಿದೆ. ಅತಿಯಾದರೆ ಅಮೃತವೂ ವಿಷವಾಗುತ್ತದೆ ಎಂಬ ಮಾತಿದೆ. ಇಂದಿನ ಕಾಲಘಟ್ಟದಲ್ಲಿ ಹಣ, ಅಂತಸ್ತು ಗಳಿಸಿದವರಿಗೆ ವಿನಯ, ವಿಧೇಯತೆ ಕಡಿಮೆಯಾಗಿ ಅಹಂಕಾರ, ದರ್ಪದಿಂದ ಮೆರೆಯುವಂತಾಗಿದೆ. ಹಣ ಬಲ, ತೋಳ್ಬಲ ಇದ್ದವರು ಕಿರೀಟವಿಲ್ಲದ ರಾಜರಂತೆ ಅಟ್ಟಹಾಸದಿಂದ ಮೆರೆಯುತ್ತಿದ್ದಾರೆ. ಅವರಲ್ಲಿ ಅನೇಕ ವಿದ್ಯಾವಂತ ಸಮೂಹವೂ ಸೇರಿರುವುದು ವಿಷಾದನೀಯ ಸಂಗತಿ. ಈ ದಿನಮಾನದಲ್ಲಿ ಸಂಸ್ಕಾರಕ್ಕೆ ಗ್ರಹಚಾರ ಬಂದಿದೆಯೇ ಎಂಬ ಅನುಮಾನ ಮೂಡುತ್ತದೆ.

ಹಿಂದೆ ಮನೆಯ ಯಜಮಾನ ಒಬ್ಬ ದುಡಿದು, ಮನೆಯ ಐದಾರು ಸದಸ್ಯರನ್ನು ಸಾಕುತ್ತಿದ್ದ. ಮನೆಯಲ್ಲಿ ಅಷ್ಟೇನೂ ಶ್ರೀಮಂತಿಕೆ ಇರದಿದ್ದರೂ, ಹೃದಯ ಶ್ರೀಮಂತಿಕೆಗೆ ಕೊರತೆ ಇರಲಿಲ್ಲ. ಹಿರಿಯರ ನಡೆ ನುಡಿಗಳಿಂದ ಸಂಸ್ಕಾರವು ಅರಿವಿಲ್ಲದೆ ಅನುಸರಣೆಯಿಂದ ಮೈಗೂಡುತ್ತಿತ್ತು. ಸಮಾಜದ ಕುರಿತು ಒಂದು ನೈತಿಕ ಭಯ, ಗುರು–ಹಿರಿಯರ ಕುರಿತು ಗೌರವ, ಒಡಹುಟ್ಟಿದವರ ಜೊತೆ ಸಹಬಾಳ್ವೆ, ಬಂಧುಗಳ ಜೊತೆ ಒಂದು ಬಾಂಧವ್ಯ, ಸ್ನೇಹಿತರೊಟ್ಟಿಗೆ ಒಂದು ಮಧುರ ಸಂಬಂಧ... ಹೀಗೆ ಅನೇಕ ಸಂಗತಿಗಳು ಅವನ ಬದುಕಿಗೆ ಒಂದು ಅರ್ಥ ತರುತ್ತಿತ್ತು. ಇಂದು ಮನೆಮಂದಿಯೆಲ್ಲಾ ದುಡಿದರೂ ಏನೋ ಕೊರತೆ ಕಾಡುತ್ತಿರುತ್ತದೆ. ಎಲ್ಲರೊಂದಿಗೂ ಒಂದು ಆರೋಗ್ಯಕರ ಅಂತರ ಕಾಯ್ದುಕೊಳ್ಳುವ ಅನಾರೋಗ್ಯಕರ ಬೆಳವಣಿಗೆ ಗೋಚರವಾಗುತ್ತಿದೆ. ಕುಟುಂಬ ಎಂದರೆ ಗಂಡ–ಹೆಂಡತಿ, ಮಕ್ಕಳು ಅಷ್ಟೇ ಎನ್ನುವಂತಾಗಿದೆ. ಗಂಡ ಹೆಂಡತಿ ಇಬ್ಬರೂ ದುಡಿದು ಲಕ್ಷ ಲಕ್ಷ ಮನೆಗೆ ತರುತ್ತೇವೆ ಎಂಬ ಅಹಂಕಾರವಿರುತ್ತದೆ. ಯಾರ ಬಳಿಯೂ ಕೈಚಾಚ ಬೇಕಿಲ್ಲ ಎಂಬ ಅಹಂಭಾವ ಇನ್ನೂ ಹೆಚ್ಚು ದಾಷ್ಟ್ಯತನ ಬೆಳೆಸುತ್ತದೆ. ಇಷ್ಟೆಲ್ಲಾ ಇದ್ದರೂ, ಕುಟುಂಬ ವ್ಯವಸ್ಥೆ ಸಂಕೀರ್ಣವಾಗುತ್ತಿದೆ. ತಿಂಗಳಿಗೆ ಲಕ್ಷಗಳು ಮನೆಗೆ ಬಂದರೂ ಲಕ್ಷ್ಯದ ಕೊರತೆಯೋ ಏನೋ ಮುಖದಲ್ಲಿ ದುಗುಡವಿರುತ್ತದೆ. ಸಂಸ್ಕಾರದ ಕೊರತೆಯೋ ಏನೋ ಅಹಂಕಾರ ಉಕ್ಕಿದಾಗ ಸೊಕ್ಕಿನ ಮಾತುಗಳು ಬರುತ್ತವೆ. ಎಷ್ಟೋ ಜೋಡಿಗಳು ಬಹಳ ವರ್ಷಗಳ ಕಾಲ ಒಂದಾಗಿರದೆ ವಿಚ್ಛೇದನಕ್ಕೆ ಮುಂದಾಗುತ್ತವೆ.

ಹಿಂದೆ ಮದುವೆಯಾಗುವುದು ಸುಲಭವಾಗಿತ್ತು, ವಿಚ್ಛೇದನ ಪಡೆಯುವುದು ಕಷ್ಟವಾಗಿತ್ತು. ವಿಚ್ಛೇದನ ಎಂಬುದು ಕುಟುಂಬದ ಮರ್ಯಾದೆಯನ್ನು ಹಾಳು ಮಾಡುತ್ತದೆ ಎಂದು ಭಾವಿಸಲಾಗುತ್ತಿತ್ತು. ಇಂದು ಮದುವೆಯಾಗುವುದು ಕಷ್ಟ, ಆದರೆ ವಿಚ್ಛೇದನ ಬಲು ಸುಲಭ. ಕ್ಷುಲ್ಲಕ ಕಾರಣಗಳಿಗೆ ವಿಚ್ಛೇದನಗಳು ಏರ್ಪಡುತ್ತವೆ. ಬೆಂಗಳೂರಿನಲ್ಲಿ ದಿನವೊಂದಕ್ಕೆ 250ಕ್ಕೂ ಹೆಚ್ಚು ದಂಪತಿ ವಿಚ್ಛೇದನ ಕೋರಿ ಅರ್ಜಿ ಸಲ್ಲಿಸುತ್ತಿವೆ ಎಂದು ವರದಿಯೊಂದು ಹೇಳುತ್ತದೆ. ಅದಕ್ಕೆ ದುಡ್ಡಿನ ಅಹಂಕಾರ, ಪ್ರತಿಷ್ಠೆಯ ಪರಾಕಾಷ್ಠೆ ಹಾಗೂ ಸಂಸ್ಕಾರದ ಕೊರತೆಯೇ ಕಾರಣವಾಗಿರುತ್ತದೆ. ದುಡ್ಡೇ ದೊಡ್ಡಪ್ಪ ಎಂಬ ಭಾವ ಅನೇಕ ತಪ್ಪು ತೀರ್ಮಾನಗಳಿಗೆ ಇಂಬು ಕೊಡುತ್ತದೆ. ಕುಟುಂಬ ವ್ಯವಸ್ಥೆಯೇ ಬೇಡ, ನಾನು ಸಿಂಗಲ್ ಆಗಿ ಬದುಕ ಬಲ್ಲೆ ಎಂಬ ತೀರ್ಮಾನ ಮಾಡುವವರಿಗೂ ಕಡಿಮೆ ಇಲ್ಲ. ಅವರಿಗೆ ಒತ್ತಾಸೆಯಾಗಿ ನಿಲ್ಲುವ ಪೋಷಕರು ಸಹ ಕಡಿಮೆ ಏನಿಲ್ಲ. ಪರಸ್ಪರ ಹೊಂದಾಣಿಕೆಯಿಂದ ಮನೆಯನ್ನು ಸ್ವರ್ಗ ಮಾಡಿ ಹೆತ್ತವರ ಆನಂದಭಾಷ್ಪಕ್ಕೆ ಕಾರಣರಾಗಬೇಕಿದ್ದ ಯುವಕರು ಇಂದು ವಿಚ್ಛೇದನದ ಮೊರೆ ಹೋಗಿ, ಹೆತ್ತವರು ಕಣ್ಣೀರಲ್ಲಿ ಕೈತೊಳೆಯುವಂತೆ ಮಾಡಿ, ಮೂರು ಮನೆಗಳನ್ನು ನರಕ ಮಾಡುತ್ತಾರೆ. ಜೊತೆಗೆ ಒಂದು ಪಶ್ಚಾತ್ತಾಪದ ಕುರುಹೂ ಇರುವುದಿಲ್ಲ.

ತನ್ನ ತಂದೆ ನಿವೃತ್ತಿ ಅಂಚಿನಲ್ಲಿ ಗಳಿಸುವ ಸಂಬಳವನ್ನು ತಾನು ಮೊದಲ ತಿಂಗಳೇ ತೆಗೆದುಕೊಳ್ಳುತ್ತೇನೆ ಎಂಬ ಅಹಂಕಾರ ಅನೇಕ ಯುವಕ/ಯುವತಿಯರಿಗೆ ಬೌದ್ಧಿಕ ಅಂಧಕಾರಕ್ಕೆ ದೂಡುತ್ತದೆ. ತನ್ನ ಗೌರವಯುತ ದುಡಿಮೆಗೆ ತನ್ನ ತಂದೆಯ ಪರಿಶ್ರಮವೇ ಕಾರಣ, ಅವರ ಸಂಸ್ಕಾರ ಗುಣವೇ ಕಾರಣ ಎಂಬ ಕನಿಷ್ಠ ಜ್ಞಾನವೂ ಇಲ್ಲದವರಿದ್ದಾರೆ. ಪೈಸೆ ಪೈಸೆ ಕೂಡಿಸಿ, ತಮ್ಮ ಸುಖ–ಸಂತೋಷಗಳನ್ನು ತ್ಯಾಗ ಮಾಡಿ ಮಕ್ಕಳ ಶಿಕ್ಷಣಕ್ಕೆ ಸುರಿಯುವ ಹೆತ್ತವರ ಬೆವರಿಗೆ ಬೆಲೆ ಕೊಡದೆ, ಕೈಗೆ ಅಗತ್ಯ ಮೀರಿ ದುಡ್ಡು ಬಂದಾಕ್ಷಣ ದುಡ್ಡಿನಿಂದಲೇ ಎಲ್ಲವನ್ನೂ ಖರೀದಿಸಬಲ್ಲೆವು ಎಂದು ಮಕ್ಕಳು ಭಾವಿಸುತ್ತಾರೆ. ಅದೇ ಸಮಯಕ್ಕೆ ಅವರಿಗೆ ಹಣ ಕೊಟ್ಟು ಕೊಳ್ಳಲಾಗದ ಅನೇಕ ಸಂಗತಿಗಳ ಅರಿವೇ ಇರುವುದಿಲ್ಲ. ಹೆತ್ತವರನ್ನು ಏನೂ ಅರಿಯದವರು ಎಂದು ಕನಿಕರದಿಂದಲೇ ನೋಡುವ ಹಂತಕ್ಕೆ ತಲುಪಿರುತ್ತಾರೆ. ಆದರೆ ಕೆಲವು ಸಂಸ್ಕಾರವಂತ ಯುವಕರು, ತಮ್ಮ ಹೆತ್ತವರ ತ್ಯಾಗ ನೆನೆದು ಅವರನ್ನು ಇಳಿವಯಸ್ಸಿನಲ್ಲಿ ಚೆನ್ನಾಗಿ ನೋಡಿಕೊಳ್ಳಬೇಕೆಂದ ಮಹದಾಸೆಯಿಂದ ಅವರ ಸಂಧ್ಯಾಕಾಲದ ಆಸೆಗಳನ್ನು ಈಡೇರಿಸುತ್ತಾರೆ. ವಿದೇಶ ಪ್ರವಾಸ ಮಾಡಿಸುತ್ತಾರೆ. ಅನಾರೋಗ್ಯಕ್ಕೆ ತುತ್ತಾದರೆ ಉತ್ತಮ ಚಿಕಿತ್ಸೆ ಕೊಡಿಸುತ್ತಾರೆ. ಇಂತಹ ಮಕ್ಕಳನ್ನು ಪಡೆದದ್ದಕ್ಕೆ ಸಾರ್ಥಕವಾಯಿತು ಎಂಬ ಸಾರ್ಥಕ ಭಾವ ಮೂಡುವಂತೆ ಮಾಡುತ್ತಾರೆ. ಅಂತಹವರ ಸಂಖ್ಯೆ ಕ್ರಮೇಣ ಕಡಿಮೆಯಾಗುತ್ತಿರುವುದು ಆಘಾತಕಾರಿ ಸಂಗತಿ.

ಹಣ ಗಳಿಸಿದಾಕ್ಷಣ ಅವರನ್ನು ಯಶಸ್ವಿ ಪುರುಷರು, ಸಾಧಕರು ಎನ್ನಲಾಗದು. ಬದುಕನ್ನು ಕಟ್ಟಿಕೊಳ್ಳಲು ಕೇವಲ ಭದ್ರವಾದ ಮನೆ ಖರೀದಿ ಮಾಡಿದರೆ ಸಾಲದು. ಮನೆಮಂದಿಯ ಪ್ರೀತಿ ವಿಶ್ವಾಸಗಳನ್ನು ಗಟ್ಟಿಗೊಳಿಸಿಕೊಳ್ಳಬೇಕು. ಅದು ಸಹ ಸಂಸ್ಕಾರದ ಒಂದು ಲಕ್ಷಣ. ಮನೆ ಖರೀದಿಸಿದ ತಕ್ಷಣ ಅವರ ಮನೆಯಲ್ಲಿ ನೆಮ್ಮದಿ ಮನೆ ಮಾಡುತ್ತದೆ ಎನ್ನಲಾಗದು, ಕಾರಿನಲ್ಲಿ ತಿರುಗಾಡುತ್ತಿದ್ದಾರೆ ಎಂದ ಮಾತ್ರಕ್ಕೆ ಅವರ ಪ್ರಯಾಣ ಸುಖಕರವಾಗಿದೆ ಎನ್ನಲಾಗದು. ಎಷ್ಟೋ ಸಂಗತಿಗಳು ಸಮಾಜಕ್ಕೆ ತೋರುವ ಸಂಕೇತಗಳಾಗಿರುತ್ತವೆಯೇ ಹೊರತು ಮೂಲಭೂತವಾಗಿ ಅವುಗಳ ಉದ್ದೇಶವೇ ಈಡೇರುತ್ತಿಲ್ಲ. ಹಾಗಾಗಿ ನೈಜವಾದ ಸುಖ, ಸಂತೋಷ ಹಾಗೂ ನೆಮ್ಮದಿಯನ್ನು ಗಳಿಸಲು ಉತ್ತಮ ಸಂಸ್ಕಾರದ ನಡವಳಿಕೆ ಅವಶ್ಯವಿರುತ್ತದೆ. ಕಡಿಮೆ ದುಡಿಮೆ ಇದ್ದರೂ ಮನೆಯನ್ನು ನಂದನವನದಂತೆ ರೂಪಿಸಿರುವ ಅನೇಕ ಸಂಸ್ಕಾರವಂತ ಕುಟುಂಬಗಳು ಸಹ ನಮ್ಮ ನಡುವೆಯೇ ಇವೆ. ಅಹಂಕಾರವೆಂಬ ಗೋಡೆ ಕಟ್ಟಿಕೊಳ್ಳದೆ, ಹಿರಿಯರ ಮಾತಿಗೆ ಬೆಲೆ ಕೊಟ್ಟು ಆದರ್ಶ, ತತ್ವಗಳಿಗೆ ಬೆಲೆ ಕೊಟ್ಟು ಮರ್ಯಾದೆಯಿಂದ ಬದುಕುತ್ತಿದ್ದಾರೆ.

ಹೌದು, ಮನುಷ್ಯ ಸೆಂಟಿಮೆಂಟಲ್ ಫೂಲ್ ತರಹ ಬದುಕಬಾರದು, ಈ ಕಾಲಕ್ಕೆ ಸರಿಹೊಂದುವುದಿಲ್ಲ ಎಂದು ವಾದ ಮಾಡುವವರು ಇದ್ದಾರೆ. ಆದರೆ ಪ್ರಾಕ್ಟಿಕಲ್ ಪ್ರಾಣಿ ತರಹವೂ ಸಹ ಮನುಷ್ಯ ಬದುಕಬಾರದು ಅಲ್ಲವೇ? ತನ್ನ ಮಾತೇ ನಡೆಯಬೇಕು, ಯಾರಿಗೂ ಗೌರವ ಕೊಡುವ ಅಗತ್ಯವಿಲ್ಲ ಎಂಬ ಮನೋಭಾವ ಅನೇಕ ಸಂಬಂಧಗಳಲ್ಲಿ ಬಿರುಕು ಮೂಡಿಸುತ್ತಿದೆ. ಇಂದು ಆದರ್ಶ ದಂಪತಿಗಳ ಬದಲು ಆಕರ್ಶಕ ದಂಪತಿಗಳೇ ಹೆಚ್ಚಾಗಿ ಕಾಣುತ್ತಿದ್ದಾರೆ. ತಮ್ಮ ಪ್ರತಿಷ್ಠೆಗೋಸ್ಕರ ಯಾವುದಕ್ಕೂ, ಯಾರಿಗೂ ರಾಜಿಯಾಗದೆ ಬದುಕುವ ಇರಾದೆಯಿಂದ ಅನೇಕ ಮಾನಸಿಕ ಹಾಗೂ ಸಾಮಾಜಿಕ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಎಲ್ಲವೂ ಇದ್ದರೂ ಏನೂ ಇಲ್ಲದವರಂತೆ ಅನಾಥ ಪ್ರಜ್ಞೆ ಅನೇಕರಿಗೆ ಕಾಡುತ್ತಿದೆ.

ಹಣದ ಮದ ಮನುಷ್ಯನ ಬುದ್ಧಿಯನ್ನು ಸ್ಥಿಮಿತದಲ್ಲಿ ಇರಲು ಬಿಡುವುದಿಲ್ಲ. ಹೆತ್ತವರ ಮಾತುಗಳು ರುಚಿಸುವುದಿಲ್ಲ. ಸೋತು ಗೆಲ್ಲುವ ಮನಸ್ಸು ಮಾಡುವುದಿಲ್ಲ. ಸಹಕಾರ, ಸಹಬಾಳ್ವೆ ಎಂಬುದಕ್ಕೆ ಅರ್ಥವೇ ಇಲ್ಲದಂತೆ ಬದುಕುವ ಇರಾದೆ ಅನೇಕರದ್ದು. ಅನೇಕ ಮುಂದುವರಿದ ರಾಷ್ಟ್ರಗಳಲ್ಲಿನ ಸಂಸ್ಕೃತಿಯನ್ನು ಅನುಸರಿಸುತ್ತಿರುವವರಂತೆ ಅನೇಕರು ಕಾಣುತ್ತಾರೆ. ಭಾರತದಂತ ದೇಶದಲ್ಲಿ ಕುಟುಂಬ ವ್ಯವಸ್ಥೆಯಲ್ಲಿ ಖಾಸಗಿತನ ಎಂಬುದಕ್ಕೆ ಕೊರತೆ ಇದೆ ಎಂಬುದು ಅನೇಕರ ದೂರು. ಹೌದು, ಸಂಸ್ಕಾರಯುತ ಕುಟುಂಬದಲ್ಲಿ ಮನೆಯ ಸದಸ್ಯರಿಗೆ ಪ್ರೈವೆಸಿ ಎಂಬುದರ ಕೊರತೆ ಇರುತ್ತದೆ. ಆದರೆ ಕೌಟುಂಬಿಕ ವ್ಯವಸ್ಥೆ ಗಟ್ಟಿತನದಿಂದ ಕೂಡಿರುತ್ತದೆ. ಇಂದಿನ ಆಧುನಿಕ ಜೀವನ ಕ್ರಮದಲ್ಲಿ ಅವಿಭಕ್ತ ಕುಟುಂಬ ಎಂಬುದು ಅಪರೂಪವಾಗುತ್ತಿದೆ. ದೂರದ ಊರುಗಳಲ್ಲಿ/ ದೇಶಗಳಲ್ಲಿ ಕುಟುಂಬ ಸದಸ್ಯರು ಅನಿವಾರ್ಯವಾಗಿ ಬದುಕಬೇಕಾದ ಪರಿಸ್ಥಿತಿ ಉಂಟಾಗುತ್ತಿದೆ. ಇರಲಿ, ಅದು ಅನಿವಾರ್ಯ ಸಂಗತಿ. ಆದರೆ ಮನೆಯ ಹಿರಿಯರು ನಿಧನ ಹೊಂದಿದಾಗಲೂ ಬರಲಾಗದಷ್ಟು ದಾಷ್ಟ್ಯತನ ಇರುವುದು ಮಾತ್ರ ದುರದೃಷ್ಟಕರ. ನಾನಾ ಕಾರಣಗಳಿಗೆ ಮನೆಯ ಕಾರ್ಯಕ್ರಮಗಳಲ್ಲಿ ಭಾಗವಹಿಸಲು ಸಾಧ್ಯವಾಗುವುದಿಲ್ಲ. ಆದರೆ ಅನಿವಾರ್ಯ ಸಂದರ್ಭಗಳಲ್ಲಿಯೂ ಖುದ್ದು ಬಂದು ಸಾಂತ್ವಾನ ಹೇಳಲಾಗದ ಪರಿಸ್ಥಿತಿ ಎದುರಾಗುವುದು ವಿಪರ್ಯಾಸ.

ಬದುಕಲು ಹಣ ಬೇಕು, ಆದರೆ ಹಣವೊಂದೆ ಬದುಕನ್ನು ಕಟ್ಟಲಾಗದು ಎಂಬ ಸತ್ಯವನ್ನು ಅರಿತು, ಅಹಂಕಾರದ ಬದಲು ತಮ್ಮ ಗಳಿಕೆಗೆ ಹೆಮ್ಮೆ ಪಟ್ಟು, ಡಿವಿಜಿಯವರ ಕಗ್ಗದಲ್ಲಿ ಎಲ್ಲರೊಳಗೊಂದಾಗು ಮಂಕುತಿಮ್ಮ ಎಂಬ ತತ್ವ ಅನುಸರಿಸಿ, ಹೊಂದಾಣಿಕೆ ಮನೋಭಾವದಿಂದ ಬದುಕಿದರೆ ನೆಮ್ಮದಿಯ ಬದುಕನ್ನು ಕಾಣಬಹುದು. ಮನುಷ್ಯ ಅಹಂಕಾರಕ್ಕೆ ತಿಲಾಂಜಲಿ ಹೇಳಿ, ಸಂಸ್ಕಾರವು ಸಮಾಧಾನ ನೀಡುತ್ತದೆ ಎಂಬ ಸತ್ಯವನ್ನು ಅರಿತು ನಡೆದರೆ ಅದೇ ಸ್ವರ್ಗ ಅಲ್ಲವೇ ?

ಹೂರಣ: ಸಂಸ್ಕಾರವಿದ್ದರೆ ಬದುಕು ರಸಮಯ,
ಅಹಂಕಾರವಿದ್ದರೆ ರಸಮಾಯ!



> “ ಮನುಷ್ಯ ಸೆಂಟಿಮೆಂಟಲ್ ಫೂಲ್ ತರಹ ಬದುಕಬಾರದು, ಈ ಕಾಲಕ್ಕೆ ಸರಿಹೊಂದುವುದಿಲ್ಲ ಎಂದು ವಾದ ಮಾಡುವವರು ಇದ್ದಾರೆ. ಆದರೆ ಪ್ರಾಕ್ಟಿಕಲ್ ಪ್ರಾಣಿ ತರಹವೂ ಸಹ ಮನುಷ್ಯ ಬದುಕಬಾರದು ಅಲ್ಲವೇ? ತನ್ನ ಮಾತೇ ನಡೆಯಬೇಕು, ಯಾರಿಗೂ ಗೌರವ ಕೊಡುವ ಅಗತ್ಯವಿಲ್ಲ ಎಂಬ ಮನೋಭಾವ ಅನೇಕ ಸಂಬಂಧಗಳಲ್ಲಿ ಬಿರುಕು ಮೂಡಿಸುತ್ತಿದೆ. ಇಂದು ಆದರ್ಶ ದಂಪತಿ ಬದಲು ಆಕರ್ಷಕ ದಂಪತಿಗಳೇ ಹೆಚ್ಚಾಗಿ ಕಾಣುತ್ತಿದ್ದಾರೆ. ತಮ್ಮ ಪ್ರತಿಷ್ಠೆಗೋಸ್ಕರ ಯಾವುದಕ್ಕೂ, ಯಾರಿಗೂ ರಾಜಿಯಾಗದೆ ಬದುಕುವ ಇರಾದೆಯಿಂದ ಅನೇಕ ಮಾನಸಿಕ, ಸಾಮಾಜಿಕ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಎಲ್ಲವೂ ಇದ್ದರೂ ಏನೂ ಇಲ್ಲದವರಂತೆ ಅನಾಥಪ್ರಜ್ಞೆ ಅನೇಕರಿಗೆ ಕಾಡುತ್ತಿದೆ.

ವಿವಿಧ ಪರಿಸರ ಸಂಘಟನೆಗಳಿಂದ ವೃಕ್ಷಮಾತೆ ಸಾಲುಮರದ ತಿಮ್ಮಕ್ಕ ಅವರಿಗೆ ಶ್ರದ್ಧಾಂಜಲಿ



ವೃಕ್ಷಮಾತೆ, ಪದ್ಮಶ್ರೀ ಪುರಸ್ಕೃತರಾದ ಸಾಲುಮರದ ತಿಮ್ಮಕ್ಕ ಅವರಿಗೆ ಮೈಸೂರಿನ ವಿವಿಧ ಪರಿಸರ ಸಂಘಟನೆಗಳಿಂದ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಮೈಸೂರು,16(ಎಂಕೆ)–ವೃಕ್ಷಮಾತೆ, ಪರಿಸರ ರಾಯಭಾರಿ, ಪದ್ಮಶ್ರೀ ಪುರಸ್ಕೃತರಾದ ಸಾಲುಮರದ ತಿಮ್ಮಕ್ಕ ಅವರಿಗೆ ಮೈಸೂರಿನ ವಿವಿಧ ಪರಿಸರ ಸಂಘಟನೆಗಳಿಂದ ಭಾವಪೂರ್ಣ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಮೈಸೂರು ಬಂಡಿಪಾಳ್ಯ ಸಮೀಪದ ಹಸಿರು ಮೈಸೂರು ನರ್ಸರಿ ಫಾರಂನಲ್ಲಿ ಸಾಲುಮರದ ತಿಮ್ಮಕ್ಕ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಿ, ಮೌನಾಚರಣೆ ಮೂಲಕ ಶ್ರದ್ಧಾಂಜಲಿ ಸಲ್ಲಿಸಲಾಯಿತು. ಬಳಿಕ ಸಾಲುಮರದ ತಿಮ್ಮಕ ಅವರನ್ನು ಕುರಿತು ಹಲವು ಕವನಗಳನ್ನು ರಚಿಸಿ, ವಾಚಿಸುವ ಮೂಲಕ ಸ್ಮರಿಸಲಾಯಿತು. ಹಾಗೆಯೇ ಹಾಡುಗಳನ್ನು ಹಾಡಿ ಸಾಲುಮರದ ತಿಮ್ಮಕ್ಕ ಅವರ ಶ್ರಮದಾಯಕ ಬದುಕನ್ನು ಅನಾವರಣಗೊಳಿಸಲಾಯಿತು.

ಬಳಿಕ ಮುಡಾ ಮಾಜಿ ಅಧ್ಯಕ್ಷರೂ ಆದ ಪರಿಸರ ಪ್ರೇಮಿ ಹೆಚ್.ವಿ.ರಾಜೀವ್ ಮಾತನಾಡಿ, ಸಾಲುಮರದ ತಿಮ್ಮಕ್ಕ ಅವರು, ಬಡಕುಟುಂಬದ ಹಿನ್ನಲೆ ಜೊತೆಗೆ ಅನಕ್ಷರಸ್ಥರಾಗಿದ್ದರು. ಆದರೆ, ಅವರಲ್ಲಿನ ವಿವೇಕ ಜಾಗೃತಗೊಂಡು ಮಾಡಿದ ಪರಿಸರ ಉಳಿಸುವ ಕಾಯಕ ಕೋಟ್ಯಾಂತರ ಪರಿಸರ ಪ್ರೇಮಿಗಳನ್ನು ಹುಟ್ಟುಹಾಕಿದೆ ಎಂದು ಹೇಳಿದರು.

ನಾವೆಲ್ಲರೂ ಶಿಕ್ಷಣ ಪಡೆದಿದ್ದೇವೆ. ಆರ್ಥಿಕವಾಗಿಯೂ ಸಬಲರಾಗಿದ್ದೇವೆ. ಆದರೆ, ಕನಿಷ್ಠ ಪರಿಸರ ಕಾಳಜಿ ಇಲ್ಲದೆ ಪರಿಸರ ವಿನಾಶಕ್ಕೆ ಕಾರಣರಾಗುತ್ತಿದ್ದೇವೆ. ಶಿಕ್ಷಣದಿಂದ ಜ್ಞಾನ ವೃದ್ಧಿಯಾಗಲಿದ್ದು, ವಿವೇಕ ಜಾಗೃತವಾಗಲು ಸಂಸ್ಕೃತಿ ಅವಶ್ಯವಾಗಿದೆ. ಈ ನಿಟ್ಟಿನಲ್ಲಿ ತಿಮ್ಮಕ್ಕ ಅವರು ಹುಟ್ಟಿನಿಂದಲೇ ಸುಸಂಸ್ಕೃತರಾಗಿದ್ದರು. ಮಕ್ಕಳಿಲ್ಲ ಎಂದು ಹೀಯಾಳಿಸುವ ಕಾಲಘಟದಲ್ಲಿ ಮರಗಳನ್ನೇ ಮಕ್ಕಳಂತೆ ಸಾಕಿದ ಕರುಣೆಯುಳ್ಳ ತಾಯಿ ಎಂದು ಸ್ಮರಿಸಿದರು.

ಭವಿಷ್ಯದ ದೃಷ್ಟಿಯಿಂದ ಪರಿಸರ ಉಳಿಸಿ–ಬೆಳೆಸುವ ಜೊತೆಗೆ ಸಾಲುಮರದ ತಿಮ್ಮಕ್ಕ ಅವರು ಸದಾ ನಮ್ಮೊಂದಿಗೆ ಇರಬೇಕಾದರೆ ಗಿಡಗಳನ್ನು ನೆಟ್ಟು ಬೆಳೆಸಬೇಕು. ತಿಮ್ಮಕ್ಕ ಅವರ ಆದರ್ಶಗಳನ್ನು ಪಾಲಿಸುತ್ತಲೇ ಮುಂದೆ ಸಾಗಬೇಕು ಎಂದು ತಿಳಿಸಿದರು.

ಪರಿಸರ ಬಳಗದ ಸಂಸ್ಥಾಪಕ ಸದಸ್ಯ ಪರಶುರಾಮೇಗೌಡ ಮಾತನಾಡಿ, ಸಾಲುಮರದ ತಿಮ್ಮಕ್ಕ ಅವರಿಗೆ ಗೌರವ ನೀಡುವುದು ಎಂದರೆ, ಗಿಡಗಳನ್ನು ನೆಟ್ಟು ಮರಗಳಾಗಿ ಬೆಳೆಸುವುದಾಗಿದೆ. ನಮ್ಮ ಕೈಯಲ್ಲಿ ಎಷ್ಟಾಗುತ್ತೆ ಅಷ್ಟು ಗಿಡಗಳನ್ನು ಬೆಳೆಸುವ ಮೂಲಕ ಗೌರವ ಸಲ್ಲಿಸಬೇಕಾಗಿದೆ. ಬಡತನದಲ್ಲಿ ಹುಟ್ಟಿ, ಮಕ್ಕಳಿಲ್ಲದಿದ್ದರೂ ಗಿಡಗಳನ್ನು ನೆಟ್ಟು ನೀರೆರೆದು ಮಕ್ಕಳಂತೆಯೇ ಸಾಕಿದ ತಿಮ್ಮಕ್ಕ ಅವರ ಆದರ್ಶಗಳನ್ನು ಪ್ರಸ್ತುತ ಕಾಲದಲ್ಲಿ ಪಾಲಿಸುವ ಅನಿವಾರ್ಯತೆ ಇದೆ ಎಂದರು.

ಪರಿಸರ ಬಳಗದ ಪ್ರೊ.ಕಾಳಚನ್ನೇಗೌಡ, ಲೀಲಾ ವೆಂಕಟೇಶ್, ಲೀಲಾ ಶಿವಕುಮಾರ್, ಅಂಜನ, ಭಾಗ್ಯ, ಶ್ವೇತಾ, ಗಂಟಯ್ಯ(ಕೃಷ್ಣಪ್ಪ), ಗುರುಸ್ವಾಮಿ, ಮಧುಶ್ರೀ, ವರ್ಷಿಣಿ, ಸುಗುಣ, ಸುಶೀಲ, ಶ್ರೀಲಕ್ಷ್ಮಿ, ಸೃಷ್ಟಿ, ಜಯಲಕ್ಷ್ಮಿ, ಸಾರ್ಥಕ್, ಚೇತನ್, ಮೈಸೂರು ಗ್ರಾಹಕರ ಪರಿಷತ್ ಭಾನು ಪ್ರಶಾಂತ್, ವಿಶ್ವನಾಥ್ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ಅರ್ಜಿ ಆಹ್ವಾನ

ಮೈಸೂರು: ಅದಮ್ಯ ರಂಗಶಾಲೆ ವತಿಯಿಂದ ವಿವಿಧ ಕ್ಷೇತ್ರದಲ್ಲಿ ಸಾಧನೆ ಮಾಡಿರುವ ಪ್ರತಿಭಾವಂತ ಮಕ್ಕಳಿಗೆ 'ಅದಮ್ಯ ಚಿಗುರು ಪ್ರತಿಭಾ ಚೇತನ' ಪುರಸ್ಕಾರ ನೀಡಲು ಉದ್ದೇಶಿಸಿದ್ದು, ಅರ್ಜಿ ಆಹ್ವಾನಿಸಲಾಗಿದೆ.

ಜಿಲ್ಲೆಯ ವ್ಯಾಪ್ತಿಯೊಳಗಿನ ಸರ್ಕಾರಿ, ಅನುದಾನಿತ, ಖಾಸಗಿ ಶಾಲೆ ಮತ್ತು ಕಾಲೇಜುಗಳಲ್ಲಿ ಎಲ್.ಕೆ.ಜಿ.ಯಿಂದ ಪ್ರಥಮ ಪಿಯುಸಿ ವರೆಗೆ ವ್ಯಾಸಂಗ ಮಾಡುತ್ತಿರುವ ಕಲೆ, ಸಾಹಿತ್ಯ, ಶಿಕ್ಷಣ, ಸಂಗೀತ, ರಂಗಭೂಮಿ, ಕ್ರೀಡೆ, ನೃತ್ಯ, ಜನಪದ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿರುವ ವಿದ್ಯಾರ್ಥಿಗಳ ಪರಿಚಯ, ಭಾವಚಿತ್ರ, ದೂರವಾಣಿ ಸಂಖ್ಯೆ ಹಾಗೂ ಸಾಧನೆಯ ವಿವರಗಳನ್ನು ಒಳಗೊಂಡ ಅಗತ್ಯ ದಾಖಲೆಗಳ ಸಹಿತ ಅರ್ಜಿ ಸಲ್ಲಿಸಬಹುದಾಗಿದೆ. ಮಕ್ಕಳ ಅಥವಾ ವಿದ್ಯಾರ್ಥಿಗಳ ಪೋಷಕರು ಮತ್ತು ಶಿಕ್ಷಕರು ಈ ಎಲ್ಲಾ ಅಗತ್ಯ ಮಾಹಿತಿಗಳನ್ನು ಹೊಂದಿರುವ ಅರ್ಜಿಯನ್ನು ಸಿದ್ಧಪಡಿಸಿ ನ.24ರೊಳಗೆ ತಲುಪುವಂತೆ ಟಿ.ಸತೀಶ್ ಜವರೇಗೌಡ, ಗೌರವ ಕಾರ್ಯದರ್ಶಿ, ಅದಮ್ಯ ರಂಗಶಾಲೆ, ವಿಸ್ಮಯ ಪ್ರಕಾಶನ, ನಂ.442/10, ಕೃಷ್ಣ ಬೇಕರಿ ಬಿಲ್ಡಿಂಗ್, ರಾಮಸ್ವಾಮಿ ಸರ್ಕಲ್, ಮೈಸೂರು–570004 ಈ ವಿಳಾಸಕ್ಕೆ ಅಂಚೆ ಮೂಲಕ ಅಥವಾ ಖುದ್ದಾಗಿ ತಲುಪಿಸಬಹುದು. ಆಯ್ಕೆಯಾದ ಮಕ್ಕಳಿಗೆ ಮಾಸಾಂತ್ಯದಲ್ಲಿ ನಡೆಯಲಿರುವ 'ಕನ್ನಡ ಹಬ್ಬ'ದಲ್ಲಿ ಪುರಸ್ಕಾರ ಪ್ರದಾನ ಮಾಡಲಾಗುವುದು. ಮಾಹಿತಿಗೆ ಮೊ.ಸಂಖ್ಯೆ 8660103141, 9880264678 ಸಂಪರ್ಕಿಸಬಹುದು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮೈಸೂರು ಜಿಲ್ಲೆಯ ಅರಣ್ಯದಲ್ಲಿ ಇನ್ನೂ 21 ಹುಲಿಗಳು

ಎಚ್ಚರಿಕೆಯಿಂದಿರುವಂತೆ ಕಾಡಂಚಿನ ಗ್ರಾಮಸ್ಥರಿಗೆ ಅರಣ್ಯ ಇಲಾಖೆ ಸಲಹೆ



ಸರಗೂರು ಬಳಿ ಕೂಂಬಿಂಗ್ ಕಾರ್ಯಾಚರಣೆ ವೀಕ್ಷಿಸುತ್ತಿರುವ ಡಿಸಿಎಫ್ ಕೆ.ಪರಮೇಶ್.

ನಾಲ್ಕು ವರ್ಷಕ್ಕೊಮ್ಮೆ ಸರ್ವೆ

ಹುಲಿ ಸರ್ವೆ ಕಾರ್ಯ ಪ್ರತಿ ನಾಲ್ಕು ವರ್ಷಕ್ಕೊಮ್ಮೆ ನಡೆಯಲಿದೆ. ಕಳೆದ ಬಾರಿ ನಡೆದ ಸರ್ವೆಯಲ್ಲಿ ಕರ್ನಾಟಕದಲ್ಲಿ 563 ಹುಲಿಗಳಿರುವ ಮಾಹಿತಿ ಲಭ್ಯವಾಗಿತ್ತು. ಈ ಸಾಲಿನ ಸರ್ವೆ ಕಾರ್ಯ ಆರಂಭವಾಗಲಿದ್ದು, ಅದರ ಅಂಕಿ-ಅಂಶ ಮುಂದಿನ ವರ್ಷ ಲಭ್ಯವಾಗಲಿದೆ .

- ಕೆ.ಪರಮೇಶ್, ಡಿಸಿಎಫ್

ಮೈಸೂರು,ನ.16(ಎಂಟಿವೈ)– ಮೈಸೂರು ಜಿಲ್ಲೆಯ ಸರಗೂರು ತಾಲೂಕಿನ ವಿವಿಧ ಗ್ರಾಮಗಳಲ್ಲಿ ಹುಲಿ ದಾಳಿಯಿಂದ ಮೂವರು ಬಲಿಯಾಗಿ ಓರ್ವ ರೈತ ಗಂಭೀರವಾಗಿ ಗಾಯಗೊಂಡಿರುವ ಹಿನ್ನೆಲೆಯಲ್ಲಿ ಅರಣ್ಯ ಇಲಾಖೆ ಕೂಂಬಿಂಗ್ ನಡೆಸಿ, ಈಗಾಗಲೇ ಆರು ಮರಿ ಸೇರಿದಂತೆ 11 ಹುಲಿಗಳನ್ನು ಸೆರೆ ಹಿಡಿದಿದ್ದು, ಇನ್ನಷ್ಟು ಹುಲಿ ಸಂಚರಿಸುತ್ತಿರುವ ಬಗ್ಗೆ ಅರಣ್ಯ ಇಲಾಖೆಯೇ ಮಾಹಿತಿ ನೀಡಿ ಕಾಡಂಚಿನ ಜನ ಎಚ್ಚರಿಕೆಯಿಂದ ಇರುವಂತೆ ಸಲಹೆ ನೀಡಿದೆ.

ಹುಲಿಗಳ ಹಾವಳಿ ಹಾಗೂ ಹುಲಿ ಸೆರೆಗೆ ಕೈಗೊಂಡಿರುವ ಕ್ರಮ ಕುರಿತಂತೆ ಮೈಸೂರು ಡಿಸಿಎಫ್ ಕೆ.ಪರಮೇಶ್ ಪತ್ರಕರ್ತರೊಂದಿಗೆ ಮಾತನಾಡಿ, ಮೈಸೂರು ಜಿಲ್ಲಾ ವ್ಯಾಪ್ತಿಯ ಬಂಡೀಪುರ, ನಾಗರಹೊಳೆ ಕಾಡಂಚಿನ ಗ್ರಾಮಗಳಲ್ಲಿ ನದಿ, ಹಳ್ಳ ಹಾಗೂ ತೊರೆ ಇರುವ ಸ್ಥಳಗಳಲ್ಲಿ ಅಂದಾಜು 21 ಹುಲಿ ಸಂಚರಿಸುತ್ತಿರುವ ಬಗ್ಗೆ ಮಾಹಿತಿ ಇದೆ. ಸರಗೂರು ತಾಲೂಕಿನಲ್ಲಿ ಅ.16ರ ನಂತರ ಸಂಭವಿಸಿದ ನಾಲ್ಕು ಪ್ರತ್ಯೇಕ ಹುಲಿ ದಾಳಿ ಪ್ರಕರಣದಿಂದಾಗಿ ಅರಣ್ಯ ಇಲಾಖೆ ಎಲ್‌ಟಿಎಫ್, ಇಟಿಎಫ್, ವಿವಿಧ ವಿಭಾಗಗಳ ಸಿಬ್ಬಂದಿಗಳು ಹುಲಿ ಸೆರೆ ಕಾರ್ಯಾಚರಣೆಯಲ್ಲಿ ಸಾಕು ಆನೆಗಳಾದ ಮಹೇಂದ್ರ, ಭೀಮ, ಸುಗ್ರೀವ, ಲಕ್ಷ್ಮಣ ಸೇರಿದಂತೆ ವಿವಿಧ ಆನೆಗಳೊಂದಿಗೆ ಕೂಂಬಿಂಗ್ ನಡೆಸಲಾಗುತ್ತಿದೆ. ಈಗಾಗಲೇ ಮಾನವ–ವನ್ಯಜೀವಿ ಸಂಘರ್ಷಕ್ಕೆ ಒಳಗಾಗಿದ್ದ ಸ್ಥಳದಲ್ಲಿ ಕೆಲ ಹುಲಿಗಳನ್ನು ಸುರಕ್ಷಿತವಾಗಿ ಸೆರೆ ಹಿಡಿಯಲಾಗಿದೆ ಎಂದರು.

ಅಂದಾಜು 21 ಹುಲಿಗಳಿರುವ ಮಾಹಿತಿ: ಕಾಡಂಚಿನ ಗ್ರಾಮಗಳಲ್ಲಿ ಮರಿಗಳೂ ಸೇರಿದಂತೆ ಅಂದಾಜು 21 ಹುಲಿಗಳು ಸಂಚರಿಸುತ್ತಿರುವ ಮಾಹಿತಿ ಇದೆ. ಕಾಡಂಚಿನ ಗ್ರಾಮಗಳ ಜನರ ರಕ್ಷಣೆಗೆ ಅಗತ್ಯ ಕ್ರಮ ಕೈಗೊಳ್ಳಲಾಗಿದೆ. ಈ ಹುಲಿಗಳು ಕಾಡಿನಿಂದ ನಾಡಿಗೆ ಬಂದಿಲ್ಲ. ಆದರೆ, ಮರಿಗಳ ಸುರಕ್ಷತೆ ಕಾರಣದಿಂದ ಅರಣ್ಯದಂಚಿನ ಹೊಲ, ನದಿ, ಹಳ್ಳಗಳಲ್ಲಿ ಬೆಳೆದಿರುವ ದಟ್ಟ ಪೊದೆಗಳಲ್ಲಿ ಅಡಗಿರುತ್ತವೆ. ಆ ವೇಳೆ ಜನ ಆಕಸ್ಮಿಕವಾಗಿ ಹೋದಾಗ ದಾಳಿ ನಡೆದಿರುತ್ತವೆ. ಪ್ರತಿವರ್ಷವೂ ಆಗಸ್ಟ್–ಡಿಸೆಂಬರ್ ನಡುವೆ ಹುಲಿಗಳ ಸಂತಾನೋತ್ಪತಿ ಸಮಯವಾಗಿದ್ದು, ಆ ಕಾರಣದಿಂದ ಮರಿಗಳ ರಕ್ಷಣೆಗಾಗಿ ಹುಲಿಗಳು ಕಾಡಂಚಿನ ಹಳ್ಳ, ಕೊಳ್ಳ, ನದಿ ಪಾತ್ರದ ಪೊದೆಗಳಲ್ಲಿ ಆಶ್ರಯ ಪಡೆದಿರುತ್ತವೆ. ಈ ಕಾರಣದಿಂದ ಈ ಹಿಂದೆಯೇ ಇದೇ ಸಮಯದಲ್ಲಿ ಮಾನವನ ಮೇಲೆ ದಾಳಿ ಪ್ರಕರಣ ನಡೆದಿದೆ ಎಂದು ತಿಳಿಸಿದರು.

ಥರ್ಮಲ್ ಡ್ರೋನ್ ಬಳಕೆ: ಸರಗೂರು, ನಂಜನಗೂಡು ತಾಲೂಕಿನ ಕಾಡಂಚಿನ ಗ್ರಾಮಗಳಲ್ಲಿ ಹುಲಿ ಪ್ರತ್ಯಕ್ಷವಾಗಿರುವ ಮಾಹಿತಿ ಬಂದ ಕೂಡಲೇ ಅರಣ್ಯ ಸಿಬ್ಬಂದಿ ಕೂಂಬಿಂಗ್ ಕಾರ್ಯಾಚರಣೆ ನಡೆಸಿದ್ದಾರೆ. ಉಪಟಳ ನೀಡುವ ಹುಲಿ ಸೆರೆ ಅಥವಾ ಪತ್ತೆಗೆ ಕಾರ್ಯಾಚರಣೆಯಲ್ಲಿ ಡ್ರೋನ್ ಬಳಸಲಾಗಿದೆ. ಅದರಲ್ಲೂ ಥರ್ಮಲ್ ಡ್ರೋನ್ ಬಳಸಲಾಗಿದೆ. ಈ ಡ್ರೋನ್ ಬಳಸುವುದರಿಂದ ಹುಲಿ ಸೇರಿದಂತೆ ಯಾವುದೆ ಪ್ರಾಣಿಗಳ ಚಲನವಲನ ರಾತ್ರಿ ವೇಳೆಯೂ ನಿಖರವಾಗಿ ಪತ್ತೆ ಮಾಡಬಹುದಾಗಿದೆ. ಈ ಹಿನ್ನೆಲೆಯಲ್ಲಿ ಹುಲಿ ಕೂಂಬಿಂಗ್ ಕಾರ್ಯಾಚರಣೆಯಲ್ಲಿ ಥರ್ಮಲ್ ಡ್ರೋನ್ ಪ್ರಮುಖ ಪಾತ್ರ ವಹಿಸುತ್ತಿವೆ ಎಂದು ಸ್ಪಷ್ಟಪಡಿಸಿದ್ದಾರೆ.

ಹುಲಿ ದಾಳಿಯಿಂದ ರಕ್ಷಣೆ ಪಡೆಯಲು ಮುಖವಾಡ ಧರಿಸಿ ಜಮೀನಿಗೆ ಹೋಗಿ

ಕಾಡಂಚಿನ ಗ್ರಾಮಗಳಲ್ಲಿ ಅರಣ್ಯ ಇಲಾಖೆಯಿಂದ ಜಾಗೃತಿ



ಸರಗೂರು ತಾಲೂಕು ವ್ಯಾಪ್ತಿಯ ಕಾಡಂಚಿನ ಗ್ರಾಮಗಳಲ್ಲಿ ಅರಣ್ಯ ಇಲಾಖೆ ಗ್ರಾಮಸ್ಥರಿಗೆ ಮುಖವಾಡ ನೀಡಿ ಜಾಗೃತಿ ಮೂಡಿಸುತ್ತಿದೆ

ಮೈಸೂರು,ನ16(ಎಂಟಿವೈ)– ಕಾಡಂಚಿನ ಹೊಲ–ತೋಟಗಳಲ್ಲಿ ರೈತರು ಕೆಲಸ ಮಾಡುವಾಗ ಸಂಭವನೀಯ ಹುಲಿ ದಾಳಿಯಿಂದ ರಕ್ಷಿಸಲು ಅರಣ್ಯ ಇಲಾಖೆ ಮುಖವಾಡದ ಮೊರೆ ಹೋಗಿದ್ದು, ಕಾಡಂಚಿನ ಗ್ರಾಮಗಳ ರೈತರಿಗೆ ಮುಖವಾಡ ಧರಿಸಿ ಕೃಷಿ ಕೆಲಸಕ್ಕೆ ತೆರಳುವಂತೆ ಜಾಗೃತಿ ಮೂಡಿಸಲಾಗುತ್ತಿದೆ.

ಪಶ್ಚಿಮ ಬಂಗಾಳದ ಸುಂದರಬನ್ ಹುಲಿ ಸಂರಕ್ಷಿತ ಪ್ರದೇಶದ ಕಾಡಂಚಿನ ಗ್ರಾಮಗಳಲ್ಲಿ ಹುಲಿ ದಾಳಿ ನಡೆದ ಪ್ರದೇಶದಲ್ಲಿ ಪ್ರಯೋಗ ಮಾಡಿ, ಯಶಸ್ವಿಯಾದ ಹಿನ್ನೆಲೆಯಲ್ಲಿ ಇದೀಗ ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶ ವ್ಯಾಪ್ತಿಯ ಸರಗೂರು ತಾಲೂಕಿನ ಕಾಡಂಚಿನ ಗ್ರಾಮಗಳಲ್ಲಿ ಗ್ರಾಮಸ್ಥರು ಹಾಗೂ ರೈತರಿಗೆ ಮುಖವಾಡ ನೀಡುವ ಮೂಲಕ ಸಂಭವನೀಯ ಹುಲಿ ದಾಳಿ ಪ್ರಕರಣಕ್ಕೆ ಕಡಿವಾಣ ಹಾಕುವ ಪ್ರಯೋಗಕ್ಕೆ ಅರಣ್ಯ ಇಲಾಖೆ ಮುಂದಾಗಿದೆ.

ಏತಕ್ಕಾಗಿ ಮುಖವಾಡ: ಮನುಷ್ಯರ ಮುಖದಂತೆ ಕಾಣುವ ಮುಖವಾಡವನ್ನು ತಲೆ ಹಿಂಭಾಗಕ್ಕೆ ಹಾಕಿಕೊಂಡು ಹೊಲ, ತೋಟದಲ್ಲಿ ಕೆಲಸ ಮಾಡುವಾಗ ಹಿಂಬದಿಯಿಂದ ಹುಲಿ ದಾಳಿ ಮಾಡುವುದಿಲ್ಲ ಎಂಬ ನಂಬಿಕೆಯಿದ್ದು, ಆ ಕಾರಣದಿಂದ ಅರಣ್ಯ ಇಲಾಖೆ ಅರಣ್ಯದಂಚಿನ ಗ್ರಾಮಗಳ ಜನರಿಗೆ ಮುಖವಾಡ ನೀಡುತ್ತಿದೆ. ಪಶ್ಚಿಮ ಬಂಗಾಳದ ಸುಂದರ್‌ಬನ್ ಹುಲಿ ಸಂರಕ್ಷಿತ ಪ್ರದೇಶದಲ್ಲಿ ಕಾಡಂಚಿನ ಗ್ರಾಮಗಳಲ್ಲಿ ನಡೆಯುತ್ತಿದ್ದ ಹುಲಿ ದಾಳಿ ಪ್ರದೇಶದಲ್ಲಿ ಅಲ್ಲಿನ ಅರಣ್ಯಾಧಿಕಾರಿಗಳು ತಜ್ಞರೊಂದಿಗೆ ಚರ್ಚಿಸಿ ಮುಖವಾಡ ಮುದ್ರಿಸಿ ಅಲ್ಲಿನ ಜನರಿಗೆ ನೀಡಿದಾಗ ಹುಲಿ ದಾಳಿ ಪ್ರಕರಣಕ್ಕೆ ಕಡಿವಾಣ ಬಿದ್ದಿತ್ತು. ಒಮ್ಮೊಮ್ಮೆ ಹಿಂಭಾಗದಿಂದ ದಾಳಿ ಮಾಡುವ ಹುಲಿಗಳನ್ನು ದಿಕ್ಕು ತಪ್ಪಿಸುವ ನಿಟ್ಟಿನಲ್ಲಿ ಮುಖವಾಡಗಳು ಯಶಸ್ವಿಯಾಗಿದ್ದು ಪ್ರಯೋಗದಿಂದ ಸಾಬೀತಾಗಿತ್ತು. ಈ ಹಿನ್ನೆಲೆಯಲ್ಲಿ ಪಶ್ಚಿಮ ಬಂಗಾಳದಲ್ಲಿ ಮಾಡಿದ ಪ್ರಯೋಗದಂತೆ ಬಂಡೀಪುರದ ಕಾಡಂಚಿನ ಗ್ರಾಮಗಳಲ್ಲೂ ಮಾಡಲಾಗುತ್ತಿದೆ.

10 ಸಾವಿರ ಮುಖವಾಡ ವಿತರಣೆ: ಸರಗೂರು ತಾಲೂಕಿನಲ್ಲಿ ಹುಲಿ ದಾಳಿಗೆ ಮೂವರು ಬಲಿಯಾಗಿ ಓರ್ವ ರೈತ ಗಂಭೀರವಾಗಿ ಗಾಯಗೊಂಡಿರುವ ಹಿನ್ನೆಲೆಯಲ್ಲಿ ಅರಣ್ಯ ಇಲಾಖೆ 10 ಸಾವಿರ ಮುಖವಾಡವನ್ನು ಅರಣ್ಯದಂಚಿನ ಗ್ರಾಮಸ್ಥರಿಗೆ ನೀಡಲು ಮುಂದಾಗಿದೆ. ಈಗಾಗಲೇ ಬಂಡೀಪುರದ ಸಫಾರಿ ಸಿಬ್ಬಂದಿಗಳು, ಗೈಡ್ ಹಾಗೂ ಇನ್ನಿತರ ಸಿಬ್ಬಂದಿ ತಂಡ ಗ್ರಾಮ ಗ್ರಾಮಗಳಿಗೆ ಹೋಗಿ ಮುಖವಾಡ ವಿತರಿಸಲಾಗುತ್ತಿದೆ.

ನೇರ ದೃಷ್ಟಿಗೆ ಬಗ್ಗುವ ಹುಲಿ: ಹೊಲ, ತೋಟದಲ್ಲಿ ರೈತರು ಕೆಲಸ ಮಾಡುವಾಗ ಹುಲಿಗಳು ಹಿಂಭಾಗದಿಂದ ಬಂದು ದಾಳಿ ಮಾಡಲು ಮುಂದಾದರೆ, ಮುಖವಾಡ ನೋಡಿ ಜನ ನನ್ನನ್ನೇ ನೋಡುತ್ತಿದ್ದಾರೆ ಎಂದು ಭಾವಿಸಿ ವಾಪಸ್ಸಾಗುವ ಸಾಧ್ಯತೆ ಇದೆ. ನೇರ ದೃಷ್ಟಿಗೆ ಹುಲಿ ಹೆದರಲಿದ್ದು, ಆ ಕಾರಣದಿಂದ ಮುಖವಾಡದ ಪ್ರಯೋಗ ನಡೆಸಲಾಗುತ್ತಿದೆ.

ಬೇಟೆಗಾಗಿ ಅರಣ್ಯ ಪ್ರವೇಶಿಸಿದ ಇಬ್ಬರ ಬಂಧನ



ಹುಣಸೂರು, ನ.16– ವನ್ಯ ಪ್ರಾಣಿಗಳನ್ನು ಬೇಟೆಯಾಡುವ ಉದ್ದೇಶದಿಂದ ಶಸ್ತ್ರಾಸ್ತ್ರಗಳೊಂದಿಗೆ ಅಕ್ರಮವಾಗಿ ಅರಣ್ಯ ಪ್ರವೇಶ ಮಾಡಿದ್ದ ಇಬ್ಬರನ್ನು ಹುಣಸೂರು ಅರಣ್ಯ ಇಲಾಖಾ ಅಧಿಕಾರಿಗಳು ಬಂಧಿಸಿದ್ದಾರೆ.

ನ.15 ರಂದು ರಾತ್ರಿ 11 ಗಂಟೆ ಸುಮಾರಿಗೆ ಅಭಿಲಾಷ್ ಹೆಚ್.ಆರ್, ಎಂ.ಆರ್.ಕಿರಣ್, ಸ್ವಾಮಿ, ಶ್ರೇಯಸ್ ಎಂಬುವವರು ಆರೋಪಿಗಳಾಗಿದ್ದು, ಇದರಲ್ಲಿ ಅಭಿಲಾಷ್ ಮತ್ತು ಕಿರಣ್ ಅವರನ್ನು ಅರಣ್ಯಾಧಿಕಾರಿಗಳು ಬಂಧಿಸುವಲ್ಲಿ ಯಶಸ್ವಿಯಾದರೇ, ಇತ್ತ ಸ್ವಾಮಿ ಮತ್ತು ಶ್ರೇಯಸ್ ತಪ್ಪಿಸಿಕೊಂಡು ತಲೆ ಮರೆಸಿಕೊಂಡಿದ್ದಾರೆ.

ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದ ಹುಣಸೂರು ವನ್ಯಜೀವಿ ವಲಯದ ಆನೆಚೌಕೂರು ಭಾಗ–01ರ ಶಾಖೆ ಉಪ ವಲಯ ಅರಣ್ಯಾಧಿಕಾರಿಗಳು ರಾತ್ರಿ ವೇಳೆ ಗಸ್ತು ತಿರುಗುತ್ತಿದ್ದ ವೇಳೆ ಆರೋಪಿಗಳು ಅಕ್ರಮವಾಗಿ ವನ್ಯಜೀವಿ ಬೇಟೆಯಾಡಲು ಕಾಡಿಗೆ ನುಗ್ಗಿದ್ದಾರೆ. ಈ ವೇಳೆ ನಾಲ್ವರನ್ನು ಬಂಧಿಸಲು ಮುಂದಾಗಿದ್ದಾರೆ. ಇಬ್ಬರು ಸಿಕ್ಕಿಬಿದ್ದಿದ್ದು, ಇನ್ನಿಬ್ಬರು ಪರಾರಿಯಾಗಿದ್ದಾರೆ. ಬಂಧಿಸಲ್ಪಟ್ಟವರನ್ನು ವಿಚಾರಣೆಗೆ ಒಳಪಡಿಸಲಾಗಿದ್ದು, ತನಿಖೆ ನಡೆಯುತ್ತಿದೆ. ಇತ್ತ ತಲೆ ಮರೆಸಿಕೊಂಡಿರುವವರ ಪತ್ತೆಗೆ ಅರಣ್ಯ ಇಲಾಖೆ ಮುಂದಾಗಿದೆ.

ಕಾರ್ಯಾಚರಣೆಯಲ್ಲಿ ಉಪ ಅರಣ್ಯ ಸಂರಕ್ಷಣಾಧಿಕಾರಿ ಮತ್ತು ನಿರ್ದೇಶಕರಾದ ಪಿ.ಎ.ಸೀಮಾ, ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಎನ್.ಲಕ್ಷ್ಮೀಕಾಂತ್, ವಲಯ ಅರಣ್ಯಾಧಿಕಾರಿ ದೇವರಾಜು ಡಿ., ಉಪ ವಲಯ ಅರಣ್ಯಾಧಿಕಾರಿ ಪಿ.ಎಲ್.ರಾಮಣ್ಣ, ಗಸ್ತು ಅರಣ್ಯ ಪಾಲಕ ಅನಿಲ್ ಎಸ್.ಎನ್., ಅರಣ್ಯ ವೀಕ್ಷಕ ಪ್ರದೀಪ್ ದಳವಾಹಿ, ಅಕ್ಷಯ್, ಮಧು ಇದ್ದರು.

ಚಾಮುಂಡಿಪುರಂ ವೃತ್ತದಲ್ಲಿ ಅದ್ದೂರಿ ರಾಜ್ಯೋತ್ಸವ



ಮೈಸೂರಿನ ಶ್ರೀರಾಮ ಗೆಳೆಯರ ಬಳಗದ ವತಿಯಿಂದ ಚಾಮುಂಡಿಪುರಂ ವೃತ್ತದಲ್ಲಿ ಭಾನುವಾರ ನಡೆದ ಕನ್ನಡ ರಾಜ್ಯೋತ್ಸವದಲ್ಲಿ ಜಿಲ್ಲಾ ರಾಜ್ಯೋತ್ಸವ ಪುರಸ್ಕಾರಕ್ಕೆ ಭಾಜನರಾದವರನ್ನು ಅಭಿನಂದಿಸಲಾಯಿತು.

ಮೈಸೂರು, ನ.16– ಮೈಸೂರಿನ ಶ್ರೀರಾಮ ಗೆಳೆಯರ ಬಳಗದ ವತಿಯಿಂದ ಚಾಮುಂಡಿಪುರಂ ವೃತ್ತದಲ್ಲಿ ಕನ್ನಡ ರಾಜ್ಯೋತ್ಸವವನ್ನು ಭಾನುವಾರ ಅದ್ದೂರಿಯಾಗಿ ಆಚರಿಸಲಾಯಿತು.

ಸಮಾರಂಭವನ್ನು ಉದ್ಘಾಟಿಸಿದ ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಮಾತನಾಡಿ, ಕನ್ನಡ ಭಾಷೆಗೆ ಸಾವಿರಾರು ವರ್ಷಗಳ ಇತಿಹಾಸವಿದೆ. ಆದಿಕವಿ ಪಂಪ, ಕನ್ನಡದ ಚಕ್ರವರ್ತಿ ರನ್ನ, ರಾಷ್ಟ್ರಕವಿ ಕುವೆಂಪು ಸೇರಿದಂತೆ ಹಲವಾರು ಕವಿಗಳು, ಸಾಹಿತಿಗಳು, ಶರಣರು, ದಾರ್ಶನಿಕರು, ದಾಸಶ್ರೇಷ್ಠರು ಕನ್ನಡ ಭಾಷೆ ವಿಸ್ತಾರಕ್ಕೆ ಮಹತ್ವದ ಕೊಡುಗೆ ನೀಡಿದ್ದಾರೆ ಎಂದು ಹೇಳಿದರು.

ಕನ್ನಡಿಗರು ಅತ್ಯಂತ ಸ್ವಾಭಿಮಾನಿಗಳು ಎಲ್ಲರನ್ನೂ ಪ್ರೀತಿಯಿಂದ ಕಾಣುವ, ಎಲ್ಲರನ್ನೂ ಒಪ್ಪಿಕೊಳ್ಳುವ ಸಹಾನುಭೂತಿಯುಳ್ಳವರು. ಆದರೆ ಪರಭಾಷಿಗರು ಅದನ್ನೆ ಬಂಡವಾಳಗಿಸಿಕೊಂಡು ಕನ್ನಡಿಗರ ಮೇಲೆ ದಬ್ಬಾಳಿಕೆ ಮಾಡುತ್ತಿರುವುದು ಖಂಡನೀಯ. ಕನ್ನಡ ನಾಡಿನಲ್ಲಿ ಜೀವನ ಕಟ್ಟಿಕೊಂಡಿದ್ದರೂ ಕನ್ನಡ ಕಲಿಯದೇ ತಮ್ಮ ಭಾಷೆಯಲ್ಲೇ ವ್ಯವಹರಿಸುವ ಪ್ರವೃತ್ತಿ ಬೆಳೆಸಿಕೊಂಡಿದ್ದಾರೆ. ಖಾಸಗಿ ವಲಯದ ಉದ್ಯೋಗ ನೇಮಕಾತಿಯಲ್ಲೂ ಪರಭಾಷಿಗರಿಗೆ ಆದ್ಯತೆ ನೀಡಿ, ಕನ್ನಡಿಗರನ್ನು ನಿರ್ಲಕ್ಷ್ಯ ಮಾಡಲಾಗುತ್ತಿದೆ. ಇಂತಹ ಪ್ರವೃತ್ತಿಯನ್ನು ಸರ್ಕಾರ ಹಾಗೂ ಕನ್ನಡಪರ ಸಂಘಟನೆಗಳು ನಿರ್ಧಾಕ್ಷಿಣ್ಯವಾಗಿ ವಿರೋಧಿಸಬೇಕು ಎಂದರು.

ಈ ವೇಳೆ ಜಿಲ್ಲಾ ರಾಜ್ಯೋತ್ಸವ ಪುರಸ್ಕಾರಕ್ಕೆ ಭಾಜನರಾದ ಉರಗ ರಕ್ಷಕ ಸ್ನೇಕ್ ಶ್ಯಾಂ, ಪತ್ರಿಕಾ ಛಾಯಾಗ್ರಾಹಕರಾದ ಲಕ್ಷ್ಮೀನಾರಾಯಣ ಯಾದವ್, ಹಂಪ ನಾಗರಾಜ್, ಗವಿಮಠ ರವಿ, ಪತ್ರಕರ್ತ ರಮೇಶ್ ನಾಯಕ, ಅಜಯ್‌ಶಾಸ್ತ್ರಿ ಹಾಗೂ ಶ್ರೀಧರ್ ಅವರನ್ನು ಅಭಿನಂದಿಸಲಾಯಿತು. ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್, ಸಮಾಜ ಸೇವಕ ಕೆ.ರಘುರಾಮ್ ವಾಜಪೇಯಿ, ಸಿಎಆರ್ ಉಪ ಪೊಲೀಸ್ ಆಯುಕ್ತ ಸಿದ್ದನಗೌಡ ವೈ.ಪಾಟೀಲ್, ಬಳಗದ ಅಧ್ಯಕ್ಷ ಸಂದೀಪ್ ಚಂದ್ರಶೇಖರ್, ಅಮರ್‌ನಾಥ್ ರಾಜೇ ಅರಸ್, ಅಂಬಳೆ ಶಿವಣ್ಣ ಮತ್ತಿತರರು ಉಪಸ್ಥಿತರಿದ್ದರು.

ಬಳಿಕ ರಾಜ್ಯೋತ್ಸವ ಸಮಾರಂಭದ ಅಂಗವಾಗಿ ಆರ್ಟಿಸ್ಟ್ ಅಸೋಸಿಯೇಷನ್ ವತಿಯಿಂದ 'ಮಧುರ ಗಾನ' ಹಳೆಯ ಕನ್ನಡ ಚಲನಚಿತ್ರ ಗೀತೆಗಳ ಗಾಯನ ಪ್ರಸ್ತುತಗೊಂಡಿತು.

'ಕನ್ನಡ ಕಲಾರತ್ನ' ಪ್ರಶಸ್ತಿ ಪ್ರದಾನ



ವಾರ್ಷಿಕೋತ್ಸವ ಕಾರ್ಯಕ್ರಮವನ್ನು ಕರ್ನಾಟಕ ಜಾನಪದ ಅಕಾಡೆಮಿ ಸದಸ್ಯ ಡಾ.ಮೈಸೂರು ಉಮೇಶ್ ಉದ್ಘಾಟಿಸಿದರು.

ಮೈಸೂರು, ನ.16(ವಿವಿಹೆಚ್)– ಮೈಸೂರಿನ ಮಹಾರಾಜ ಕಾಲೇಜಿನ ಶತಮಾನೋತ್ಸವ ಭವನದಲ್ಲಿ ನಾಟ್ಯ ಪ್ರದರ್ಶಕ ಕಲೆಗಳ ಸಂಸ್ಥೆ ಮತ್ತು ಸಂಶೋಧನಾ ಕೇಂದ್ರದ 4ನೇ ವರ್ಷದ ವಾರ್ಷಿಕೋತ್ಸವದ ಅಂಗವಾಗಿ ಭಾನುವಾರ ವಿವಿಧ ಕ್ಷೇತ್ರದಲ್ಲಿ ಸಾಧನೆ ಮಾಡಿದ 6 ಸಾಧಕರಿಗೆ 'ಕನ್ನಡ ಕಲಾರತ್ನ' ಪ್ರಶಸ್ತಿ ಪ್ರದಾನ ಮಾಡಲಾಯಿತು.

ಕಾರ್ಯಕ್ರಮದ ಅಂಗವಾಗಿ ನಾಟ್ಯ ನೈವೇದ್ಯ– ನೃತ್ಯ, ಗಾಯನ, ಅಭಿನಯ ಏರ್ಪಡಿಸಲಾಗಿತ್ತು ಹಾಗೂ ಮಕ್ಕಳಿಗೆ ಹಾಗೂ ಹಿರಿಯರಿಗಾಗಿ ಚಿತ್ರಕಲೆ, ನೃತ್ಯ, ಕರೋಕೆ ಗಾಯನ ಸ್ಪರ್ಧೆ ನಡೆಸಲಾಯಿತು. ವಿಜೇತರಿಗೆ ಬಹುಮಾನ ಹಾಗೂ ಪ್ರಮಾಣ ಪತ್ರ ವಿತರಿಸಲಾಯಿತು.

ಕನ್ನಡ ರಾಜ್ಯೋತ್ಸವ ಅಂಗವಾಗಿ ಎನ್.ನಾಗರಾಜು ಅವರ ಸ್ಮರಣಾರ್ಥ ಕನ್ನಡ ರಾಜ್ಯೋತ್ಸವ ಹಮ್ಮಿಕೊಂಡಿದ್ದು ,ಅದರ ನೆನಪಾರ್ಥ ವಿವಿಧ ಕ್ಷೇತ್ರದ ಸಾಧಕರಿಗೆ ಕನ್ನಡ ಕಲಾರತ್ನ ಪ್ರಶಸ್ತಿ ನೀಡಲಾಯಿತು.

ರಂಗಸಂಗೀತ ಕ್ಷೇತ್ರ ವೈ.ಎಂ ಪುಟ್ಟಣ್ಣಯ್ಯ, ಮಕ್ಕಳ ರಂಗಭೂಮಿ ಕ್ಷೇತ್ರ ಅರಸೀಕೆರೆ ಯೋಗಾನಂದ, ನಾಟಕ ಕ್ಷೇತ್ರ ಎನ್.ಧನಂಜಯ, ಜಾನಪದ ನೃತ್ಯ ಕ್ಷೇತ್ರ ಡಾ.ಸಿ ಸುಂದರೇಶ್, ಭರತನಾಟ್ಯ ಕ್ಷೇತ್ರ ವಿದೂಷಿ ಶ್ವೇತಾ ಅವರಿಗೆ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಕರ್ನಾಟಕ ಜಾಪನದ ಅಕಾಡೆಮಿ ಸದಸ್ಯ ಡಾ.ಮೈಸೂರು ಉಮೇಶ್ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಮೈಸೂರು ಆಯುರ್ ಮಟಮ್ ಆರೋಗ್ಯ ಗ್ರಾಮ ಮುಖ್ಯಸ್ಥ ಡಾ. ಮನು ಬಿ. ಮೆನನ್, ಬಿಸಿಎಸ್ ಕನ್‌ಸ್ಟ್ರಕ್ಷನ್ ಮುಖ್ಯಸ್ಥ ಬಿ.ಆನಂದ್, ಕನ್ನಡ ಜಾನಪದ ಅಕಾಡೆಮಿ ಸದಸ್ಯ ದೇವಾನಂದ ವರಪ್ರಸಾದ್, ನಾಟ್ಯ ಸಂಸ್ಥೆ ಅಧ್ಯಕ್ಷೆ ಎನ್.ಪವಿತ್ರ ಉಪಸ್ಥಿತರಿದ್ದರು.

ಅರಣ್ಯ ಇಲಾಖೆ ಬೇಜವಾಬ್ದಾರಿಯಿಂದಲೇ ರಾಜ್ಯದಲ್ಲಿ ವನ್ಯಜೀವಿಗಳ ಸಾವು

ವಾಟಾಳ್ ನಾಗರಾಜ್ ಆರೋಪ



ಮೈಸೂರಿನ ಹಾರ್ಡಿಂಜ್ ವೃತ್ತದಲ್ಲಿ ಕನ್ನಡ ಚಳವಳಿ ವಾಟಾಳ್ ಪಕ್ಷದ ಅಧ್ಯಕ್ಷ ವಾಟಾಳ್ ನಾಗರಾಜ್ ಭಾನುವಾರ ಪ್ರತಿಭಟನೆ ನಡೆಸಿದರು.

ಸಿದ್ದರಾಮಯ್ಯ ಅವರೇ ಮುಂದುವರೆಯಲಿದ್ದಾರೆ...!

ರಾಜ್ಯದಲ್ಲಿ ಮುಖ್ಯಮಂತ್ರಿ ಬದಲಾವಣೆ ಕುರಿತು ಪ್ರತಿಕ್ರಿಯಿಸಿದ ವಾಟಾಳ್ ನಾಗರಾಜ್, ರಾಜ್ಯದ ಮುಖ್ಯಮಂತ್ರಿಯಾಗಿ ಸಿದ್ದರಾಮಯ್ಯ ಅವರೇ ಮುಂದುವರೆಯಲಿದ್ದಾರೆ. ಇದರಲ್ಲಿ ಯಾವುದೇ ಅನುಮಾನವಿಲ್ಲ ಸಿದ್ದರಾಮಯ್ಯ ಅವರಿಗೆ ಸರಿಸಮವಾಗಿ ಕಾಂಗ್ರೆಸ್, ಬಿಜೆಪಿ ಮತ್ತು ಜೆಡಿಎಸ್‌ನಲ್ಲೂ ಪರ್ಯಾಯ ಮುತ್ಸದ್ದಿ ನಾಯಕರಿಲ್ಲ. ಹಾಗಾಗಿ ಅವರೇ ಮುಂದುವರೆಯಲಿದ್ದಾರೆ.

ಮೈಸೂರು,16(ಎಂಕೆ)– ಅರಣ್ಯ ಇಲಾಖೆ ಬೇಜವಾಬ್ದಾರಿಯಿಂದಲೇ ರಾಜ್ಯದಲ್ಲಿ ವನ್ಯಜೀವಿಗಳು ನಿರಂತರವಾಗಿ ಸಾವನ್ನಪ್ಪುತ್ತಿವೆ ಎಂದು ಕನ್ನಡ ಚಳುವಳಿ ವಾಟಾಳ್ ಪಕ್ಷದ ಅಧ್ಯಕ್ಷ ವಾಟಾಳ್ ನಾಗರಾಜ್ ದೂರಿದರು.

ಮೈಸೂರಿನ ಹಾರ್ಡಿಂಜ್ ವೃತ್ತದಲ್ಲಿ ಅರಣ್ಯ ಇಲಾಖೆ ನಿರ್ಲಕ್ಷ, ಬೇಜವಾಬ್ದಾರಿತನ ಖಂಡಿಸಿ ಪ್ರತಿಭಟನೆ ನಡೆಸಿದ ಅವರು, ಅರಣ್ಯ ಇಲಾಖೆ ಅಧಿಕಾರಿಗಳ ಬೇಜವಾಬ್ದಾರಿ ಯಿಂದಲೇ ವನ್ಯಜೀವಿಗಳು ಸಾವನ್ನಪ್ಪುತ್ತಿವೆ. ಆನೆ ಮತ್ತು ಹುಲಿಗಳ ರಕ್ಷಣೆಯಲ್ಲಿ ಅರಣ್ಯ ಇಲಾಖೆ ಸಂಪೂರ್ಣ ವಿಫಲವಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಕರ್ನಾಟಕದಲ್ಲಿ ಮೊದಲು ಕಾಡನ್ನು ಉಳಿಸಬೇಕಿದೆ. ಅರಣ್ಯ ಸಂಪತ್ತು ಹಾಳಾಗುತ್ತಿದೆ. ಅರಣ್ಯ ಸಂಪತ್ತನ್ನು ಹಾಡಹಗಲೇ ದರೋಡೆ ಮಾಡಲಾಗುತ್ತಿದೆ. ಮಹದೇಶ್ವರ ಬೆಟ್ಟದ ಕಾಡು, ಬಂಡಿಪುರ, ನಾಗರಹೊಳೆಯಲ್ಲಿ ಹುಲಿಗಳ ಸಂಖ್ಯೆ ಜಾಸ್ತಿ ಮಾಡಬೇಕಿದೆ, ಆದರೆ ಹುಲಿಗಳನ್ನೇ ಕೊಲ್ಲುತ್ತಿದ್ದಾರೆ ಎಂದು ಆರೋಪಿಸಿದರು.

ಹುಲಿಗಳು ಗ್ರಾಮಗಳಿಗೆ ಬಂದು ಮನುಷ್ಯರನ್ನು ಕೊಲ್ಲುತ್ತಿದ್ದು, ಈ ಬಗ್ಗೆ ಅರಣ್ಯ ಇಲಾಖೆ ಪ್ರಾಮಾಣಿಕವಾಗಿ ಕಾರ್ಯ ನಿರ್ವಹಿಸಬೇಕು. ವನ್ಯಜೀವಿಗಳು ಅರಣ್ಯದಿಂದ ಜನ ವಸತಿ ಸ್ಥಳಗಳತ್ತ ಬರದಂತೆ ತಡೆಯಲು ಗಂಭೀರವಾಗಿ ಚಿಂತನೆ ನಡೆಸಿ, ಸೂಕ್ತ ಕ್ರಮಗಳನ್ನು ಕೈಗೊಳ್ಳಬೇಕು. ಕಾಡಿನ ಸುತ್ತಲು ರೇಸಾರ್ಟ್‌ಗಳಾಗಲೀ, ಮನೆಗಳಾಗಲಿ ಇರಬಾರದು. ಪ್ರವಾಸಿಗರ ಸಂಖ್ಯೆ ಕಡಿಮೆಗೊಳಿಸಬೇಕು. ಹಾಗೆಯೇ ಹುಲಿ ಅಥವಾ ಇನ್ನಿತರೆ ವನ್ಯಜೀವಿಗಳಿಂದ ಮೃತಪಟ್ಟವರ ಕುಟುಂಬಕ್ಕೆ 50 ಲಕ್ಷ ರೂ. ಪರಿಹಾರ ನೀಡಬೇಕು ಎಂದು ಆಗ್ರಹಿಸಿದರು.

ಅರಣ್ಯ ಇಲಾಖೆಯವರೇ ಜವಾಬ್ದಾರಿ: ಬೆಳಗಾವಿ ಮೃಗಾಲಯದಲ್ಲಿ 20ಕ್ಕೂ ಹೆಚ್ಚು ಜಿಂಕೆಗಳ ಸಾವಾಗಿದ್ದು, ಇದಕ್ಕೆ ಬೆಳಗಾವಿ ಜಿಲ್ಲೆಯ ಅರಣ್ಯ ಇಲಾಖೆಯೇ ನೇರ ಹೊಣೆಯಾಗಿದೆ. ಇಷ್ಟೊಂದು ಪ್ರಾಣಿಗಳ ಸಾವನ್ನಪ್ಪಲು ಕಾರಣವೇನು. ಎಂಬುದರ ಬಗ್ಗೆ ಸಮಗ್ರ ತನಿಖೆಯಾಗಬೇಕು. ಪ್ರಾಣಿಗಳ ಬಗ್ಗೆಯಾಗಲೀ ಅರಣ್ಯದ ಬಗ್ಗೆಯಾಗಲಿ ಕಾಳಜಿ ಇಲ್ಲದಿರುವ ಪರಿಣಾಮ ಇದಾಗಿದೆ ಎಂದು ಕಿಡಿಕಾರಿದರು.

ಜನ ಮತ್ತು ಯಂತ್ರೋಪಕರಣ ಇಲ್ಲ: ಅರಣ್ಯ ಪ್ರದೇಶಕ್ಕೆ ಬೆಂಕಿ ಬಿದ್ದರೆ, ನಂದಿಸಲು ಜನರಿಲ್ಲ. ಅಲ್ಲದೆ ಅಗತ್ಯ ಯಂತ್ರೋಪಕರಣಗಳು ಇಲ್ಲ. ಇದೆಲ್ಲದರ ಬಗ್ಗೆಯೂ ಅರಣ್ಯ ಇಲಾಖೆ ಗಂಭೀರವಾಗಿ ಚಿಂತಿಸಿ ಸೂಕ್ತ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಒತ್ತಾಯಿಸಿದರು. ಕನ್ನಡಪರ ಹೋರಾಟಗಾರ ಮೂಗೂರು ನಂಜುಂಡಸ್ವಾಮಿ, ಶಿವಶಂಕರ್, ಪಾರ್ಥಸಾರಥಿ, ಲೋಕೇಶ್‌ಗೌಡ ಮತ್ತಿತರರಿದ್ದರು.

ದಿನೇಶ್ ಕೋಚಿಂಗ್ ಸೆಂಟರ್‌ನಿಂದ ಪ್ರತಿಭಾ ಪುರಸ್ಕಾರ

ಭಾರತೀಯ ಮಕ್ಕಳು ಅತ್ಯಂತ ಶಕ್ತಿಶಾಲಿ ಜೀನ್ಸ್ ಹೊಂದಿದ್ದಾರೆ

ಗದಗ-ವಿಜಯಪುರದ ಶ್ರೀ ರಾಮಕೃಷ್ಣ-ವಿವೇಕಾನಂದ ಆಶ್ರಮದ ಅಧ್ಯಕ್ಷ ಸ್ವಾಮಿ ನಿರ್ಭಯಾನಂದ ಸರಸ್ವತೀ ಶ್ರೀಗಳು



ಮೈಸೂರಿನ ಕಲಾಮಂದಿರದಲ್ಲಿ ದಿನೇಶ್ ಕೋಚಿಂಗ್ ಸೆಂಟರ್ ವತಿಯಿಂದ ಭಾನುವಾರ ಹಮ್ಮಿಕೊಂಡಿದ್ದ ಸಮಾರಂಭದಲ್ಲಿ ಕೋಚಿಂಗ್ ಸೆಂಟರ್‌ನಲ್ಲಿ ತರಬೇತಿ ಪಡೆದು ಕಳೆದ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಉನ್ನತ ದರ್ಜೆಯಲ್ಲಿ ತೇರ್ಗಡೆ ಹೊಂದಿದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಲಾಯಿತು. ಸ್ವಾಮಿ ನಿರ್ಭಯಾನಂದ ಸರಸ್ವತೀ ಶ್ರೀಗಳು, ಎಂ.ಎಸ್.ಜನಾರ್ಧನ, ಕೋಚಿಂಗ್ ಸೆಂಟರ್ ಸಂಸ್ಥಾಪಕ ಎನ್.ವಿ.ದಿನೇಶ್ ಚಿತ್ರದಲ್ಲಿದ್ದಾರೆ.

ಮೈಸೂರು,ನ.16(ಪಿಎಂ)– ನಮ್ಮ ಪೂರ್ವಿಕರು ಅತ್ಯಂತ ಜಾಗರೂಕತೆ ಹಾಗೂ ಶಿಸ್ತುಬದ್ಧ ಜೀವನಶೈಲಿ ನಡೆಸಿದ ಪರಿಣಾಮ ಇಂದಿನ ಭಾರತೀಯ ಮಕ್ಕಳು ಅತ್ಯಂತ ಶಕ್ತಿಶಾಲಿ ಜೀನ್ಸ್ ಹೊಂದಿದ್ದಾರೆ. ಜಗತ್ತಿನ ಬೇರೆ ಯಾವುದೇ ದೇಶದ ಮಕ್ಕಳು ಹೀಗೆ ಶಕ್ತಿಯುತ ಜೀನ್ಸ್ ಹೊಂದಿಲ್ಲ. ಹಾಗಾಗಿ ಭಾರತೀಯ ಮಕ್ಕಳು ಅತ್ಯಂತ ಶ್ರೇಷ್ಠರು ಎಂದು ಗದಗ–ವಿಜಯಪುರದ ಶ್ರೀ ರಾಮಕೃಷ್ಣ–ವಿವೇಕಾನಂದ ಆಶ್ರಮದ ಅಧ್ಯಕ್ಷ ಸ್ವಾಮಿ ನಿರ್ಭಯಾನಂದ ಸರಸ್ವತೀ ಹೇಳಿದರು.

ಮೈಸೂರಿನ ಕಲಾಮಂದಿರದಲ್ಲಿ ದಿನೇಶ್ ಕೋಚಿಂಗ್ ಸೆಂಟರ್ ವತಿಯಿಂದ ಭಾನುವಾರ ಹಮ್ಮಿಕೊಂಡಿದ್ದ 28ನೇ ವರ್ಷದ ಪ್ರತಿಭಾ ಪುರಸ್ಕಾರ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಪಾಲ್ಗೊಂಡು ಮಾತನಾಡಿದ ಅವರು, ಭಾರತದ ಮಕ್ಕಳು ಅತ್ಯಂತ ಶ್ರೇಷ್ಠರು. ಆದರೆ ನಮ್ಮ ದೇಶದ ಮಕ್ಕಳಿಗೆ ಈ ಬಗ್ಗೆ ತಿಳಿಸಿಕೊಡದ ಪರಿಣಾಮ ಅವರಲ್ಲಿ ದೌರ್ಬಲ್ಯಗಳ ನೆಲೆ ಕಂಡುಕೊಳ್ಳುವಂತಾಗಿದೆ. ಪೂರ್ವಿಕರಿಂದ ಶಕ್ತಿಶಾಲಿ ಜೀನ್ಸ್ ಹೊಂದುವ ಮೂಲಕ ಅತ್ಯಂತ ಶ್ರೇಷ್ಠರು ನಾವೆಂಬುದು ಇಡೀ ಭಾರತೀಯ ವಿದ್ಯಾರ್ಥಿ ಸಮುದಾಯಕ್ಕೆ ಗೊತ್ತಿದ್ದರೆ ಅದರ ಚಿತ್ರಣವೇ ಬೇರೆ ಇರುತ್ತಿತ್ತು ಎಂದರು.

ಭಾರತದ ಮಕ್ಕಳಲ್ಲಿನ ರಕ್ತದ ಜೀನ್ಸ್ ಶಕ್ತಿಶಾಲಿ. ಇಂತಹ ಶಕ್ತಿಶಾಲಿ ಜೀನ್ಸ್ ಇಂಗ್ಲೆಂಡ್, ಅಮೆರಿಕ, ಜರ್ಮನಿ, ಜಪಾನ್, ಚೀನಾ, ಇಟಲಿ ಈ ಯಾವ ದೇಶದ ಮಕ್ಕಳಲ್ಲಿಲ್ಲ. ನಮ್ಮ ದೇಶದ ಮಕ್ಕಳಿಗೆ ಪೂರ್ವಜರ ಶಿಸ್ತುಬದ್ಧ ಜೀವನಶೈಲಿಯಿಂದ ಈ ಶಕ್ತಿಶಾಲಿ ಜೀನ್ಸ್ ಬಂದಿದೆ. ವೇದಗಳ ಕಾಲದ ಋಷಿಗಳು, ತ್ರೇತಾಯುಗ, ದ್ವಾಪರಯುಗದ ತಪಸ್ವಿಗಳು ಹಾಗೂ ಕಲಿಯುಗದ ಮಹನೀಯರು ಅದ್ಭುತ ಹಾಗೂ ಆದರ್ಶಮಯ ಜೀವನ ನಡೆಸುವ ಮೂಲಕ ನಮ್ಮ ಮಕ್ಕಳಿಗೆ ಇಂತಹ ಅದ್ಭುತವಾದ ಜೀನ್ಸ್ ಅನ್ನು ರವಾನಿಸಿದ್ದಾರೆ ಎಂದು ವಿಶ್ಲೇಷಿಸಿದರು.

ಇದೇ ವೇಳೆ ದಿನೇಶ್ ಕೋಚಿಂಗ್ ಸೆಂಟರ್‌ನಿಂದ ತರಬೇತಿ ಪಡೆದು ಕಳೆದ ಸಾಲಿನ (2024–25) ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಉನ್ನತ ದರ್ಜೆಯಲ್ಲಿ ತೇರ್ಗಡೆ ಹೊಂದಿದ 96 ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಲಾಯಿತು. ಈ ಪೈಕಿ ರಾಜ್ಯಕ್ಕೆ ಎರಡನೇ ಸ್ಥಾನ ಗಳಿಸಿದ ಎಂ.ಧನುಷ್, ಅನನ್ಯ ಆರ್.ನಾಯಕ್(ರಾಜ್ಯ ಪಠ್ಯಕ್ರಮ) ಹಾಗೂ ಸಿಬಿಎಸ್‌ಇ ಪಠ್ಯಕ್ರಮದಲ್ಲಿ ಟಾಪರ್ ಆದ ಪ್ರದ್ಯುಮ್ನ ಎಂ.ಹರಿತ್ ಅವರಿಗೆ ವಿಶೇಷ ಪ್ರತಿಭಾ ಪುರಸ್ಕಾರ ನೀಡಲಾಯಿತು.

ಅಲ್ಲದೆ, ಕೋಚಿಂಗ್ ಸೆಂಟರ್‌ನಿಂದ ನಡೆಸಿದ್ದ ಜಿಲ್ಲಾ ಮಟ್ಟದ ಚರ್ಚಾ ಸ್ಪರ್ಧೆಯಲ್ಲಿ ವಿಜೇತರಾದವರು ಹಾಗೂ ಪ್ರಸಕ್ತ ಸಾಲಿನ ಕೋಚಿಂಗ್ ಸೆಂಟರ್‌ನ ವಿದ್ಯಾರ್ಥಿಗಳಿಗೆ ನಡೆಸಲಾದ ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಬಹುಮಾನಗಳನ್ನು ವಿತರಿಸಲಾಯಿತು. ಚಿಕ್ಕಮಗಳೂರು ಜಿಲ್ಲೆಯ ಶ್ರೀ ಸ್ವಯಂ ಪ್ರಕಾಶ ಸರಸ್ವತೀ ಪ್ರೌಢಶಾಲೆಯ ನಿವೃತ್ತ ಶಿಕ್ಷಕ ಎಂ.ಎಸ್.ಜನಾರ್ಧನ, ಕೋಚಿಂಗ್ ಸೆಂಟರ್ ಸಂಸ್ಥಾಪಕ ಎನ್.ವಿ.ದಿನೇಶ್ ವೇದಿಕೆಯಲ್ಲಿದ್ದರು. ವಿದ್ಯಾರ್ಥಿಗಳ ಪೋಷಕರು ಹಾಜರಿದ್ದರು.

ಮೈಸೂರು ಮಿತ್ರ ಸೋಮವಾರ 17 ನವೆಂಬರ್ 2025

ಸನಾತನ ಹಿಂದೂ ಧರ್ಮ, ಸಂಸ್ಕೃತಿ ಕೇಡು ಬಯಸುವುದಿಲ್ಲ

ಅವಹೇಳನಕಾರಿಯಾಗಿ ಮಾತನಾಡುವವರಿಗೆ ಡಾ. ಶ್ರೀ ನಿಶ್ಚಲಾನಂದನಾಥ ಸ್ವಾಮೀಜಿ ಮನವರಿಕೆ

ಪಾಂಡವಪುರ, ನ.16– ಭಾರತೀಯ ಸನಾತನ ಹಿಂದೂ ಧರ್ಮ, ಸಂಸ್ಕೃತಿ ಯಾರಿಗೂ ಕೇಡು ಬಯಸುವುದಿಲ್ಲ, ಬದಲಾಗಿ ಜನರಿಗೆ ಧರ್ಮದ ಪ್ರಜ್ಞೆ ಬೆಳೆಸಿ ಸ್ವಾಸ್ಥ್ಯ ಸಮಾಜ ನಿರ್ಮಾಣ ಮಾಡುತ್ತಿದೆ ಎಂದು ಬೆಂಗಳೂರಿನ ವಿಶ್ವ ಒಕ್ಕಲಿಗ ಮಠದ ಪೀಠಾಧ್ಯಕ್ಷ ಡಾ.ಶ್ರೀ ನಿಶ್ಚಲಾನಂದನಾಥ ಸ್ವಾಮೀಜಿ ಹೇಳಿದರು.

ಪಟ್ಟಣದ ಕೃಷ್ಣನಗರದ ಶ್ರೀಬಾಲ ಶನೇಶ್ವರ ಭಕ್ತ ಮಂಡಳಿ ವತಿಯಿಂದ ಕಡೆಯ ಕಾರ್ತಿಕ ಮಾಸದ ಅಂಗವಾಗಿ ಹಮ್ಮಿಕೊಂಡಿದ್ದ ಶ್ರೀನಿವಾಸ ಕಲ್ಯಾಣ, ಗುರುವಂದನೆ ಹಾಗೂ ಲಕ್ಷ ದೀಪೋತ್ಸವ ಕಾರ್ಯಕ್ರಮದ ದಿವ್ಯ ಸಾನಿಧ್ಯವಹಿಸಿ ಗುರುವಂದನೆ ಸ್ವೀಕರಿಸಿ ಅವರು ಮಾತನಾಡಿದರು.

ಭಾರತೀಯ ಸನಾತನ ಧರ್ಮ, ಸಂಸ್ಕೃತಿಯ ಬಗ್ಗೆ ಕೆಲವರು ಅವಹೇಳನಕಾರಿಯಾಗಿ, ತುಚ್ಛವಾಗಿ ಮಾತನಾಡುತ್ತಿದ್ದಾರೆ. ದೇಶದ ಬಗ್ಗೆ ಹೋರಾಟ ನಡೆಸುವವರ ಬಗ್ಗೆ ಹಗುರವಾಗಿ ಮಾತನಾಡುತ್ತಾರೆ. ನಮ್ಮ ಹಿಂದೂ ಧರ್ಮ, ಸಂಸ್ಕೃತಿ ಬೇರೆ ಯಾವ ಧರ್ಮ, ಸಂಸ್ಕೃತಿಗೂ ಕೇಡು ಬಯಸುವ ಕೆಲಸ ಮಾಡುತ್ತಿಲ್ಲ, ಜನರಿಗೆ ಧಾರ್ಮಿಕ ಪ್ರಜ್ಞೆಯ ಜತೆಗೆ ಸಮಾಜವನ್ನು ಸರಿದಾರಿಗೆ ತರುವ ಕೆಲಸ ಮಾಡುತ್ತಿದೆ ಎಂದರು.

ಮಕ್ಕಳಿಗೆ ವಿದ್ಯೆಯ ಜತೆಗೆ ವಿವೇಕವನ್ನು ಕಲಿಸುವ ಕೆಲಸ ಮಾಡಬೇಕು, ಕೇವಲ ವಿಷಯಾಧಾರಿತ ಶಿಕ್ಷಣದಿಂದಲೇ ಮಕ್ಕಳು ದಾರಿ ತಪ್ಪುತ್ತಿದ್ದಾರೆ. ಮಕ್ಕಳಿಗೆ ವಿವೇಕದ ಜತೆಗೆ ಸಂಸ್ಕೃತಿ, ಸಂಸ್ಕಾರ, ಮಾನವೀಯ ಮೌಲ್ಯಗಳನ್ನು ಕಲಿಸದೆ ಹೋದರೆ ಸಂಸಾರ, ಮನೆತನ, ಸಮಾಜ ಯಾವುದಕ್ಕೂ ಉಳಿಗಾಲ ಇರುವುದಿಲ್ಲ ವಿದ್ಯೆ ವಿವೇಕ ತರಬೇಕು ವಿವೇಕ ವಿದ್ಯೆಯ ಮೂಲ ಉದ್ದೇಶವಾಗಿರಬೇಕು, ಅಂತಹ ಎದೆಗೆ ಬಿದ್ದ ಅಕ್ಷರ, ಭೂಮಿಗೆ ಬಿದ್ದ ಬೀಜ ಎಂದಿಗೂ ಫಲಕೊಡದೆ ಇರುವುದಿಲ್ಲ ಎಂದು ಅವರು ಹೇಳಿದರು.

ಧರ್ಮದರ್ಶಿ ರವಿತೇಜ ಅವರು ಧಾರ್ಮಿಕ ಸೇವಾ ಕಾರ್ಯಗಳ ಮೂಲಕ ಹಲವಾರು ಸಮಾಜಮುಖಿ ಕೆಲಸ ಮಾಡಿಕೊಂಡು ಜನರಿಗೆ ಧಾರ್ಮಿಕ ಪ್ರಜ್ಞೆ ಮೂಡಿಸುವ ಕೆಲಸ ಮಾಡುತ್ತಿದ್ದಾರೆ. ಆದರೂ ಈ ಭಾಗದಲ್ಲಿ ದೇವಾಲಯ ನಿರ್ಮಾಣಕ್ಕೆ ಜಾಗ ಕೇಳುತ್ತಿದ್ದಾರೆ. ಅವರಿಗೆ ಈ ಭಾಗದ ಜನಪ್ರತಿನಿಧಿಗಳು ಜಾಗ ದೊರಕಿಸಿಕೊಡುವ ಕೆಲಸ ಮಾಡಬೇಕು, ಅವರು ಕೇಳುತ್ತಿರುವುದು ದೇವಸ್ಥಾನ ನಿರ್ಮಾಣಕ್ಕಾಗಿಯೇ ಹೊರತು ಬಾರ್ ನಿರ್ಮಾಣಕಲ್ಲವಲ್ಲ. ಈ ಬಗ್ಗೆ ಈ ಭಾಗದ ಜನಪ್ರತಿನಿಧಿಗಳು ಚಿಂತನೆ ಮಾಡಬೇಕು ಎಂದರು.

ಚಿತ್ರ ನಿರ್ದೇಶಕ ಎಸ್.ನಾರಾಯಣ್ ಮಾತನಾಡಿ, ಹಿಂದೆ ಗುರುಕುಲದಲ್ಲಿ ನೀಡುತ್ತಿದ್ದ ಸಂಸ್ಕಾರಯುತವಾದ ಶಿಕ್ಷಣ ಪ್ರಸ್ತುತ ದಿನಗಳಲ್ಲಿ ಮಕ್ಕಳಿಗೆ ನೀಡಬೇಕಾಗಿದೆ. ಮೌಲ್ಯಗಳಿಲ್ಲದ ಶಿಕ್ಷಣದಿಂದ ಸ್ವಾಸ್ಥ್ಯ ಸಮಾಜ ನಿರ್ಮಾಣ ಮಾಡಲು ಸಾಧ್ಯವಿಲ್ಲ ಎಂದು ಆತಂಕ ವ್ಯಕ್ತಪಡಿಸಿದರು.

ಪಾಂಡವಪುರಕ್ಕೂ ನನಗೂ ನಂಟಿದೆ ನಾನು ಇಲ್ಲಿ ಚಿತ್ರೀಕರಣ ಮಾಡಿದ ಎಲ್ಲಾ ಸಿನಿಮಾಗಳು ಗೆದ್ದಿವೆ, ಒಂದು ಕಾಲದಲ್ಲಿ ನನಗೆ ಇದು ತವರು ಮನೆಯಂತಾಗಿತ್ತು. ನಾನು ತೆಗೆದಿರುವ ಪ್ರತಿಯೊಂದು ಚಿತ್ರದಲ್ಲೂ ಮೌಲ್ಯ, ಸಂಸ್ಕೃತಿ, ಸಂಸ್ಕಾರದ ಜತೆಗೆ ಒಂದು ಉತ್ತಮವಾದ ಸಂದೇಶವನ್ನು ಸಮಾಜಕ್ಕೆ ನೀಡಿದ್ದೇನೆ. ಸಮಾಜದ ಸ್ವಾಸ್ಥ್ಯ ಆಳು ಮಾಡುವ ಒಂದೇಒಂದು ಸಿನಿಮಾ ನಾನು ತೆಗೆದಿಲ್ಲ ಎಂದರು.

ಇದೇ ವೇಳೆ ವಿಶ್ವ ಒಕ್ಕಲಿಗ ಮಠದ ಪೀಠಾಧ್ಯಕ್ಷರಾದ ಡಾ.ಶ್ರೀ ನಿಶ್ಚಲಾನಂದನಾಥ ಸ್ವಾಮೀಜಿಗಳಿಗೆ ಗುರುವಂದನಾ ಕಾರ್ಯಕ್ರಮ ನಡೆಸಿಕೊಡಲಾಯಿತು. ಶ್ರೀನಿವಾಸ ಕಲ್ಯಾಣ ನಡೆಸಿ ಮದುವೆ ಆಗದವರಿಗೆ ಕಂಕಣ ಕಟ್ಟಿಸಿದರು. ಹಲವಾರು ಮಹಿಳೆಯರಿಗೆ ಮಡಿಲು ಅಕ್ಕಿ ವಿತರಣೆ ಮಾಡಲಾಯಿತು. ಕಾರ್ಯಕ್ರಮಕ್ಕೂ ಮುನ್ನ ಸ್ವಾಮಿಜಿ ಹಾಗೂ ಗಣ್ಯರನ್ನು ಪೂರ್ಣಕುಂಭದೊಂದಿಗೆ ವೇದಿಕೆಗೆ ಬರಮಾಡಿಕೊಂಡರು.

ಸಮಾರಂಭದಲ್ಲಿ ಶಾಸಕ ದರ್ಶನ್ ಪುಟ್ಟಣ್ಣಯ್ಯ, ಜಿಲ್ಲಾ ಕುರುಬರ ಸಂಘ ಹಾಗೂ ಟಿಎಪಿಸಿಎಂಎಸ್‌ನ ನಿರ್ದೇಶಕ ಹಾರೋಹಳ್ಳಿ ಕೃಷ್ಣ, ಧರ್ಮದರ್ಶಿ ರವಿತೇಜ, ಭಾಗವತಿ ಎಸ್.ನಾರಾಯಣ, ಬೆಂಗಳೂರು ವೆಂಕಟೇಶ್, ಜಾಗತಿಕ ಲಿಂಗಾಯತ ಮಹಾಸಭಾ ಜಿಲ್ಲಾ ಕಾರ್ಯದರ್ಶಿ ಎಂ.ಎಸ್.ಮಂಜುನಾಥ್, ಮುಖಂಡರಾದ ಧನ್ಯಕುಮಾರ್, ಹೊಸಕೋಟೆ ವಿಜಿಕುಮಾರ್, ರಾಜೇಶ್, ಚಂದ್ರಶೇಖರಯ್ಯ, ಕೆರೆತೊಣ್ಣೂರು ನಂಬಿ ನಾರಾಯಣ ಸ್ವಾಮಿ ದೇವಸ್ಥಾನದ ಪ್ರಧಾನ ಅರ್ಚಕ ಶ್ರೀನಿವಾಸ್ ಅಯ್ಯಂಗಾರ್, ಸೇರಿದಂತೆ ಹಲವರು ಹಾಜರಿದ್ದರು.



ಪಾಂಡವಪುರ ಪಟ್ಟಣದ ಕೃಷ್ಣನಗರದ ಶ್ರೀಬಾಲ ಶನೇಶ್ವರ ಭಕ್ತಮಂಡಳಿ ವತಿಯಿಂದ ಕಡೆಯ ಕಾರ್ತಿಕ ಮಾಸದ ಅಂಗವಾಗಿ ಹಮ್ಮಿಕೊಂಡಿದ್ದ ಶ್ರೀನಿವಾಸ ಕಲ್ಯಾಣ, ಗುರುವಂದನೆ ಹಾಗೂ ಲಕ್ಷ ದೀಪೋತ್ಸವ ಕಾರ್ಯಕ್ರಮದ ದಿವ್ಯ ಸಾನಿಧ್ಯವಹಿಸಿ ಬೆಂಗಳೂರಿನ ವಿಶ್ವ ಒಕ್ಕಲಿಗ ಮಠದ ಪೀಠಾಧ್ಯಕ್ಷ ಡಾ.ಶ್ರೀ ನಿಶ್ಚಲಾನಂದನಾಥ ಸ್ವಾಮೀಜಿ ಮಾತನಾಡಿದರು.

> ಭಾರತೀಯರಲ್ಲಿ ನಂಬಿಕೆಯೇ ಪ್ರಧಾನವಾಗಿದೆ. ತಂದೆ–ತಾಯಿ ಮಕ್ಕಳನ್ನು ನಂಬುತ್ತಾರೆ, ಮಕ್ಕಳು ತಂದೆ–ತಾಯಿ ನಂಬುತ್ತಾರೆ, ಸೊಸೆ ಅತ್ತೆಮಾವನನ್ನು ನಂಬುತ್ತಾರೆ. ಹೀಗೆ ನಂಬಿಕೆ ನಮ್ಮ ಸಂಸ್ಕೃತಿಯಲ್ಲಿ ಬಲವಾಗಿದೆ. ನಮ್ಮ ಜನರು ಭಕ್ತಿಯ ಮೂಲಕ ದೇವರನ್ನು ನೋಡುವ ಪ್ರಯತ್ನ ಮಾಡುತ್ತಾರೆ. ಕೆಲವರು ತಮ್ಮ ಮನಸ್ಸಿನಲ್ಲಿ ದೇವರನ್ನು ಪ್ರಾರ್ಥಿಸಿಕೊಂಡರೆ ರೈತಾಪಿ ವರ್ಗದವರು ತಮ್ಮ ಕಾಯಕದಲ್ಲಿ ದೇವರನ್ನು ನೋಡುತ್ತಿದ್ದಾರೆ, ಇದು ನಮ್ಮ ಭಾರತೀಯ ಸಂಸ್ಕೃತಿ, ಸಂಸ್ಕಾರವಾಗಿದೆ. – ಡಾ.ಶ್ರೀ ನಿಶ್ಚಲಾನಂದನಾಥ ಸ್ವಾಮೀಜಿ

ಬೆಳಗೊಳದಲ್ಲಿ ಹಿರಿದೇವಿ ಅಮ್ಮನವರ ಅದ್ದೂರಿ ಹೂವಿನ ಚಪ್ಪರೋತ್ಸವ



ಬೆಳಗೊಳ ಗ್ರಾಮದಲ್ಲಿ ಹಿರಿದೇವಿ ಅಮ್ಮನ ಹೂವಿನ ಚಪ್ಪರೋತ್ಸವ ಮೆರವಣಿಗೆ ಅದ್ದೂರಿಯಾಗಿ ಜರುಗಿತು.

ಶ್ರೀರಂಗಪಟ್ಟಣ: ತಾಲೂಕಿನ ಬೆಳಗೊಳದ ಗ್ರಾಮದೇವತೆ ಹಿರಿದೇವಿ ಅಮ್ಮನ ಹೂವಿನ ಚಪ್ಪರೋತ್ಸವ ಅದ್ದೂರಿಯಾಗಿ ಸಡಗರ ಸಂಭ್ರಮದಿಂದ ಜರುಗಿತು. ಹೂವಿನ ಚಪ್ಪರೋತ್ಸವವನ್ನು ಗ್ರಾಮಕ್ಕೆ ಗ್ರಾಮವನ್ನು ಸಂರಕ್ಷಿಸಿಕೊಂಡು ಬರುತ್ತಿರುವ ಆದಿದೇವತೆಗೆ ಪ್ರತಿವರ್ಷದಂತೆ ಈ ಬಾರಿ ಅದ್ದೂರಿಯಾಗಿ ಆಚರಿಸಿಕೊಂಡು ಬರುತ್ತಿದ್ದು, ದೇವಾಲಯದ ಬಳಿ ಶಾಸಕ ರಮೇಶ ಬಂಡಿಸಿದ್ದೇಗೌಡ ಹಾಗೂ ಗ್ರಾಮದ ಯಜಮಾನರು ಚಪ್ಪರೋತ್ಸವ ಮೆರವಣಿಗೆಗೆ ಚಾಲನೆ ನೀಡಿದರು.

ದೇವಿಗೆ ಪ್ರತಿ ಮನೆಗಳ ಸುಮಂಗಲಿಯರು ತಮ್ಮ ತಮ್ಮ ಮನೆಗಳ ಮುಂದೆ ಆರತಿ ಎತ್ತಿ ಪೂಜೆ ಸಲ್ಲಿಸಿದರು. ದೇವಾಲಯದಿಂದ ಪ್ರಾರಂಭವಾದ ದೇವಿಯ ಚಪ್ಪರೋತ್ಸವ ಮೆರವಣಿಗೆಯನ್ನು ಗ್ರಾಮದ ಮುಖ್ಯ ಬೀದಿಗಳಲ್ಲಿ ಮೆರವಣಿಗೆ ಮಾಡಿ ಪ್ರತಿಯೊಂದು ಮನೆ ಮುಂದೆ ಇಡೀ ರಾತ್ರಿ ಪೂಜೆ ಸಲ್ಲಿಸಲಾಯಿತು.

ಗರಡಿಗಳಲ್ಲಿ ಮಟ್ಟಿ ಪೂಜೆ ಮಾಡಿ ಮುಸ್ಲಿಂ ಧರ್ಮಗುರುಗಳಿಂದ ಅಂಬಾಭವಾನಿಗೆ ಪೂಜೆ ಸಲ್ಲಿಸಿ ಭಾವೈಕ್ಯತೆ ಮೆರೆಯುವ ಈ ಹಬ್ಬದಲ್ಲಿ ಆಯಾ ಗರಡಿ ಪೈಲ್ವಾನರು ತಮ್ಮ ತಮ್ಮ ಗರಡಿಯಲ್ಲಿ ಪೂಜೆ ಮಾಡಿದ ಅಂಬಾ ಭವಾನಿಯ ದೊಡ್ಡ ಹೂವಿನ ಹಾರಗಳನ್ನು ಟ್ರಾಕ್ಟರ್‌ಗಳ ಮೇಲಿರಿಸಿ ಗ್ರಾಮದ ಬೀದಿಯಲ್ಲಿ ದೇವಾಲಯದವರೆಗೂ ವಾದ್ಯಗಳೊಂದಿಗೆ ಮೆರವಣಿಗೆ ಮಾಡಿ ಚಪ್ಪರೋತ್ಸವದಲ್ಲಿರುವ ದೇವಿಗೆ ಅರ್ಪಿಸುವರು. ಬಲಮುರಿ ದೇವಾಲಯಗಳ ಅಭಿವೃದ್ಧಿ ಸಮಿತಿ ವತಿಯಿಂದ ಗ್ರಾಮದ ಪ್ರಮುಖ ಬೀದಿಗಳಲ್ಲಿ ವಿದ್ಯುತ್ ದೀಪಾಲಂಕಾರ ಮಾಡಲಾಗಿತ್ತು.

ಸಹಕಾರ ಸಂಘಗಳಿಂದ ರೈತರ ಅಭಿವೃದ್ಧಿ

ಶೀಳನೆರೆಯಲ್ಲಿ 72ನೇ ಅಖಿಲ ಭಾರತ ಸಹಕಾರ ಸಪ್ತಾಹ ಆಚರಣೆ

ಕೆ.ಆರ್.ಪೇಟೆ,ನ.16– ಸಹಕಾರ ಸಂಘಗಳು ರೈತರ ಅಭಿವೃದ್ಧಿಯಲ್ಲಿ ಪ್ರಧಾನ ಪಾತ್ರ ವಹಿಸುತ್ತವೆ. ಸಹಕಾರ ಸಂಘಗಳ ಪಿತಾಮಹ ಸಿದ್ದನಗೌಡ ಪಾಟೀಲರ ದೂರದೃಷ್ಟಿಯ ಫಲವಾಗಿ ಗ್ರಾಮೀಣ ಭಾಗದಲ್ಲಿ ಹಾಲಿನ ಡೇರಿ ಮತ್ತು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ಆರಂಭವಾಗಿವೆ. ಸಹಕಾರ ಸಂಘಗಳ ಆರಂಭದಿಂದ ರೈತರು ಮತ್ತು ಜನಸಾಮಾನ್ಯರ ಸಬಲೀಕರಣವಾಗಿದೆ ಎಂದು ರಾಜ್ಯ ಕೈಮಗ್ಗ ಅಭಿವೃದ್ಧಿ ನಿಗಮದ ಅಧ್ಯಕ್ಷ ಬಿ.ನಾಗೇಂದ್ರ ಕುಮಾರ್ ಹೇಳಿದರು.

ಅವರು ತಾಲೂಕಿನ ಶೀಳನೆರೆ ಹೋಬಳಿ ಕೇಂದ್ರದಲ್ಲಿರುವ ಶೀಳನೆರೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಆವರಣದಲ್ಲಿ ಮಾಜಿ ಶಾಸಕ ಹಾಗೂ ಸಹಕಾರ ಧುರೀಣ ಎಸ್.ಎಂ.ಲಿಂಗಪ್ಪ ಮಹಾ ವೇದಿಕೆಯಲ್ಲಿ ನಡೆದ 72ನೇ ಅಖಿಲ ಭಾರತ ಸಹಕಾರ ಸಪ್ತಾಹ–2025 ಕಾರ್ಯಕ್ರಮವನ್ನು ಜ್ಯೋತಿ ಬೆಳಗಿಸಿ, ಮಾತನಾಡಿದರು.

ಸಹಕಾರ ಸಪ್ತಾಹ ಈ ಕಾರ್ಯಕ್ರಮವು ದೇಶದ ಪ್ರಥಮ ಪ್ರಧಾನಿ ಪಂಡಿತ್ ಜವಹರ್ ಲಾಲ್ ನೆಹರು ಅವರ ಹುಟ್ಟುಹಬ್ಬದ ದಿನದಿಂದ ಆರಂಭಗೊಂಡು ವಾರಗಳ ಕಾಲ ಇಡೀ ದೇಶಾದ್ಯಂತ ಆಚರಣೆ ಮಾಡಲಾಗುತ್ತಿದೆ. ಏಕೆಂದರೆ ಸಹಕಾರ ಕ್ಷೇತ್ರಕ್ಕೆ ಹೆಚ್ಚು ಒತ್ತು ನೀಡಿದ ದೇಶದ ಪ್ರಥಮ ಪ್ರಧಾನಿ ನೆಹರು ಅವರ ದೂರದೃಷ್ಟಿಯ ಪ್ರತಿಫಲವಾಗಿ ಇಂದು ಸಹಕಾರ ಕ್ಷೇತ್ರವು ಸಮೃದ್ಧಿಯಾಗಿ ಬೆಳೆದಿದೆ ಎಂದು. ಇನ್ನೂ ಹೆಚ್ಚಿ ಸಮೃದ್ಧಿಯಾಗಿ ಸಹಕಾರ ವ್ಯವಸ್ಥೆ ಬೆಳೆಯಬೇಕಾದರೆ ಸಹಕಾರ ಸಂಘಗಳು ರಾಜಕೀಯ ಮುಕ್ತವಾಗಿರಬೇಕು ಎಂದು ಹೇಳಿದರು.

ಮನ್‌ಮುಲ್ ನಿರ್ದೇಶಕ ಡಾಲು ರವಿ ಮಾತನಾಡಿ, ಭಾರತದ ಸಹಕಾರ ಚಳವಳಿಯ ಆರೋಗ್ಯಕರ ಬೆಳವಣಿಗೆಗೆ ಹಲವಾರು ನಾಯಕರು ಶ್ರಮಿಸಿದ್ದಾರೆ ಎಂದರು.

ಶೀಳನೆರೆ ಕೃಷಿ ಪತ್ತಿನ ಸಹಕರ ಸಂಘದ ಅಧ್ಯಕ್ಷರು ಹಾಗೂ ಡಿಸಿಸಿ ಬ್ಯಾಂಕ್ ನೂತನ ನಿರ್ದೇಶಕ ಎಸ್.ಅಂಬರೀಶ್ ಅಧ್ಯಕ್ಷತೆ ವಹಿಸಿದ್ದರು. ಗ್ರಾಮೀಣ ಜನರು ಸ್ವಾಭಿಮಾನದ ಬದುಕು ಕಾಣಲು ಸಹಕಾರ ಕ್ಷೇತ್ರದಿಂದ ಸಾಧ್ಯವಾಗಿದೆ. ಹಿರಿಯರ ತ್ಯಾಗ, ನಿಸ್ವಾರ್ಥ ಸೇವೆಯಿಂದ ಸಹಕಾರ ಕ್ಷೇತ್ರ ಎತ್ತರಕ್ಕೆ ಬೆಳೆದು ನಿಂತಿದೆ ಎಂದರು. ಕಾರ್ಯಕ್ರಮದಲ್ಲಿ ರಾಜ್ಯ ಸಹಕಾರ ಮಹಾಮಂಡಳದ ನಿರ್ದೇಶಕ ಎಸ್.ಎಲ್.ಮೋಹನ್, ಮೈಷುಗರ್ ಕಾರ್ಖಾನೆ ಅಧ್ಯಕ್ಷ ಸಿ.ಡಿ.ಗಂಗಾಧರ್, ಎಂ.ಬಿ.ಹರೀಶ್, ಅಧ್ಯಕ್ಷ ಎಸ್.ಅಂಬರೀಶ್, ಇತರರು ಉಪಸ್ಥಿತರಿದ್ದರು.



72ನೇ ಅಖಿಲ ಭಾರತ ಸಹಕಾರ ಸಪ್ತಾಹ ಕಾರ್ಯಕ್ರಮವನ್ನು ಬಿ.ನಾಗೇಂದ್ರಕುಮಾರ್ ಉದ್ಘಾಟಿಸಿದರು.

ಸಾಲುಮರದ ತಿಮ್ಮಕ್ಕ ಅವರಿಗೆ ಶ್ರದ್ಧಾಂಜಲಿ



ಮೈಸೂರಿನ ಶ್ರೀ ರಾಮಕೃಷ್ಣ ಪರಮಹಂಸ ಪ್ರತಿಷ್ಠಾನದಿಂದ ರಾಮಕೃಷ್ಣನಗರದ 'ಹೆಚ್' ಬ್ಲಾಕ್‌ನ ಸಾಲುಮರದ ತಿಮ್ಮಕ್ಕ ಉದ್ಯಾನವನದಲ್ಲಿ ಸಾಲುಮರದ ತಿಮ್ಮಕ್ಕ ಅವರಿಗೆ ಶ್ರದ್ಧಾಂಜಲಿ ಸಲ್ಲಿಸಲಾಯಿತು. ಶ್ರೀ ರಾಮಕೃಷ್ಣ ಪರಮಹಂಸ ಪ್ರತಿಷ್ಠಾನದ ಅಧ್ಯಕ್ಷ ಎನ್. ಶ್ರೀನಿವಾಸ್ ಪ್ರಸಾದ್, ಶಿವಣ್ಣ, ಮಹೇಶ್, ಸೂರಾಪುರ ಕೃಷ್ಣ, ಹೊನ್ನ ಗಂಗಪ್ಪ,ರಾಮಕೃಷ್ಣ, ಪ್ರಸನ್ನ(ಪಾಪು) ಸಿದ್ದಲಿಂಗಸ್ವಾಮಿ.ಎಸ್, ವಿಜಯ ಮಂಜುನಾಥ್, ಪೂರ್ಣಿಮಾ, ಮತ್ತಿತರರು ಉಪಸ್ಥಿತರಿದ್ದರು.

ದೆಹಲಿ ಬಾಂಬ್ ಸ್ಫೋಟ ಕೇಸ್: ಸಂಚು ರೂಪಿಸಿದ್ದ ಪ್ರಮುಖ ಆರೋಪಿ ಅರೆಸ್ಟ್

ನವದೆಹಲಿ, ನ.16– ಕೆಂಪು ಕೋಟೆ ಬಳಿ ನಡೆದ ಕಾರ್ ಬಾಂಬ್ ಸ್ಫೋಟ ಪ್ರಕರಣಕ್ಕೆ ಸಂಬಂಧಿಸಿದಂತೆ ಸಂಚು ರೂಪಿಸಿದ್ದ ಪ್ರಮುಖ ಆರೋಪಿಯನ್ನು ರಾಷ್ಟ್ರೀಯ ತನಿಖಾ ದಳ ದೆಹಲಿಯಲ್ಲಿ ಬಂಧಿಸಿದೆ.

ಜಮ್ಮು ಮತ್ತು ಕಾಶ್ಮೀರದ ಪ್ಯಾಂಪೋರ್‌ನ ಸಂಬೂರಾದ ನಿವಾಸಿ ಅಮೀರ್ ರಷೀದ್ ಬಂಧಿತ ಆರೋಪಿ. ಭಯೋತ್ಪಾದಕ ದಾಳಿಯನ್ನು ನಡೆಸಲು ಆರೋಪಿ ಆತ್ಮಹತ್ಯಾ ಬಾಂಬರ್ ಉಮರ್ ನಬಿ ಜೊತೆ ಸೇರಿ ಸಂಚು ರೂಪಿಸಿದ್ದಾನೆ ಎಂದು ಎನ್‌ಐಎ ತನ್ನ ಹೇಳಿಕೆಯಲ್ಲಿ ತಿಳಿಸಿದೆ.

ಎನ್‌ಐಎ ಹೇಳಿಕೆಯಲ್ಲಿ ಏನಿದೆ: ಸ್ಫೋಟಕ್ಕೆ ಬಳಕೆಯಾಗಿದ್ದ ಐ20 ಕಾರು ಅಮೀರ್ ರಷೀದ್ ಹೆಸರಿನಲ್ಲಿ ನೋಂದಣಿಯಾಗಿತ್ತು. ಈ ಕಾರನ್ನು ಉಮರ್ ನಬಿಗೆ ಅಮೀರ್ ನೀಡಿದ್ದ. ಅಂತಿಮವಾಗಿ ಈ ಕಾರಿನಲ್ಲಿ ಸುಧಾರಿತ ಸ್ಫೋಟಕ ಸಾಧನವನ್ನು ಇಡಲಾಗಿತ್ತು.

ಐ20 ಕಾರನ್ನು ಚಲಾಯಿಸಿದ ಚಾಲಕ ಪುಲ್ವಾಮಾ ಜಿಲ್ಲೆಯ ನಿವಾಸಿ ಮತ್ತು ಫರಿದಾಬಾದ್‌ನ ಅಲ್ ಫಲಾಹ್ ವಿಶ್ವವಿದ್ಯಾಲಯದಲ್ಲಿ ಜನರಲ್ ಮೆಡಿಸಿನ್ ವಿಭಾಗದಲ್ಲಿ ಸಹಾಯಕ ಪ್ರಾಧ್ಯಾಪಕ ಉಮರ್ ಉನ್ ನಬಿ ಎನ್ನವುದು ವಿಧಿವಿಜ್ಞಾನದ ಪ್ರಯೋಗಾಲಯದ ಮೂಲಕ ದೃಢಪಟ್ಟಿದೆ.

ನಬಿಗೆ ಸೇರಿದ ಮತ್ತೊಂದು ವಾಹನವನ್ನು ಸಹ ವಶಪಡಿಸಿಕೊಂಡಿದೆ. ನವೆಂಬರ್ 10 ರಂದು ರಾಷ್ಟ್ರ ರಾಜಧಾನಿಯನ್ನು ಬೆಚ್ಚಿಬೀಳಿಸಿದ ಸ್ಫೋಟದಲ್ಲಿ ಗಾಯಗೊಂಡವರು ಸೇರಿದಂತೆ 73 ಸಾಕ್ಷಿಗಳನ್ನು ಇಲ್ಲಿಯವರೆಗೆ ವಿಚಾರಣೆ ನಡೆಸಲಾಗಿದೆ. ತನಿಖೆ ಮುಂದುವರಿದಿದ್ದು ಸಾಕ್ಷ್ಯಕ್ಕಾಗಿ ವಾಹನವನ್ನು ಪರಿಶೀಲಿಸಲಾಗುತ್ತಿದೆ ಎಂದು ಹೇಳಿಕೆಯಲ್ಲಿ ಉಲ್ಲೇಖಿಸಿದೆ.

ಸಂಪುಟ ಪುನಾರಚನೆಗೆ ಅನುಮತಿ ಸಿಕ್ಕಿದೆ ಅಂದರೆ ನಾಯಕತ್ವ ಬದಲಾವಣೆ ಇಲ್ಲ: ಪರಮೇಶ್ವರ್



ಬೆಂಗಳೂರು, ನ.16– ಸಂಪುಟ ಪುನಾರಚನೆಗೆ ಹೈಕಮಾಂಡ್ ಒಪ್ಪಿಗೆ ಕೊಟ್ಟಿದೆ ಅಂದ ಮೇಲೆ ನಾಯಕತ್ವ ಬದಲಾವಣೆ ಇಲ್ಲ ಅಂತ ಅರ್ಥ ಎಂದು ಗೃಹ ಸಚಿವ ಡಾ.ಜಿ.ಪರಮೇಶ್ವರ್ ರಾಜ್ಯದಲ್ಲಿ ನಾಯಕತ್ವ ಬದಲಾವಣೆ ಇಲ್ಲ ಎಂದು ಪರೋಕ್ಷವಾಗಿ ಸ್ಪಷ್ಟಪಡಿಸಿದ್ದಾರೆ.


ಸಚಿವ ಸಂಪುಟ ವಿಸ್ತರಣೆ ಹೈಕಮಾಂಡ್ ಗ್ರೀನ್ ಸಿಗ್ನಲ್ ನೀಡಿದ ವಿಚಾರಕ್ಕೆ ಪ್ರತಿಕ್ರಿಯೆ ನೀಡಿದ ಅವರು, ಸಂಪುಟ ಪುನರ್ ರಚನೆ ಬಗ್ಗೆ ಸಿಎಂ ಸಿದ್ದರಾಮಯ್ಯ ಅವರನ್ನು ಕೇಳಿದರೆ ಗೊತ್ತಾಗುತ್ತದೆ. ಸಿಎಂ ದೆಹಲಿಗೆ ಹೋಗಿದ್ದು ಗೊತ್ತು. ಹೋಗುವಾಗ ನಾನು ಹೋಗಿ ಭೇಟಿಯಾಗಿ ಬಂದಿದ್ದೆ. ಹೋಗಿದ್ದು ಗೊತ್ತು ಆದರೆ ಹೈಕಮಾಂಡ್ ಬಳಿ ಏನು ವಿದ್ಯಮಾನಗಳು ನಡೆದಿದೆ, ಯಾರನ್ನ ಭೇಟಿ ಮಾಡಿದರು ಅವೆಲ್ಲ ನನಗೆ ಗೊತ್ತಿಲ್ಲ ಎಂದರು.

ಸಂಪುಟ ಪುನರ್ ರಚನೆ ಅಂದಾಗ ಸಾಮಾನ್ಯವಾಗಿ ನಾಯಕತ್ವ ಬದಲಾವಣೆ ಆಗುವುದಿಲ್ಲ. ಸಂಪುಟ ಪುನರ್ ರಚನೆಗೆ ಒಪ್ಪಿಗೆ ಆಗಿದ್ದರೆ ನಾಯಕತ್ವ ಬದಲಾವಣೆ ಇಲ್ಲ ಎಂದರ್ಥ ಎಂದು ತಿಳಿಸಿದರು.

ಹೈಕಮಾಂಡ್ ಜೊತೆ ಮಾತುಕತೆ ನಡೆಯುತ್ತಿದೆ ಎಂಬ ಡಿಸಿಎಂ ಡಿಕೆ ಶಿವಕುಮಾರ್ ಹೇಳಿಕೆ ವಿಚಾರಕ್ಕೆ ಪ್ರತಿಕ್ರಿಯೆ ನೀಡಿದ ಅವರು, ಸಂಪುಟ ಪುನರ್ ರಚನೆ ಬಹಳ ದಿನದ ಬೇಡಿಕೆ. ಬಹಳ ಜನ ಮಂತ್ರಿಗಳು ಆಗಬೇಕು ಅಂತ ಅಪೇಕ್ಷೆ ಪಡುತ್ತಿದ್ದರು ಎಂದು ಹೇಳಿದರು.

ಕೆಪಿಸಿಸಿ ಅಧ್ಯಕ್ಷರ ಬದಲಾವಣೆ ವಿಚಾರಕ್ಕೆ ಪ್ರತಿಕ್ರಿಯೆ ನೀಡಿದ ಅವರು, ಇದೆಲ್ಲವನ್ನು ಹೈಕಮಾಂಡ್ ನಾಯಕರು ನಿರ್ಧಾರ ಮಾಡುತ್ತಾರೆ. ಸಮಯ, ಸಂದರ್ಭ ನೋಡಿಕೊಂಡು ತೀರ್ಮಾನ ಮಾಡುತ್ತಾರೆ ಎಂದರು.

ವಿದ್ಯಾರ್ಥಿನಿಗೆ ಕಿರುಕುಳ: ಮೈಸೂರು ವಿವಿ ಉಪನ್ಯಾಸಕನ ವಿರುದ್ಧ ಕೇಸ್ ದಾಖಲು



ಮೈಸೂರು, ನ.16– ವಿದ್ಯಾರ್ಥಿನಿಗೆ ಕಿರುಕುಳ ನೀಡಿದ ಆರೋಪದಡಿ ಮೈಸೂರು ವಿಶ್ವವಿದ್ಯಾನಿಲಯದ ಸ್ಕೂಲ್ ಆಫ್ ಇಂಜಿನಿಯರಿಂಗ್ ವಿಭಾಗದ ಉಪನ್ಯಾಸಕರೊಬ್ಬರ ವಿರುದ್ಧ ಮೈಸೂರಿನ ಜಯಲಕ್ಷ್ಮೀಪುರಂ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದಾರೆ.

ಉಪನ್ಯಾಸಕ ಭರತ್ ಭಾರ್ಗವ್ ವಿರುದ್ಧ ದೂರು ನೀಡಿರುವ ವಿದ್ಯಾರ್ಥಿನಿ, ಕೆಲ ವರ್ಷಗಳಿಂದ ತರಗತಿಯಲ್ಲಿ ಹಾಗೂ ಹೊರಗೆ ಸಿಕ್ಕ ಸಂದರ್ಭದಲ್ಲಿ ಸುತ್ತಾಡಿಕೊಂಡು ಬರೋಣ ಎಂದು ಪೀಡಿಸುತ್ತಿದ್ದರು. ಉತ್ತಮ ಅಂಕ ಬಂದಿದ್ದಕ್ಕೆ ಸಿಹಿ ಹಂಚುವಾಗಲೂ ಪಾರ್ಟಿ ಕೊಡಲ್ವ, ಬಾ ಹೊರಗಡೆ ಹೋಗಿ ಬರೋಣ ಎಂದೆಲ್ಲಾ ಒತ್ತಾಯಿಸುತ್ತಿದ್ದರು. ಮಾರ್ಕ್ಸ್ ಎಂಟ್ರಿ ಮಾಡಬೇಕು ಕಚೇರಿಗೆ ಬಾ ಎನ್ನುತ್ತಿದ್ದರು. ಈ ಬಗ್ಗೆ ಮಹಿಳಾ ಉಪನ್ಯಾಸಕಿಯೊಬ್ಬರ ಬಳಿ ಹೇಳಿಕೊಂಡಾಗ ಅವರು ಸಮಾಧಾನ ಮಾಡಿದ್ದರು. ಬಳಿಕ ಕೆಲ ಸಹಪಾಠಿಗಳೊಂದಿಗೆ ಹೆಚ್‌ಓಡಿ ಅವರನ್ನು ಭೇಟಿ ಮಾಡಿ, ವಿಷಯ ತಿಳಿಸಿದ್ದೆ. ಆಗ ನನ್ನ ಮೊಬೈಲ್‌ಗೆ ಕರೆ ಮಾಡಿ ಬೆದರಿಸಿದ್ದಲ್ಲದೆ, ಒಳ್ಳೆಯ ಮಾರ್ಕ್ಸ್ ಕೊಡುತ್ತೇನೆ, ಒಳ್ಳೆಯ ಕಂಪನಿಯಲ್ಲಿ ಕೆಲಸ ಕೊಡಿಸುತ್ತೇನೆ ಎಂದು ಹೇಳಿದ್ದರು.

ಇಂಟರ್ನ್‌ಶಿಪ್ ಕಾರಣದಿಂದ ನಿತ್ಯ ಕಾಲೇಜಿಗೆ ಹೋಗಲಾಗುತ್ತಿರಲಿಲ್ಲ. ನ.14ರಂದು ಕಾಲೇಜಿಗೆ ಹೋಗಿದ್ದಾಗ ದೇಹದ ಬಗ್ಗೆ ಕೆಟ್ಟದಾಗಿ ಮಾತನಾಡಿ, ಕ್ಲಬ್‌ಗೆ ಹೋಗಿ ಕುಡಿದು, ಹೊರಗೆ ಹೋಗಿ ಮಜಾ ಮಾಡೋಣ ಎಂದರು. ನಿಮ್ಮ ಹ್ಯಾಂಡ್ ರೈಟಿಂಗ್ ಸಣ್ಣ ಇದೆ, ಹಾಗೆಯೇ ನಿಮ್ಮ ಮಾರ್ಕ್ಸ್ ನನ್ನ ಕೈಯಲ್ಲಿದೆ, ನನ್ನ ಜೊತೆ ಬರಲಿಲ್ಲ ಎಂದರೆ ಫೇಲ್ ಮಾಡುತ್ತೇನೆ ಎಂದು ಹೆದರಿಸಿದರು. ಈ ಬಗ್ಗೆ ಹೆಚ್‌ಓಡಿಗೆ ದೂರು ನೀಡಿದ್ದೇನೆ ಎಂದು ಆರೋಪಿಸಿದ್ದಾರೆ. ವಿದ್ಯಾರ್ಥಿನಿ ದೂರಿನನ್ವಯ ಪೊಲೀಸರು ಪ್ರಕರಣ ದಾಖಲಿಸಿಕೊಂಡು ಮುಂದಿನ ಕ್ರಮ ಕೈಗೊಂಡಿದ್ದಾರೆ.

2026ನೇ ಸಾಲಿನ ಸಾರ್ವತ್ರಿಕ ರಜಾ ದಿನಗಳಿಗೆ ಸರ್ಕಾರದ ಅನುಮೋದನೆ

ಮೈಸೂರು, ನ.16(ಪಿಎಂ)– ರಾಜ್ಯ ಸರ್ಕಾರವು 2026ನೇ ಸಾಲಿನ ಸಾರ್ವತ್ರಿಕ ರಜಾದಿನಗಳ ಪಟ್ಟಿಗೆ ಅನುಮೋದನೆ ನೀಡಿದ್ದು, ಈ ಸಾಲಿನಲ್ಲಿ ಒಟ್ಟು 20 ದಿನಗಳು ಸರ್ಕಾರಿ ರಜೆ ಇರಲಿದೆ. ಎಲ್ಲಾ 2ನೇ ಶನಿವಾರ, 4ನೇ ಶನಿವಾರ ರಜೆ ದಿನಗಳಾಗಿವೆ.

ರಜೆ ದಿನಗಳ ವಿವರ: 2026ರ ಜ.15ರ ಗುರುವಾರ ಉತ್ತರಾಯಣ ಪುಣ್ಯಕಾಲ, ಮಕರ ಸಂಕ್ರಾಂತಿ, ಜ.26ರ ಸೋಮವಾರ ಗಣರಾಜ್ಯೋತ್ಸವ, ಮಾ.19ರ ಗುರುವಾರ ಯುಗಾದಿ ಹಬ್ಬ, ಮಾ.21ರ ಶನಿವಾರ ಖುತುಬ್–ಎ–ರಂಜಾನ್, ಮಾ.31ರ ಮಂಗಳವಾರ ಮಹಾವೀರ ಜಯಂತಿ, ಏ.3ರ ಶುಕ್ರವಾರ ಗುಡ್ ಫ್ರೈಡೆ, ಏ.14ರ ಮಂಗಳವಾರ ಡಾ.ಬಿ.ಆರ್.ಅಂಬೇಡ್ಕರ್ ಜಯಂತಿ, ಏ.20ರ ಸೋಮವಾರ ಬಸವ ಜಯಂತಿ, ಅಕ್ಷಯ ತೃತೀಯ, ಮೇ 1ರ ಶುಕ್ರವಾರ ಕಾರ್ಮಿಕ ದಿನಾಚರಣೆ, ಮೇ 28ರ ಗುರುವಾರ ಬಕ್ರೀದ್, ಜೂ.26ರ ಶುಕ್ರವಾರ ಮೊಹರಂ ಕಡೆ ದಿನ, ಆ.15ರ ಶನಿವಾರ ಸ್ವಾತಂತ್ರ್ಯ ದಿನಾಚರಣೆ, ಆ.26ರ ಬುಧವಾರ ಈದ್ ಮಿಲಾದ್, ಸೆ.14ರ ಸೋಮವಾರ ವರಸಿದ್ಧಿ ವಿನಾಯಕ ವ್ರತ, ಅ.2ರ ಶುಕ್ರವಾರ ಗಾಂಧಿ ಜಯಂತಿ, ಅ.20ರ ಮಂಗಳವಾರ ಮಹಾನವಮಿ, ಆಯುಧಪೂಜೆ, ಅ.21ರ ಬುಧವಾರ ವಿಜಯದಶಮಿ, ನ.10ರ ಮಂಗಳವಾರ ಬಲಿಪಾಡ್ಯಮಿ, ದೀಪಾವಳಿ, ನ.27ರ ಶುಕ್ರವಾರ ಕನಕದಾಸ ಜಯಂತಿ ಹಾಗೂ ಡಿ.25ರ ಶುಕ್ರವಾರ ಕ್ರಿಸ್‌ಮಸ್ ರಜೆಗಳಿಗೆ ಅನುಮೋದನೆ ನೀಡಲಾಗಿದೆ.

ರಜಾ ಪಟ್ಟಿಯಲ್ಲಿ ಭಾನುವಾರಗಳಂದು ಬರುವ ಮಹಾಶಿವರಾತ್ರಿ (15–2–2026), ಮಹರ್ಷಿ ವಾಲ್ಮೀಕಿ ಜಯಂತಿ (25–10–2026), ಕನ್ನಡ ರಾಜ್ಯೋತ್ಸವ (1–11–2026), ನರಕ ಚತುರ್ದಶಿ (8–11–2026) ಹಾಗೂ 2ನೇ ಶನಿವಾರದಂದು ಬರುವ ಮಹಾಲಯ ಅಮವಾಸ್ಯೆಯನ್ನು (10–10–2026) ಈ ರಜೆ ಪಟ್ಟಿಯಲ್ಲಿ ನಮೂದಿಸಿಲ್ಲ. ಸಾರ್ವತ್ರಿಕ ರಜಾ ದಿನಗಳಲ್ಲಿ ರಾಜ್ಯಾದ್ಯಂತ ಸರ್ಕಾರಿ ಕಚೇರಿಗಳು ಮುಚ್ಚಲ್ಪಡುತ್ತವೆ. ಕಚೇರಿಯ ಜರೂರು ಕೆಲಸವನ್ನು ವಿಲೇವಾರಿ ಮಾಡುವ ಬಗ್ಗೆ ಇಲಾಖಾ ಮುಖ್ಯಸ್ಥರು ಸೂಕ್ತ ವ್ಯವಸ್ಥೆ ಮಾಡಬೇಕಾಗುತ್ತದೆ.

ಈ ಪಟ್ಟಿಯಲ್ಲಿ ಸೇರಿಸಲಾಗಿರುವ ಮುಸಲ್ಮಾನ ಬಾಂಧವರ ಹಬ್ಬಗಳು ನಿಗದಿತ ದಿನಾಂಕದಂದು ಬೀಳದಿದ್ದರೆ ಸರ್ಕಾರಿ ಸೇವೆಯಲ್ಲಿರುವ ಮುಸಲ್ಮಾನ ಬಾಂಧವರಿಗೆ ನಿಗದಿತ ರಜೆಗೆ ಬದಲಾಗಿ ಹಬ್ಬದ ದಿನ ರಜಾ ಮಂಜೂರು ಮಾಡಬಹುದು. ದಿನಾಂಕ 3–9–2026 (ಗುರುವಾರ) ಕೈಲ್ ಮೂಹೂರ್ತ, ದಿನಾಂಕ 18–10–2026 (ಭಾನುವಾರ) ತುಲಾ ಸಂಕ್ರಮಣ, ದಿನಾಂಕ 26–11–2026 (ಗುರುವಾರ) ಹುತ್ತರಿ ಹಬ್ಬವನ್ನು ಆಚರಿಸಲು ಕೊಡಗು ಜಿಲ್ಲೆಗೆ ಮಾತ್ರ ಅನ್ವಯವಾಗುವಂತೆ ಸ್ಥಳೀಯ ಸಾರ್ವತ್ರಿಕ ರಜೆ ಘೋಷಿಸಲಾಗಿದೆ. ಶಿಕ್ಷಣ ಇಲಾಖೆಗೆ ಸಂಬಂಧಿಸಿದ ರಜೆಗಳಿಗೆ ಅನ್ವಯಿಸಿದಂತೆ ಪ್ರತ್ಯೇಕ ರಜಾ ದಿನಗಳ ಪಟ್ಟಿಯನ್ನು ಸಾರ್ವಜನಿಕ ಶಿಕ್ಷಣ ಇಲಾಖೆ ಆಯುಕ್ತರು ಪ್ರಕಟಿಸಬೇಕಾಗಿದೆ. ಸಾರ್ವತ್ರಿಕ ವರ್ಷದಲ್ಲಿ ಅಧಿಸೂಚನೆ 1ರ ಅನುಬಂಧದಲ್ಲಿ ತಿಳಿಸಿರುವ ಪರಿಮಿತ ರಜೆಯನ್ನು ಪೂರ್ವಾನುಮತಿ ಪಡೆದು ಉಪಯೋಗಿಸಿಕೊಳ್ಳಬಹುದು. ಸಾಂದರ್ಭಿಕ ರಜೆಯನ್ನು ಮಂಜೂರು ಮಾಡಲು ಅಧಿಕಾರವುಳ್ಳ ಅಧಿಕಾರಿಗಳು ಪ್ರಸ್ತುತ ಅನುಮತಿಗೆ ಮಂಜೂರಾತಿ ನೀಡತಕ್ಕದ್ದು ಎಂದು ತಿಳಿಸಲಾಗಿದೆ.

ಕನ್ನಡ ನಾಡಿನ ಉದಯಕ್ಕೆ ಕಾರಣರಾದವರ ಸ್ಮರಿಸಬೇಕಿದೆ

ದೀಪಾ ಶಾಲೆಯಲ್ಲಿ ರಾಜ್ಯೋತ್ಸವ, ಕನಕದಾಸ ಜಯಂತಿ ಹಾಗೂ ಅಂತರಶಾಲಾ ಸ್ಪರ್ಧೆ

ಮೈಸೂರು, ನ. 16– ರೂಪಾ ನಗರದ ದೀಪಾ ಶಾಲೆಯಲ್ಲಿ ಶನಿವಾರ ಕರ್ನಾಟಕ ರಾಜ್ಯೋತ್ಸವ, ಕನಕದಾಸ ಜಯಂತಿ ಆಚರಿಸಲಾಯಿತು. ಇದೇ ವೇಳೆ ಅಂತರ ಶಾಲಾ ಸ್ಪರ್ಧೆ ಏರ್ಪಡಿಸಲಾಗಿತ್ತು.

ದೀಪಾ ಸಂಸ್ಥೆಯ ಅಧ್ಯಕ್ಷರೂ ಆದ ರಾಜ್ಯ ಭೋವಿ ಅಭಿವೃದ್ಧಿ ನಿಗಮದ ಅಧ್ಯಕ್ಷ ಎಂ. ರಾಮಪ್ಪ ಅಧ್ಯಕ್ಷತೆ ವಹಿಸಿದ್ದರು. ಹಿರಿಯ ಪತ್ರಕರ್ತ ಅಂಶಿ ಪ್ರಸನ್ನ ಕುಮಾರ್ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಏಕೀಕರಣ ಹೋರಾಟದಿಂದಾಗಿ ಕನ್ನಡ ಮಾತನಾಡುವ ಜನರೆಲ್ಲಾ ಒಂದೆಡೆ ಸೇರುವಂತೆ ಆಯಿತು. ಭಾಷಾವಾರು ಪ್ರಾಂತ್ಯ ರಚನೆಯಿಂದಾಗಿ ಪ್ರತಿ ವರ್ಷ ನ.1 ರಂದು ರಾಜ್ಯೋತ್ಸವ ಆಚರಿಸಲಾಗುತ್ತದೆ. ಈ ದಿನ ನಾವೆಲ್ಲರೂ ಇದಕ್ಕಾಗಿ ಶ್ರಮಿಸಿದ ಹೋರಾಟಗಾರರನ್ನು ಸ್ಮರಿಸಬೇಕು. ಎಲ್ಲೇ ಇದ್ದರೂ ಕನ್ನಡದ ಬಗ್ಗೆ ಪ್ರೀತಿ, ಅಭಿಮಾನ ಹೊಂದಿರಬೇಕು ಎಂದರು.

ಮುಖ್ಯ ಅತಿಥಿಯಾಗಿದ್ದ ಮೈಸೂರು ಗ್ರಾಮಾಂತರ ಡಿವೈಎಸ್ಪಿ ರಾಜಣ್ಣ ಮಾತನಾಡಿ, ವಿದ್ಯಾರ್ಥಿಗಳು ತಮ್ಮ ಜೀವನದಲ್ಲಿ ಗುರಿ ಹೊಂದಿರಬೇಕು ಎಂದು ತಿಳಿಸಿದರು. ಬಾಲ್ಯವಿವಾಹ ನಿಷೇಧ ಕಾಯ್ದೆಯ ಕುರಿತು ಅರಿವು ಮೂಡಿಸಿದರು.

ಅಂತರಶಾಲಾ ಸ್ಪರ್ಧೆಯಲ್ಲಿ ವಿವಿಧ ಶಾಲೆಯ ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಸಂಸ್ಥೆಯ ಉಪಾಧ್ಯಕ್ಷ ಸದಾಶಿವ ಪೂಜಾರಿ, ಕಾರ್ಯದರ್ಶಿ ಸುಬ್ಬರಾವ್, ನಿರ್ದೇಶಕ ಬಾಲಕೃಷ್ಣ, ದೀಪಾ ರಿಕ್ರೀಯೇಷನ್ ಕ್ಲಬ್‌ನ ಅಧ್ಯಕ್ಷ ಅಜಯ್ ಕುಮಾರ್, ಪ್ರಾಂಶುಪಾಲೆ ಪ್ರಣಿತ ಎರ್ಮಾಳ್, ಪ್ರೌಢಶಾಲೆಯ ಮುಖ್ಯೋಪಾಧ್ಯಾಯಿನಿ ಶಿಲ್ಪಾ ಜಗದೀಶ್, ದೀಪಾ ಕಿರಿಯ ಪ್ರಾಥಮಿಕ ಶಾಲಾ ಮುಖ್ಯೋಪಾಧ್ಯಾಯರ ಎ.ಕೆ. ಬಾಬು, ಸಹ ಮುಖ್ಯೋಪಾಧ್ಯಾಯಿನಿ ತುಳಸಿ, ಸಂಯೋಜಕಿ ವಾರುಣಿ ಉಪಸ್ಥಿತರಿದ್ದರು. ಎಚ್.ಎಸ್. ಕುಸುಮಾ ಕಾರ್ಯಕ್ರಮ ನಿರೂಪಿಸಿದರು.

ಸಂಯೋಜಕ ರವಿಶಂಕರ್ ಸ್ವಾಗತಿಸಿದರು. ಪಾರ್ವತಿ ವಂದಿಸಿದರು. ಎಲ್ಲಾ ಉಪನ್ಯಾಸಕ ವರ್ಗ, ಶಿಕ್ಷಕ, ಶಿಕ್ಷಕೇತರ ವೃಂದದವರು ಹಾಗೂ ವಿದ್ಯಾರ್ಥಿಗಳು ಭಾಗವಹಿಸಿದ್ದರು. ವೃಕ್ಷಮಾತೆ ಸಾಲುಮರದ ತಿಮ್ಮಕ್ಕ ಅವರ ನಿಧನದ ಹಿನ್ನೆಲೆಯಲ್ಲಿ ಒಂದು ನಿಮಿಷ ಮೌನ ಆಚರಿಸಿ, ಶ್ರದ್ಧಾಂಜಲಿ ಅರ್ಪಿಸಲಾಯಿತು.



ಮೈಸೂರಿನ ರೂಪಾನಗರದ ದೀಪಾ ಶಾಲೆಯಲ್ಲಿ ಶನಿವಾರ ರಾಜ್ಯೋತ್ಸವ, ಕನಕದಾಸ ಜಯಂತಿ ಆಚರಿಸಲಾಯಿತು.

ಮೈಸೂರು ಮಿತ್ರ ಸೋಮವಾರ 17 ನವೆಂಬರ್ 2025

ಈಶಾನ್ಯ ರಾಜ್ಯಗಳು ದೇಶದ ಮುಖವಾಣಿಯಿದ್ದಂತೆ

ಕೇಂದ್ರ ಮಾನವ ಸಂಪನ್ಮೂಲ ವಿಭಾಗದ ಸದಸ್ಯ ಡಾ.ಆರ್.ಬಾಲಸುಬ್ರಹ್ಮಣ್ಯ



ಮೈಸೂರಿನ ಭಾರತೀಯ ಭಾಷಾ ಸಂಸ್ಥಾನ (ಸಿಐಐಎಲ್) ಸಹಯೋಗದೊಂದಿಗೆ ಕನ್ಯಾಕುಮಾರಿ ವಿವೇಕಾನಂದ ಕೇಂದ್ರ ಮತ್ತು ವಿವೇಕಾನಂದ ರಾಕ್ ಮೆಮೋರಿಯರ್ ವತಿಯಿಂದ ಆಯೋಜಿಸಿದ್ದ 'ನಾರ್ಥ್ ಈಸ್ಟ್ ಕಾಲಿಂಗ್' ಕಾರ್ಯಕ್ರಮವನ್ನು ವಿವೇಕಾನಂದರ ಪ್ರತಿಮೆಗೆ ಪುಷ್ಪಾರ್ಚನೆ ಮಾಡುವ ಮೂಲಕ ಆರಂಭಿಸಲಾಯಿತು.

ಮೈಸೂರು,ನ.16(ಜಿಎ)–ಭಾರತ ದೇಶಕ್ಕೆ ಈಶಾನ್ಯ ರಾಜ್ಯಗಳು ಮುಖ ವಾಣಿಯಿದ್ದಂತೆ ಎಂದು ಕೇಂದ್ರ ಸರ್ಕಾರದ ಮಾನವ ಸಂಪನ್ಮೂಲ ವಿಭಾಗ (ಸಾಮರ್ಥ್ಯ ನಿರ್ಮಾಣ ಆಯೋಗ)ದ ಸದಸ್ಯ ಡಾ. ಆರ್.ಬಾಲಸುಬ್ರಹ್ಮಣ್ಯ ಅಭಿಪ್ರಾಯಪಟ್ಟರು.

ಮೈಸೂರಿನ ಭಾರತೀಯ ಭಾಷಾ ಸಂಸ್ಥಾನ (ಸಿಐಐಎಲ್) ಸಹಯೋಗದೊಂದಿಗೆ ಕನ್ಯಾಕುಮಾರಿ ವಿವೇಕಾನಂದ ಕೇಂದ್ರ ಮತ್ತು ವಿವೇಕಾನಂದ ರಾಕ್ ಮೆಮೋರಿಯರ್ ವತಿಯಿಂದ ಆಯೋಜಿಸಿದ್ದ 'ನಾರ್ಥ್ ಈಸ್ಟ್ ಕಾಲಿಂಗ್' ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಸರ್ಕಾರಗಳು ಈಶಾನ್ಯ ರಾಜ್ಯಕ್ಕೆ ಬಲತುಂಬುವ ಹಾಗೂ ಅಭಿವೃದ್ಧಿ ಕೆಲಸ ಮಾಡಬಹುದು. ಆದರೆ ಸಮಾಜವು ಅವರನ್ನು ಭಾವನಾತ್ಮಕವಾಗಿ ಅರ್ಥೈಸಿಕೊಂಡು ಬೆಂಬಲಿಸಬೇಕು. ವಿಶಾಲ ಹೃದಯದಿಂದ ಕಾಣಲು ಮುಂದಾಗಬೇಕು ಎಂದು ತಿಳಿಸಿದರು.

ಈಶಾನ್ಯ ರಾಜ್ಯಗಳೆಂದರೆ ನೃತ್ಯ ಮತ್ತು ಸಂಗೀತವಷ್ಟೇ ಅಲ್ಲ, ಅಲ್ಲಿ ಅನೇಕ ಆಳವಾದ ಅಧ್ಯಯನ ಯೋಗ್ಯ ವಿಚಾರಗಳಿವೆ. ಅವರೊಂದಿಗೆ ಭಾವನಾತ್ಮಕವಾಗಿ ಸಂವಹನ ಬೆಳೆಸುವ ಕೆಲಸವಾಗಬೇಕಿದೆ. ಈಶಾನ್ಯದ ರಾಜ್ಯಗಳನ್ನು ಪ್ರವಾಸದ ದೃಷ್ಟಿಯಿಂದಷ್ಟೇ ನೋಡದೆ, ಅಲ್ಲಿನ ಜನರನ್ನು ಅರ್ಥೈಸಿಕೊಳ್ಳುವ ಪ್ರಯತ್ನಿಸಬೇಕು ಎಂದು ಸಲಹೆ ನೀಡಿದರು.

ದಿಢೀರ್ ಮುಚ್ಚುವ ರಸ್ತೆಗಳು, ರಾಜಕೀಯ ಸ್ಥಾನಪಲ್ಲಟ, ಇಂಟರ್‌ನೆಟ್ ಸೌಲಭ್ಯ ವಿರಳವಾಗಿರುವ ಜಗತ್ತಿನಲ್ಲಿ ಸಮಸ್ಯೆಗಳ ನಡುವೆ ಅಲ್ಲಿನ ಜನ ಸುಂದರ ಬದುಕು ಕಟ್ಟಿಕೊಂಡಿದ್ದಾರೆ. ಪ್ರತಿ ಎರಡು ಕಿ.ಮೀಗೆ ಭಾಷೆ, ಜನಜೀವನ, ಬಣ್ಣಗಳಲ್ಲಿ ಪರಿವರ್ತನೆ ಕಾಣಸಿಗುತ್ತದೆ. 800ರಿಂದ 900 ರೀತಿಯಲ್ಲಿ ಅಕ್ಕಿಯನ್ನು ಬಳಸುತ್ತಾರೆ. ಈ ವೈವಿಧ್ಯತೆ ಇತರೆಡೆ ಕಾಣುವುದು ಅಸಾಧ್ಯ.

ಸ್ವಾಮಿ ವಿವೇಕಾನಂದರು ಈರುಳ್ಳಿ ಸಿಪ್ಪೆಯಿದ್ದಂತೆ, ಅವರ ಬಗ್ಗೆ ತಿಳಿಯುತ್ತಾ ಹೋದಂತೆ ವಿವಿಧ ಮಜಲುಗಳಲ್ಲಿ ತೆರೆದುಕೊಳ್ಳುತ್ತದೆ. ಅವರನ್ನು ಅರ್ಥೈಸಿಕೊಳ್ಳುವ ಪ್ರಯತ್ನವಷ್ಟೇ ಮಾಡಬಹುದು. ಸಂಪೂರ್ಣವಾಗಿ ಅರ್ಥೈಸಿಕೊಳ್ಳುವುದು ಅಸಾಧ್ಯ. ದೇಶ ಸೇವೆಯ ಮೂಲಕ ಅವರ ವಿಚಾರಗಳನ್ನು ಅರಿಯೋಣ ಎಂದರು.

ತ್ಯಾಗ ಮತ್ತು ಸೇವೆ ನಮ್ಮ ಧ್ಯೇಯವಾಗಬೇಕು ಎಂದು ಸ್ವಾಮಿ ವಿವೇಕಾನಂದರು ತಿಳಿಸಿದ್ದಾರೆ. ಅವರ ಆದರ್ಶಗಳನ್ನು ಮುಂದಿಟ್ಟುಕೊಂಡು ಈಶಾನ್ಯದ ಬಗ್ಗೆ ಚರ್ಚಿಸಬೇಕಿದೆ. ಅಮೇರಿಕಾದ ಲೇಖಕಿಯೊಬ್ಬರು ವಿವೇಕಾನಂದರು ಅಮೇರಿಕಾದಲ್ಲಿ ಪರ್ಯಟನೆ ಮಾಡಿದ ಬಳಿಕ ಅಲ್ಲಿ ಸಾಮಾಜಿಕ ಪರಿವರ್ತನೆ ಆರಂಭವಾಯಿತು. ಆದರೆ ಅವರ ಕೊಡುಗೆಗಳನ್ನು ಬಿಚ್ಚಿ ನೋಡುವ ಭಾವನೆ ಇಲ್ಲದಾಗಿದೆ ಎಂದು ಬರೆಯುತ್ತಾರೆ. ದೇಶದಲ್ಲೂ ಅದೇ ಪರಿಸ್ಥಿತಿ ಇದೆ ಎಂದು ಬೇಸರ ವ್ಯಕ್ತಪಡಿಸಿದರು.

ಕಾರ್ಯಕ್ರಮದಲ್ಲಿ ವಿಜಯ ವಿಠಲ ಶಾಲೆ ವಿದ್ಯಾರ್ಥಿಗಳು ಮೇಘಾಲಯದ ಖಾಸಿ ಭಾಷೆಯ ಹಾಡು ಹಾಡಿದರು. ವಿದ್ಯಾರ್ಥಿನಿಯರು ಈಶಾನ್ಯ ರಾಜ್ಯದ ಸಂಸ್ಕೃತಿ ಬಿಂಬಿಸುವ ನೃತ್ಯ ಪ್ರದರ್ಶಿಸಿ, ಎಲ್ಲರ ಗಮನ ಸೆಳೆದರು. ಮೈಸೂರು ಕೊಡಗು ಸಂಸದ ಯದುವೀರ್ ಒಡೆಯರ್ ಅವರು ವೀಡಿಯೊ ಮೂಲಕ ಸಂದೇಶ ನೀಡಿದರು. ಭಾರತೀಯ ಭಾಷಾ ಸಂಸ್ಥಾನದ ನಿರ್ದೇಶಕ ಪ್ರೊ.ಶೈಲೇಂದ್ರ ಮೋಹನ್, ಕನ್ಯಾಕುಮಾರಿ ವಿವೇಕಾನಂದ ಕೇಂದ್ರದ ನಿವೇದಿತಾ ಬಿಡೆ ಉಪಸ್ಥಿತರಿದ್ದರು.

ಸಾಧಕರಿಗೆ ರಾಜಮಾತೆ ಲಕ್ಷ್ಮಮ್ಮಣ್ಣಿ ಪ್ರಶಸ್ತಿ ಪ್ರದಾನ

ಮಹಿಳೆಯರು ಮುಖ್ಯ ಭೂಮಿಕೆಗೆ ಬರಬೇಕು, ಅವರಿಗೆ ಗೌರವ ಕೊಡಬೇಕು



ಮೈಸೂರಿನ ಸರಸ್ವತಿಪುರಂನ ರೋಟರಿ ಪಶ್ಚಿಮ ಸಭಾಂಗಣದಲ್ಲಿ ಅರಸು ಮಹಿಳಾ ಜಾಗೃತಿ ಸಭಾ ಟ್ರಸ್ಟ್ ವತಿಯಿಂದ ವಿವಿಧ ಕ್ಷೇತ್ರದ ಸಾಧಕರಿಗೆ ರಾಜಮಾತೆ ಲಕ್ಷ್ಮಮ್ಮಣ್ಣಿ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಮೈಸೂರು,ನ.16(ಜಿಎ)–ಮೈಸೂರಿನ ಸರಸ್ವತಿಪುರಂನ ರೋಟರಿ ಪಶ್ಚಿಮ ಸಭಾಂಗಣದಲ್ಲಿ ಅರಸು ಮಹಿಳಾ ಜಾಗೃತಿ ಸಭಾ ಟ್ರಸ್ಟ್‌ನ 5ನೇ ವರ್ಷದ ವಾರ್ಷಿಕೋತ್ಸವದ ಅಂಗವಾಗಿ ವಿವಿಧ ಕ್ಷೇತ್ರದ ಸಾಧಕರಿಗೆ ರಾಜಮಾತೆ ಲಕ್ಷ್ಮಮ್ಮಣ್ಣಿ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಕಾರ್ಯಕ್ರಮದಲ್ಲಿ ಸಾಮಾಜಿಕ ಕ್ಷೇತ್ರದಲ್ಲಿ ಶುಭ ಸಂಜಯ್ ಅರಸ್, ಚಲನಚಿತ್ರ ಕ್ಷೇತ್ರದಲ್ಲಿ ಮಂಜುಳ ಅರಸ್, ಕರಕುಶಲ ಕ್ಷೇತ್ರದಲ್ಲಿ ಶಾರದ ಅರಸ್ ಮತ್ತು ಜಾಹೀರಾತು ಕ್ಷೇತ್ರದಲ್ಲಿ ಮೋನಿಕಾ ಅರಸ್ ಅವರಿಗೆ ರಾಜಮಾತೆ ಲಕ್ಷ್ಮಮ್ಮಣ್ಣಿ ಪ್ರಶಸ್ತಿ ನೀಡಿ ಅಭಿನಂದಿಸಲಾಯಿತು.

ಕಾರ್ಯಕ್ರಮ ಉದ್ಘಾಟಿಸಿದ ಬಾಹ್ಯಾಕಾಶ ಇಲಾಖೆ ನಿರ್ದೇಶಕ ಕೆ.ಆರ್. ಆದರ್ಶ್ ಅರಸ್ ಮಾತನಾಡಿ, ದೇಶದ ಅಭಿವೃದ್ಧಿಯಲ್ಲಿ ಮಹಿಳೆಯರು ಪ್ರಮುಖ ಪಾತ್ರ ವಹಿಸುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಯಾವುದೇ ಅಂಜಿಕೆ ಇಲ್ಲದೇ ಸಮಾಜದಲ್ಲಿ ತೊಡಗಿಕೊಂಡು ಮಹಿಳೆಯರು ಸಮಾಜದ ಮುಖ್ಯ ಭೂಮಿಕೆಗೆ ಬಂದಾಗ ಮಾತ್ರ ರಾಜ್ಯ ಮತ್ತು ದೇಶದ ಅಭಿವೃದ್ಧಿಯಾಗಲು ಸಾಧ್ಯ. ಗಂಡು, ಹೆಣ್ಣು ಎಂಬ ಭೇದ ಭಾವ ಬಿಡಬೇಕು. ಪ್ರಮುಖವಾಗಿ ಮನೆಗಳಲ್ಲಿ ಹೆಣ್ಣಿಗೆ ಗೌರವ ನೀಡುವಂತೆ ಪೋಷಕರು ಮಕ್ಕಳಿಗೆ ಹೇಳಿಕೊಡಬೇಕು ಎಂದರು.

ಪಂಚಾಯತ್‌ರಾಜ್ ಇಲಾಖೆ ಅಧೀಕ್ಷಕ ಇಂಜಿನಿಯರ್ ಕೆ.ಜೆ.ಸಿಂಧು ಅರಸ್ ಮಾತನಾಡಿ, ಮೈಸೂರು ಇಷ್ಟು ಅಭಿವೃದ್ಧಿ ನಗರವಾಗಿರುವ ಕೀರ್ತಿ ಇಲ್ಲಿನ ರಾಜವಂಶಸ್ಥರಿಗೆ ಸಲ್ಲಬೇಕು. ಮೊದಲು ನಾನು ಪಾಲಿಕೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದಾಗ ರಾಜರು ಮೈಸೂರು ನೀಡಿರುವ ಕೊಡುಗೆ ಮಹತ್ವ ಅರಿತುಕೊಂಡಿದ್ದೇನೆ. ಕೆಆರ್‌ಎಸ್ ಅಣೆಕಟ್ಟು ನಿರ್ಮಾಣದಿಂದಲೇ ಇಂದು ಎರಡು ಜಿಲ್ಲೆಯ ಜನರು ಕೃಷಿ ಮಾಡಲು ಸಾಧ್ಯವಾಗಿದೆ ಎಂದು ತಿಳಿಸಿದರು.

ರಾಜರ ಚಿಂತನೆಗಳಿಂದ ಮೈಸೂರು ಭಾಗವೂ ಇಂದು ಸುಭೀಕ್ಷವಾಗಿದೆ. ಅಂದಿನ ಕಾಲದಲ್ಲಿಯೇ ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಹೆಚ್ಚಿನ ಒತ್ತು ನೀಡಲಾಯಿತು. ಶಾಲಾ–ಕಾಲೇಜುಗಳನ್ನು ಸ್ಥಾಪಿಸಿ ಮಹಿಳಾ ಸಬಲೀಕರಣಕ್ಕೆ ನಾಂದಿ ಹಾಡಿದರು. ಪ್ರತಿಭಾವಂತರನ್ನು ಗುರುತಿಸಿ ಗೌರವಿಸುವ ಕೆಲಸವನ್ನು ಅರಸು ಮಹಿಳಾ ಸಂಘ ಮುಂದುವರಿಸಬೇಕು ಎಂದರು.

ಪ್ರಶಸ್ತಿ ಸ್ವೀಕರಿಸಿದ ಶುಭ ಸಂಜಯ್ ಅರಸ್ ಮಾತನಾಡಿ, ರಾಜಮಾತೆ ಲಕ್ಷ್ಮಮ್ಮಣ್ಣಿ ಅವರು ಧೈರ್ಯ ತ್ಯಾಗ ಮತ್ತು ಅಚಲ ಸಮರ್ಪಣೆಯ ಪ್ರತೀಕವಾಗಿದ್ದಾರೆ. ದೂರದೃಷ್ಟಿ ಹೊಂದಿದ್ದ ಅವರು ಅನೇಕ ಕಷ್ಟಗಳನ್ನು ಎದುರಿಸಿ, ಕರ್ತವ್ಯವನ್ನು ಎಂದು ಬಿಟ್ಟುಕೊಡದೇ ಸೇವೆ ಮತ್ತು ತ್ಯಾಗಕ್ಕೆ ಅರ್ಥ ನೀಡಿದರು. ಅವರು ಶತಮಾನದ ಮಾದರಿ ಹೆಣ್ಣಾಗಿದ್ದಾರೆ. ಅವರ ಜೀವನವೇ ನಮಗೆ ದೊಡ್ಡ ಪಾಠ ಎಂದರು.

ಸಾಹಿತ್ಯದಿಂದ ಪ್ರೇರಿತವಾದ ನನ್ನ ಸಮಾಜಮುಖಿ ಕಾರ್ಯಗಳಿಗಾಗಿ ನೀಡಲಾಗಿರುವ ಲಕ್ಷ್ಮಮ್ಮಣ್ಣಿಯವರ ಪ್ರಶಸ್ತಿಯನ್ನು ಸ್ವೀಕರಿಸಿದ್ದು ಸಂತಸ ತಂದಿದ್ದು, ಈ ಪ್ರಶಸ್ತಿಯಿಂದಾಗಿ ಓದುವುದು ಸಮಾಜ ಸುಧಾರಣೆಗೆ ಪ್ರೇರಕ ಶಕ್ತಿ ಎಂಬ ನನ್ನ ನಂಬಿಕೆಯನ್ನು ಮತ್ತಷ್ಟು ಬಲಪಡಿಸಿದ್ದೀರ ಎಂದು ತಿಳಿಸಿದರು.

ಅರಸು ಮಹಿಳಾ ಜಾಗೃತಿ ಸಭಾ ಟ್ರಸ್ಟ್‌ನ ಸಂಸ್ಥಾಪಕ ಅಧ್ಯಕ್ಷೆ ಡಾ.ಪಿ.ಬಿ.ಇಂದು ಕಲಾ ಅರಸ್ ಮಾತನಾಡಿ, ಅರಸು ಸಮುದಾಯದ ಪ್ರಮಾಣ ಕಡಿಮೆ ಸಂಖ್ಯೆಯಲ್ಲಿದೆ. ಆದರೆ, ಅವಕಾಶಗಳು ಹೆಚ್ಚಿವೆ. ಅವುಗಳ ಮೂಲಕ ಸಮಾಜದ ಮುಖ್ಯ ಭೂಮಿಕೆಗೆ ಬರಬಹುದಾಗಿದೆ. ಆದರೆ, ನಗರ ಪ್ರದೇಶದಲ್ಲಿರುವ ಮಹಿಳೆಯರಿಗೆ ಅನೇಕ ಯೋಜನೆಗಳನ್ನು ಬಳಸಿಕೊಳ್ಳಲು ಆಸಕ್ತಿ ಇಲ್ಲ. ಗ್ರಾಮಾಂತರ ಪ್ರದೇಶದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಇದರ ಅನುಕೂಲ ಪಡೆದುಕೊಳ್ಳುತ್ತಿದ್ದಾರೆ ಎಂದು ವಿವರಿಸಿದರು. ಕಾರ್ಯಕ್ರಮದಲ್ಲಿ ಕೆ.ಆರ್. ಪೇಟೆಯ ಪರಿಸರ ಅಭಿಯಂತರರು ಪ್ರಿಯಾಂಕ ಅರಸ್, ಶಿಕ್ಷಣ ತಜ್ಞೆ ಭ್ರಮರ ಬಹದ್ದೂರ್, ಚುಟುಕು ಸಾಹಿತ್ಯ ಪರಿಷತ್ ಅಧ್ಯಕ್ಷ ಚುಟುಕು ಯುಗಾಚಾರ್ಯ ಡಾ.ಎಂ.ಜಿ.ಆರ್.ಅರಸ್, ಅರಸು ಮಹಿಳಾ ಜಾಗೃತಿ ಸಭಾ ಟ್ರಸ್ಟ್‌ನ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಸಿಗ್ಮಾ ಆಸ್ಪತ್ರೆಯಲ್ಲಿ ವಿಶ್ವ ಮಧುಮೇಹ, ಮಕ್ಕಳ ದಿನಾಚರಣೆ



ಮೈಸೂರಿನ ಸಿಗ್ಮಾ ಆಸ್ಪತ್ರೆಯಲ್ಲಿ ವಿಶ್ವ ಮಧುಮೇಹ ದಿನ ಮತ್ತು ಮಕ್ಕಳ ದಿನಾಚರಣೆ ಆಚರಿಸಲಾಯಿತು. ಈ ವೇಳೆ ಆಸ್ಪತ್ರೆ ವ್ಯವಸ್ಥಾಪಕ ನಿರ್ದೇಶಕ ಎಸ್.ಜ್ಞಾನಶಂಕರ್, ಮಕ್ಕಳ ತಜ್ಞರಾದ ಡಾ.ರಾಜೇಶ್ವರಿ ಮಾದಪ್ಪ, ನಿರ್ದೇಶಕರಾದ ಶೈಲಾ ಶಂಕರ್, ಡಾ.ರಾಕೇಶ್ ರಾಜೇ ಅರಸ್, ಡಾ॥ ಅನಿಕೇತ್ ಪ್ರಭಾಕರ್, ಡಾ.ಶ್ರೀದೇವಿ, ಡಾ.ಕನ್ಯಾ ಎಂ ಎಸ್, ಡಾ.ಮಮತಾ, ಮ್ಯಾನೇಜರ್ ಶ್ರೀಮತಿ ಭ್ರಮರಾಂಭ ಅರಸ್, ನರ್ಸಿಂಗ್ ಸೂಪರಿಂಟೆಂಡೆಂಟ್ ಶ್ರೀಮತಿ ದಮಯಂತಿ, ಮಾನವ ಸಂಪನ್ಮೂಲದ ಶ್ರೀಮತಿ ನಿರೀಕ್ಷಾ ಅರಸ್, ಆಹಾರ ತಜ್ಞರಾದ ಕುಮಾರಿ ಪವಿತ್ರ ಹಾಗೂ ಆಸ್ಪತ್ರೆಯ ವೈದ್ಯರು, ಸಿಬ್ಬಂದಿ ಹಾಜರಿದ್ದರು.



ಶಾಲಾ ಶಿಕ್ಷಣ–ಸಾಕ್ಷರತಾ ಇಲಾಖೆ ವತಿಯಿಂದ ಅಮ್ಮತ್ತಿಯಲ್ಲಿ ಏರ್ಪಡಿಸಿದ್ದ ವಿಭಾಗ ಮಟ್ಟದ ಫುಟ್‌ಬಾಲ್ ಸ್ಪರ್ಧೆಯಲ್ಲಿ ಸುತ್ತೂರು ಜೆಎಸ್‌ಎಸ್ ವಸತಿ ಶಾಲೆಯ ವಿದ್ಯಾರ್ಥಿಗಳು ಭಾಗವಹಿಸಿ ದ್ವಿತೀಯ ಸ್ಥಾನ ಪಡೆದು, ಐವರು ವಿದ್ಯಾರ್ಥಿಗಳು ರಾಜ್ಯಮಟ್ಟದ ಸ್ಪರ್ಧೆಯಲ್ಲಿ ಭಾಗವಹಿಸಿದ್ದಾರೆ.

ದೆಹಲಿ ಸ್ಫೋಟದ ಸ್ಥಳದಲ್ಲಿ 9 ಎಂಎಂ ಕಾರ್ಟ್ರಿಡ್ಜ್‌ಗಳು ಪತ್ತೆ; ಭಯೋತ್ಪಾದಕ ನಂಟು ದೃಢ

ನವದೆಹಲಿ: ಕೆಂಪು ಕೋಟೆ ಕಾರು ಸ್ಫೋಟ ಪ್ರಕರಣದಲ್ಲಿ ಮಹತ್ವದ ಬೆಳವಣಿಗೆಯೊಂದು ಕಂಡು ಬಂದಿದೆ. ಕಾರು ಸ್ಫೋಟಗೊಂಡ ಸ್ಥಳದಿಂದ ದೆಹಲಿ ಪೊಲೀಸರು ಮೂರು 9 ಎಂಎಂ ಕಾರ್ಟ್ರಿಡ್ಜ್‌ಗಳನ್ನು ವಶಪಡಿಸಿಕೊಂಡಿದ್ದಾರೆ ಎಂದು ಮೂಲಗಳು ತಿಳಿಸಿವೆ.



ಪ್ರಕರಣಕ್ಕೆ ಸಂಬಂಧಿಸಿದಂತೆ ಉನ್ನತ ಮಟ್ಟದ ತನಿಖೆ ವೇಳೆ ಕಾರ್ಟ್ರಿಡ್ಜ್‌ಗಳು ಸಿಕ್ಕಿದ್ದು 2 ಕಾರ್ಟ್ರಿಜ್‌ಗಳು ಜೀವಂತ ಗುಂಡುಗಳಾಗಿದ್ದರೆ, ಮೂರನೆಯದು ಖಾಲಿ ಶೆಲ್ ಆಗಿದೆ ಎಂದು ತಿಳಿದು ಬಂದಿದೆ. ಸ್ಥಳದಲ್ಲಿ ಯಾವುದೇ ಪಿಸ್ತೂಲ್ ಅಥವಾ ಶಸ್ತ್ರಾಸ್ತ್ರಗಳು ಪತ್ತೆಯಾಗಿಲ್ಲ. ಈ ಕಾರ್ಟ್ರಿಡ್ಜ್‌ಗಳನ್ನು ಸಾಮಾನ್ಯವಾಗಿ ಸಶಸ್ತ್ರ ಪಡೆಗಳು ಅಥವಾ ವಿಶೇಷ ಅನುಮತಿ ಹೊಂದಿರುವವರು ಮಾತ್ರ ಹೊಂದಿರುತ್ತಾರೆ. ಶಂಕಿತನ ಬಳಿ ಈ ಕಾರ್ಟ್ರಿಡ್ಜ್‌ಗಳಿದ್ದವೇ ಎಂಬುದರ ಕುರಿತು ಅನುಮಾನಗಳು ಮೂಡತೊಡಗಿವೆ ಎಂದು ಅಧಿಕಾರಿಗಳು ಹೇಳಿದ್ದಾರೆ. ಈ ಮೂಲಕ ಪ್ರಕರಣದಲ್ಲಿ ಭಯೋತ್ಪಾದಕ ನಂಟು ಅನುಮಾನ ದಟ್ಟವಾಗುವಂತೆ ಮಾಡಿದೆ.

ಮೈಸೂರಲ್ಲಿ ಕಲಾತಪಃ ಅಕಾಡೆಮಿ ಆಫ್ ಪರ್ಫಾರ್ಮಿಂಗ್ ಆರ್ಟ್ಸ್ ಪ್ರಾರಂಭ



ಕಲಾತಪಃ ಅಕಾಡೆಮಿ ಆಫ್ ಪರ್ಫಾರ್ಮಿಂಗ್ ಆರ್ಟ್ಸ್ ಸಂಸ್ಥೆಯನ್ನು ವಿದ್ವಾನ್ ಆರ್.ಕೆ.ಪದ್ಮನಾಭ ಅವರು ಉದ್ಘಾಟಿಸಿದರು. ಚಿತ್ರದಲ್ಲಿ ಡಾ.ಕೃಪಾ ಪಡ್ಕೆ, ಶ್ರೀಮತಿ ಶರ್ಮಿಳಾ ಮುಖರ್ಜಿ, ಡಾ.ವಸುಂಧರಾ ದೊರೆಸ್ವಾಮಿ, ಶ್ರೀಮತಿ ಅನುಶ್ರೀ, ಮೈಸೂರು ನಾಗರಾಜ್ ಹಾಗೂ ಮೈಸೂರು ಕಾರ್ತಿಕ್ ಅವರನ್ನು ಕಾಣಬಹುದು.

ಮೈಸೂರು: ಮೈಸೂರಿನ ಸರಸ್ವತಿಪುರಂನಲ್ಲಿರುವ ಜೆಎಸ್‌ಎಸ್ ಸಂಸ್ಥೆಯ ಮಂತ್ರ ಮಹರ್ಷಿ ಸಭಾಂಗಣದಲ್ಲಿ ಕಲಾತಪಃ ಅಕಾಡೆಮಿಯನ್ನು ಉದ್ಘಾಟಿಸಲಾಯಿತು.

ಖ್ಯಾತ ಸಂಗೀತ ವಿದ್ವಾನ್ ಎಸ್.ಮಹಾದೇವಪ್ಪ ಅವರ ಮೊಮ್ಮಗ, ಅಂತರ ರಾಷ್ಟ್ರೀಯ ಖ್ಯಾತಿಯ ವಯೋಲಿನ್ ವಾದಕ ಮೈಸೂರು ನಾಗರಾಜ್ ಅವರ ಪುತ್ರ ಮೈಸೂರು ಕಾರ್ತಿಕ್ ಹಾಗೂ ಅನುಶ್ರೀ ಪದ್ಮನಾಭ ದಂಪತಿ ಸಂಗೀತ ನೃತ್ಯಗಳ ಸಂಗಮದ ಜೀವನಯಾನದಲ್ಲಿ ನೂತನ ಹೆಜ್ಜೆಯನ್ನು ಇರಿಸಿದ್ದಾರೆ.

ಗೌರವಾನ್ವಿತ ಅತಿಥಿಗಳಾಗಿ ಕೇಂದ್ರ ಸಂಗೀತ ನಾಟಕ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ಪ್ರಖ್ಯಾತ ಕಲಾವಿದರಾದ ವಿದ್ವಾನ್ ಆರ್.ಕೆ.ಪದ್ಮನಾಭ, ಡಾ.ವಸುಂದರ ದೊರಸ್ವಾಮಿ, ಕರ್ನಾಟಕ ಕಲಾಶ್ರೀ ಶರ್ಮಿಳ ಮುಖರ್ಜಿ ಹಾಗೂ ಡಾ.ಕೃಪಾಫಡ್ಕೆ ಉಪಸ್ಥಿತರಿದ್ದರು.

ಅಕಾಡೆಮಿಯನ್ನು ಉದ್ಘಾಟಿಸಿ ಮಾತನಾಡಿದ ಹೆಸರಾಂತ ಗಾಯಕ, ವಾಗ್ಗೇಯಕಾರ, ವಿದ್ವಾನ್ ಆರ್.ಕೆ.ಪದ್ಮನಾಭ, ಕರ್ನಾಟಕ ಸಂಗೀತ ಕ್ಷೇತ್ರಕ್ಕೆ ದಿವಂಗತ ಸಂಗೀತ ವಿದ್ವಾನ್ ಮಹದೇವಪ್ಪನವರ ಕೊಡುಗೆಯನ್ನು ಸ್ಮರಿಸಿ, ಕಾರ್ತಿಕ್ ಹಾಗೂ ಅನುಶ್ರೀ ಅವರ ಈ ಕಲಾಯಾನ ನಿರ್ವಿಘ್ನವಾಗಿ ನಡೆದು ಅಪಾರ ಯಶಸ್ಸು ಗಳಿಸಿ ವಿದ್ಯಾರ್ಥಿಗಳು, ಕಲಾವಿದರು ಈ ಸಂಸ್ಥೆಯ ನೆರಳಿನಲ್ಲಿ ಪ್ರಕಾಶಿಸಲಿ ಎಂದು ಹಾರೈಸಿದರು.

ನೃತ್ಯ ಕಲಾವಿದೆ ಡಾ. ಕೃಪಾ ಫಡ್ಕೆ ಮಾತನಾಡಿದರು. ನಂತರ ಈ ಸಂಸ್ಥೆಯ ವಿದ್ಯಾರ್ಥಿ, ವಿದ್ಯಾರ್ಥಿನಿಯರಿಂದ ಸಂಗೀತ ಮತ್ತು ನೃತ್ಯ ಕಾರ್ಯಕ್ರಮಗಳು ನಡೆಯಿತು. ಪ್ರಾಸ್ತಾವಿಕ ನುಡಿಗಳನ್ನಾಡಿದ ಅನುಶ್ರೀ ಪದ್ಮನಾಭ ಅವರು ಕಲಾತಪ: ಅಕಾಡೆಮಿಯ ಧ್ಯೇಯೋದ್ದೇಶಗಳನ್ನು ವಿವರಿಸಿದರು. ವಿದ್ವಾನ್ ಕಾರ್ತಿಕ್ ನಾಗರಾಜ್ ವಂದಿಸಿದರೆ, ಜಿ.ಎನ್. ಮಂಜುನಾಥ್ ನಿರೂಪಿಸಿದರು.

ಬದಲಾಗುತ್ತಿರುವ ಜಗತ್ತಲ್ಲಿ ಮಾನವೀಯ ಮೌಲ್ಯ ನಾಶ

ಹಲವು ಕೃತಿ ಲೋಕಾರ್ಪಣೆಗೊಳಿಸಿ, ಕವಿಯತ್ರಿ ಡಾ.ಲತಾ ರಾಜಶೇಖರ್ ಆತಂಕದ ನುಡಿ



ಮೈಸೂರಿನ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಭವನದಲ್ಲಿ ಮೈಸೂರು ಸಾಹಿತ್ಯ ಮತ್ತು ಸಾಂಸ್ಕೃತಿಕ ಪ್ರತಿಷ್ಠಾನದ 20ನೇ ವಾರ್ಷಿಕೋತ್ಸವ ಸಮಾರಂಭದಲ್ಲಿ ಕವಿಯತ್ರಿ ಡಾ.ಲತಾ ರಾಜಶೇಖರ್ ಅವರು ಹಲವು ಕೃತಿಗಳನ್ನು ಲೋಕಾರ್ಪಣೆ ಮಾಡಿದರು.

ಮೈಸೂರು, ನ.16(ಬಿಎಲ್‌ಯು)– ಜಗತ್ತು ಬದಲಾಗುತ್ತಿದ್ದು, ಮಾನವೀಯ ಮೌಲ್ಯ ನಾಶವಾಗುತ್ತಿದೆ ಎಂದು ಕವಿಯತ್ರಿ ಡಾ.ಲತಾ ರಾಜಶೇಖರ್ ಆತಂಕ ವ್ಯಕ್ತಪಡಿಸಿದರು.

ಮೈಸೂರಿನ ವಿಜಯನಗರದ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಭವನದಲ್ಲಿ ಇಂದು ಮೈಸೂರು ಸಾಹಿತ್ಯ ಮತ್ತು ಸಾಂಸ್ಕೃತಿಕ ಪ್ರತಿಷ್ಠಾನದ 20ನೇ ವಾರ್ಷಿಕೋತ್ಸವ ಸಮಾರಂಭದಲ್ಲಿ ಹಲವು ಕೃತಿ ಲೋಕಾರ್ಪಣೆ ಮಾಡಿ ಮಾತನಾಡಿದ ಅವರು, ಬಂಡವಾಳ ಮನುಷ್ಯನ ಮೌಲ್ಯವನ್ನು ಕಡಿಮೆ ಮಾಡುತ್ತಿದೆ. ಈ ಹಿನ್ನೆಲೆ ಸಾಹಿತಿಗಳು ತಮ್ಮ ಬರಹಗಳಿಂದ ಮನುಷ್ಯನ ಮೌಲ್ಯದ ಮಹತ್ವವನ್ನು ಸಮಾಜಕ್ಕೆ ತಿಳಿಸಬೇಕು ಎಂದು ಸಲಹೆ ನೀಡಿದರು.

ಇಡೀ ವಿಶ್ವದಲ್ಲೆ ಭಾರತೀಯ ಸಂಸ್ಕೃತಿಗೆ ಶ್ರೇಷ್ಠ ಸ್ಥಾನವಿದೆ. ಇದನ್ನು ಗೌರವಿಸಿ, ಉಳಿಸುವುದು ಪ್ರತಿಯೊಬ್ಬರ ಕರ್ತವ್ಯವಾಗಬೇಕು. ಒಳ್ಳೆಯ ಸಮಾಜ ಸೃಷ್ಟಿ ಮಾಡಲು ಶಿಕ್ಷಣದ ಜೊತೆ ಸಾಹಿತ್ಯ, ಸಂಸ್ಕೃತಿ ಪಾತ್ರ ಬಹಳ ಮುಖ್ಯವಾಗಿದೆ. ಇದರ ಮಹತ್ವ ತಿಳಿಸಲು ಸಾಮಾಜಿಕ ಚಟುವಟಿಕೆಗಳನ್ನು ಹಮ್ಮಿಕೊಳ್ಳಬೇಕು ಎಂದು ಹೇಳಿದರು.

ವಿವಿಧ ಭಾಷೆಗಳಲ್ಲಿ ಪ್ರಕಟವಾಗಿರುವ ಕೃತಿಗಳು ನಮ್ಮ ಪರಂಪರೆಯ ಪ್ರತೀಕವಾಗಿವೆ. ಇವು ಭಾರತದ ಸಂಸ್ಕೃತಿ ಬಿಂಬಿಸುವ ರಾಮಾಯಣ, ಮಹಾಭಾರತ, ವೇದ, ಉಪನಿಷತ್ತು ಗುಣಮಟ್ಟದ ಮೌಲ್ಯ ಹಾಗೂ ಸಿದ್ಧಾಂತವನ್ನು ಅನಾವರಣಗೊಳಿಸುತ್ತವೆ. ಈ ಮೂಲಕ ಹಲವು ಕೃತಿಗಳನ್ನು ರಚನೆ ಮಾಡಿರುವ ಲೇಖಕರು ಸಾಹಿತ್ಯ ಕ್ಷೇತ್ರಕ್ಕೆ ಅಮೂಲ್ಯ ಕೊಡುಗೆ ನೀಡಿದ್ದಾರೆ ಎಂದು ಅಭಿಪ್ರಾಯಪಟ್ಟರು.

ಇದೇ ವೇಳೆ ಮಾತನಾಡಿದ ಕವಿ ಸಿದ್ಧಲಿಂಗಪ್ಪ ಬೀಳಗಿ ಅವರ ಸಾಹಿತ್ಯವನ್ನು ಒಳಗಣ್ಣಿನಿಂದ ನೋಡಬೇಕು. ಆಗ ಮಾತ್ರ ಅದರಲ್ಲಿರುವ ಸೂಕ್ಷ್ಮ ವಿಚಾರಗಳು ಅರಿವಿಗೆ ಬರುತ್ತವೆ. ಇಂತಹ ಸೂಕ್ಷ್ಮ ವಿಚಾರಗಳು ನಮ್ಮ ಬದುಕನ್ನು ಸುಂದರಗೊಳಿಸುತ್ತವೆ ಎಂದು ಹೇಳಿದರು.

ಇತ್ತೀಚಿಗೆ ಮನುಷ್ಯ ದೈಹಿಕ ಒತ್ತಡಕ್ಕಿಂತ ಮಾನಸಿಕ ಒತ್ತಡಕ್ಕೆ ಬಲಿಯಾಗುತ್ತಿದ್ದಾನೆ. ನ್ಯಾಯ, ನೀತಿ, ಧರ್ಮ ಬಹಳಷ್ಟು ಜನರಿಗೆ ಬೇಡವಾಗಿದ್ದು, ಇದನ್ನು ಪಾಲನೆ ಮಾಡುವವರ ಸಂಖ್ಯೆ ಕೂಡ ವಿರಳವಾಗಿದೆ ಎಂದು ಸಿದ್ಧಲಿಂಗಪ್ಪ ಬೀಳಗಿ ಆತಂಕ ವ್ಯಕ್ತಪಡಿಸಿದರು.

ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್, ಸಾಹಿತ್ಯ ಮತ್ತು ಸಾಂಸ್ಕೃತಿಕ ಪ್ರತಿಷ್ಠಾನದ ಸಂಸ್ಥಾಪಕ ಅಧ್ಯಕ್ಷ ಎಂ.ಬಿ.ಸಂತೋಷ್, ಸಾಹಿತ್ಯ ಲೋಕ ಅಧ್ಯಕ್ಷ ಡಾ.ವೈ.ಡಿ.ರಾಜಣ್ಣ, ಉಪಾಧ್ಯಕ್ಷೆ ಡಾ.ಸೌಗಂಧಿಕ ಜೋಯಿಸ್, ಸಾಂಸ್ಕೃತಿಕ ಸಮಿತಿ ಅಧ್ಯಕ್ಷೆ ಡಾ.ಸಿ.ವಾಣಿ ರಾಘವೇಂದ್ರ, ಸಹಾಯಕ ಪ್ರಾಧ್ಯಾಪಕ ಕೆ.ಪರಮೇಶ್ ಹಾಗೂ ರೂಪಶ್ರೀ ಕಾರ್ಯಕ್ರಮದಲ್ಲಿ ಹಾಜರಿದ್ದರು.

ಪೋಷಕ–ಶಿಕ್ಷಕರ ಮಹಾಸಭೆಯಲ್ಲಿ ಪೋಕ್ಸೊ ಕಾಯಿದೆ, ಬಾಲ್ಯವಿವಾಹ ನಿಷೇಧ, ಬಾಲ ಕಾರ್ಮಿಕ ಪದ್ಧತಿ ಕುರಿತು ಚರ್ಚೆ



ಜ್ಯೋತಿನಗರದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಪೋಷಕ–ಶಿಕ್ಷಕರ ಮಹಾಸಭೆ ನಡೆಯಿತು.

ಮೈಸೂರು,ನ.16(ಜಿಎ)–ಮೈಸೂರಿನ ಜ್ಯೋತಿನಗರದ ಎಂಸಿಸಿ ಕಾಲೋನಿಯಲ್ಲಿರುವ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಪೋಷಕ–ಶಿಕ್ಷಕರ ಮಹಾಸಭೆಯನ್ನು ನಡೆಸಲಾಯಿತು.

ಸಭೆಯಲ್ಲಿ ಮಕ್ಕಳ ಕಲಿಕಾ ಪ್ರಗತಿ ಹಾಜರಾತಿ ಕುರಿತು ಶಿಕ್ಷಕರು, ಪೋಷಕರೊಂದಿಗೆ ಚರ್ಚಿಸುವ ಮೂಲಕ ಪೋಕ್ಸೋ ಕಾಯಿದೆ, ಬಾಲ್ಯ ವಿವಾಹ ನಿಷೇಧ ಬಾಲ ಕಾರ್ಮಿಕ ಪದ್ಧತಿ ನಿಷೇಧ ದಿನ ಕುರಿತು ಪೋಷಕರಿಗೆ ಮುಖ್ಯ ಶಿಕ್ಷಕಿ ಜೆ.ಇಂದ್ರಾಣಿ ವಿವರಿಸಿದರು.

ಕಂದಾಯ ಅಧಿಕಾರಿ ಕೆಂಪೇಗೌಡ ಮಾತನಾಡಿ, ಆರ್‌ಟಿಇ ಕಾಯಿದೆ ಕುರಿತು ಪೋಷಕರಿಗೆ ಅರಿವು ಮೂಡಿಸಿದರು. ಕಾಲೋನಿಯ ಪ್ರಮುಖರಾದ ದೀಪು ಅವರು ಮಕ್ಕಳ ಹಕ್ಕುಗಳ ಕುರಿತು ಮಾತನಾಡಿದರು.


ಎಂಸಿಸಿ ಕಾಲೋನಿಯ ಮುಖಂಡರಾದ ವಿರೇಶ್ ಪಂಡಿತ್ ಜವಹರಲಾಲ್ ನೆಹರು ಅವರ ಸಂಕ್ಷಿಪ್ತ ಪರಿಚಯದೊಂದಿಗೆ ನ.14ರಂದು ಮಕ್ಕಳ ದಿನವೆಂದು ಆಚರಿಸುವ ಹಿನ್ನೆಲೆಯನ್ನು ಮಕ್ಕಳು ಮತ್ತು ಪೋಷಕರೊಂದಿಗೆ ಹಂಚಿಕೊಂಡರು.

ಎಸ್‌ಡಿಎಂಸಿ ಅಧ್ಯಕ್ಷೆ ನೀಲಾ ಆಟೋಟಗಳಲ್ಲಿ ವಿಜೇತರಾದ ಮಕ್ಕಳಿಗೆ ಬಹುಮಾನಗಳನ್ನು ವಿತರಿಸಿದರು. ಈ ಸಂದರ್ಭದಲ್ಲಿ ಉಷಾರಾಣಿ, ಎಸ್‌ಡಿಎಂಸಿ ಅಧ್ಯಕ್ಷರು ಮತ್ತಿತರರು ಉಪಸ್ಥಿತರಿದ್ದರು.

ದೇಶ - ವಿದೇಶ

ಸಿನಿಮಾ ಬಿಡುಗಡೆಗೂ ಮುನ್ನವೇ ಪೈರಸಿ ಮಾಡುತ್ತಿದ್ದ ಹ್ಯಾಕರ್ ಬಂಧನ

ಹೈದರಾಬಾದ್: ಚಲನಚಿತ್ರ ಮಂದಿರದಲ್ಲಿ ಸಿನಿಮಾ ಬಿಡುಗಡೆಯಾಗುವುದಕ್ಕೂ ಮೊದಲೇ ಅದರ ಪೈರೇಟೆಡ್ ಕಾಪಿಯನ್ನು ತನ್ನ ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡುತ್ತಿದ್ದ ವ್ಯಕ್ತಿಯನ್ನು ಬಂಧಿಸಲಾಗಿದೆ ಎಂದು ಹೈದರಾಬಾದ್ ಪೊಲೀಸರು ತಿಳಿಸಿದ್ದಾರೆ. ಆರೋಪಿಯನ್ನು ರವಿ ಎಂದು ಗುರುತಿಸಲಾಗಿದೆ.



ವಿದೇಶಗಳಲ್ಲಿ ವಾಸವಿದ್ದು ಸಿನಿಮಾವನ್ನು ಪೈರಸಿ ಮಾಡುತ್ತಿದ್ದ, ಇದರಿಂದ ಹಲವು ಸಿನಿಮಾ ನಿರ್ಮಾಪಕರು ನಷ್ಟ ಅನುಭವಿಸಿದ್ದರು. ಅವರು ಈ ಕುರಿತು ದೂರು ನೀಡಿದ್ದರು. ಆರೋಪಿಯು ಶನಿವಾರ ಭಾರತಕ್ಕೆ ಆಗಮಿಸಿದ ವೇಳೆ ಅವನನ್ನು ಬಂಧಿಸಲಾಗಿದೆ ಎಂದು ಹೇಳಿದ್ದಾರೆ. ಡಿಜಿಟಲ್ ಕಂಪನಿಗಳ ಸರ್ವರ್‌ಗಳನ್ನು ಹ್ಯಾಕ್ ಮಾಡುತ್ತಿದ್ದ ಆರೋಪಿಯು, ಸಿನಿಮಾ ಬಿಡುಗಡೆಗೂ ಮುನ್ನವೇ ಅದರ ಪೈರೇಟೆಡ್ ಕಾಪಿಯನ್ನು ವೆಬ್‌ಸೈಟ್‌ನಲ್ಲಿ ಹರಿಬಿಡುತ್ತಿದ್ದ. ಇದರಿಂದ ಚಿತ್ರರಂಗಕ್ಕೆ ಅಪಾರ ಹಾನಿಯಾಗಿತ್ತು ಎಂದು ತಿಳಿಸಿದ್ದಾರೆ. ಆರೋಪಿಯ ವಿಚಾರಣೆ ನಂತರ ಮತ್ತಷ್ಟು ಮಾಹಿತಿಯನ್ನು ಬಹಿರಂಗಪಡಿಸುವುದಾಗಿ ಪೊಲೀಸರು ಹೇಳಿದ್ದಾರೆ. ಈ ಹಿಂದೆ ರವಿ ತನ್ನನ್ನು ಬಂಧಿಸುವಂತೆ ಪೊಲೀಸರಿಗೆ ಸವಾಲು ಹಾಕಿದ್ದ ಎನ್ನಲಾಗಿದೆ.

ಮೇಯರ್ ಹತ್ಯೆ ವಿರೋಧಿಸಿ ಮೆಕ್ಸಿಕೋದಲ್ಲಿ ಭುಗಿಲೆದ್ದ ಆಕ್ರೋಶ


ಮೆಕ್ಸಿಕೋ: ಈ ತಿಂಗಳ ಆರಂಭದಲ್ಲಿ ನಡೆದ ಭ್ರಷ್ಟಾಚಾರ ವಿರೋಧಿ ಮೇಯರ್ ಹತ್ಯೆ ಘಟನೆಯಿಂದ ಪ್ರತಿಭಟನೆಯ ಕಿಡಿ ಹೊತ್ತಿದೆ.



ಮೆಕ್ಸಿಕೋ ಸಿಟಿಯಲ್ಲಿ ಪ್ರತಿಭಟನಾಕಾರರು 'ಕಾರ್ಲೋಸ್ ಸತ್ತಿಲ್ಲ; ಸರ್ಕಾರವೇ ಕೊಂದಿದೆ' ಎಂದು ಘೋಷಣೆ ಕೂಗಿದರು. ಉರುವಾಪನ್ ನಗರದ ಮೇಯರ್ ಕಾರ್ಲೋಸ್ ಮಂಜೊ ಅವರನ್ನು ನ.1ರಂದು ನಡೆದ ಡೇ ಆಫ್ ದಿ ಡೆಡ್ ಕಾರ್ಯಕ್ರಮದಲ್ಲಿ ಹತ್ಯೆಗೈಯ್ಯಲಾಗಿತ್ತು. ಕೆಲವು ಪ್ರತಿಭಟನಾಕಾರರು, ಮೆಕ್ಸಿಕನ್ ಅಧ್ಯಕ್ಷೆ ಕ್ಲಾಡಿಯಾ ಶೀನ್‌ಬಾವ್ ವಾಸಿಸುವ ಮತ್ತು ಕೆಲಸ ಮಾಡುವ ನ್ಯಾಷನಲ್ ಪ್ಯಾಲೇಸ್ ಸುತ್ತಲಿನ ಲೋಹದ ಬೇಲಿಗಳನ್ನು ಹರಿದುಹಾಕಿದರು. ಮೆಕ್ಸಿಕೋ ಸಿಟಿಯ ಭದ್ರತಾ ಮುಖ್ಯಸ್ಥ ಪಾಬ್ಲೊ ವರ್ಸ್ಕ್ವೆರುಘ್, ಹಲವು ಗಂಟೆಗಳ ಕಾಲ ಈ ಪ್ರತಿಭಟನೆ ಶಾಂತಿಯುತವಾಗಿ ನಡೆಯುತ್ತಿತ್ತು. ಆದರೆ, ಮುಖಕ್ಕೆ ಮುಸುಕು ಹಾಕಿಕೊಂಡ ಕೆಲವರು ಹಿಂಸಾಚಾರ ನಡೆಸಲು ಪ್ರಾರಂಭಿಸಿದರು ಎಂದು ಸುದ್ದಿಗಾರರಿಗೆ ತಿಳಿಸಿದರು. ಪ್ರತಿಭಟನಾಕಾರರು, ಕಾರ್ಲೋಸ್ ಮಂಜೊ ಅವರನ್ನು ನೀವು ಹೀಗೆಯೇ ರಕ್ಷಿಸಬೇಕಿತ್ತು ಎಂದು ಭದ್ರತಾ ಪಡೆಗಳ ವಿರುದ್ಧ ಘೋಷಣೆ ಕೂಗಿದರು ಎಂದು ರಾಯಿಟರ್ಸ್ ಸುದ್ದಿ ಸಂಸ್ಥೆ ವರದಿ ಮಾಡಿದೆ.

ಹರಿಯಾಣದಲ್ಲಿ 'ಆಪರೇಷನ್ ಟ್ರ್ಯಾಕ್‌ಡೌನ್': ಒಂದೇ ದಿನ 257 ಆರೋಪಿಗಳ ಬಂಧನ

ಚಂಡೀಗಢ: ಹರಿಯಾಣ ಪೊಲೀಸರು 'ಆಪರೇಷನ್ ಟ್ರ್ಯಾಕ್‌ಡೌನ್' ಹೆಸರಿನಲ್ಲಿ ಅಪರಾಧ ಕೃತ್ಯಗಳಲ್ಲಿ ತೊಡಗಿರುವವರನ್ನು ಬಂಧಿಸುವ ದೊಡ್ಡ ಕಾರ್ಯಾಚರಣೆ ನಡೆಸುತ್ತಿದ್ದು ಒಂದೇ ದಿನ 257 ಆರೋಪಿಗಳನ್ನು ಬಂಧಿಸಿದ್ದಾರೆ.



ರಾಜ್ಯವನ್ನು ಇನ್ನಷ್ಟು ಸುರಕ್ಷಿತವಾಗಿಡಲು ಹರಿಯಾಣ ಪೊಲೀಸರು ಕಳೆದ ವಾರದಿಂದ 'ಆಪರೇಷನ್ ಟ್ರ್ಯಾಕ್‌ಡೌನ್ ಹೆಸರಿನಲ್ಲಿ ಆರೋಪಿಗಳನ್ನು ಬಂಧಿಸುವ ಕಾರ್ಯಾಚರಣೆ ನಡೆಸುತ್ತಿದ್ದಾರೆ. ರಾಜ್ಯದ ಪ್ರತಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಈ ಕಾರ್ಯಾಚರಣೆ ನಡೆಯುತ್ತಿದೆ. ಕೊಲೆ ಯತ್ನ, ಹತ್ಯೆ, ವಸೂಲಿ, ಅಕ್ರಮ ಆಯುಧ ಸಂಗ್ರಹ, ಡ್ರಗ್ ಮಾಫಿಯಾ, ಅತ್ಯಾಚಾರ ಯತ್ನ ಸೇರಿದಂತೆ ವಿವಿಧ ಗಂಭೀರ ಅಪರಾಧಗಳಲ್ಲಿ ಭಾಗಿಯಾಗಿರುವ ಆರೋಪಿಗಳನ್ನು ಬಂಧಿಸಲಾಗುತ್ತಿದ್ದು, ಇಂತಹವರಿಗೆ ಜಾಮೀನು ನೀಡಲಾಗುವುದಿಲ್ಲ. 42 ಗಂಭೀರ ಅಪರಾಧ ಪ್ರಕರಣಗಳಿಗೆ ಸಂಬಂಧಿಸಿದಂತೆ 62 ಆರೋಪಿಗಳನ್ನು ಬಂಧಿಸಿ ಜೈಲಿಗೆ ಕಳುಹಿಸಲಾಗಿದೆ. 9 ಕೊಲೆ ಪ್ರಕರಣಗಳಲ್ಲಿ 23 ಜನ, 13 ಕೊಲೆ ಯತ್ನ ಪ್ರಕರಣಗಳಲ್ಲಿ 16 ಜನರನ್ನು ಬಂಧಿಸಲಾಗಿದೆ ಎಂದು ಡಿಜಿಪಿ ಓ.ಪಿ.ಸಿಂಗ್ ಹೇಳಿದ್ದಾರೆ.

ಅಹಮದೀಯರು ನಮ್ಮವರಲ್ಲ: ಮೂಲಭೂತವಾದಿಗಳಿಂದ ಪ್ರತಿಭಟನೆ

ಢಾಕಾ: ಸೂಫಿ ಅನುಯಾಯಿಗಳನ್ನು ನಾಸ್ತಿಕರು ಎಂದು ಘೋಷಿಸಬೇಕು ಎಂದು ಒತ್ತಾಯಿಸಿ ಶನಿವಾರ ಢಾಕಾದಲ್ಲಿ



ಸಾವಿರಾರು ಸಂಖ್ಯೆಯಲ್ಲಿ ಪ್ರತಿಭಟನೆ ನಡೆಸಿದರು. 19ನೇ ಶತಮಾನದಲ್ಲಿ ಭಾರತದಲ್ಲಿ ಹುಟ್ಟಿಕೊಂಡ ಸೂಫಿ ಪಂಥದ ಅನುಯಾಯಿಗಳಾದ ಅಹಮದೀಯ ಸಮುದಾಯವು ಮುಸಲ್ಮಾನ ಬಾಹುಳ್ಯ ಹೊಂದಿದ್ದ ಬಾಂಗ್ಲಾದೇಶದಲ್ಲಿ ದೀರ್ಘಕಾಲದಿಂದಲೂ ಕಿರುಕುಳ ಅನುಭವಿಸುತ್ತಿದೆ. ಶೇಕ್ ಹಸೀನಾ ಅವರನ್ನು ಬಾಂಗ್ಲಾದೇಶದ ಪ್ರಧಾನಿ ಹುದ್ದೆಯಿಂದ ಪದಚ್ಯುತಗೊಳಿಸಿದ ಬಳಿಕ ಈ ಸಮುದಾಯಗಳ ಮೇಲೆ ಗುಂಪು ದಾಳಿಗಳು ಹೆಚ್ಚಾಗಿವೆ.

ಢಾಕಾದಲ್ಲಿ ನಡೆದ ಸಮಾವೇಶದಲ್ಲಿ ಭಾರತ, ಪಾಕಿಸ್ತಾನ, ಸೌದಿ ಅರೇಬಿಯಾ, ಈಜಿಪ್ಟ್‌ನ ಧಾರ್ಮಿಕ ಪ್ರವಚನಕಾರರು ಹಾಗೂ ರಾಜಕಾರಣಿಗಳು ಭಾಗವಹಿಸಿದ್ದರು. ಕೆಲವು ಪ್ರತಿಭಟನಕಾರರು ಧರಿಸಿದ್ದ ಟೀ ಶರ್ಟ್‌ಗಳಲ್ಲಿ 'ಅಹಮದೀಯರನ್ನು ಕಾಫಿರರು ಎಂದು ಘೋಷಿಸಬೇಕು' ಎಂದು ಬರಹಗಳನ್ನು ಹಾಕಲಾಗಿತ್ತು.

ಟೆಂಪೊ–ಟ್ರಕ್ ಡಿಕ್ಕಿ: 6 ಮಂದಿ ಸಾವು, 14 ಮಂದಿಗೆ ಗಾಯ

ಜೈಪುರ: ಜೋಧಪುರ–ಬಾಲೆಸರ್ ರಾಷ್ಟ್ರೀಯ ಹೆದ್ದಾರಿ 125ರ'ಲ್ಲಿ ಭಾನುವಾರ ಮುಂಜಾನೆ ಯಾತ್ರಿಕರನ್ನು ಕರೆದೊಯ್ಯುತ್ತಿದ್ದ ಟೆಂಪೊಗೆ



ಧಾನ್ಯದ ಚೀಲಗಳನ್ನು ತುಂಬಿದ್ದ ಟ್ರಕ್ ಡಿಕ್ಕಿ ಹೊಡೆದ ಪರಿಣಾಮ ಆರು ಮಂದಿ ಮೃತಪಟ್ಟಿದ್ದು, 14 ಮಂದಿ ಗಂಭೀರವಾಗಿ ಗಾಯಗೊಂಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. ಜೋಧಪುರ ಜಿಲ್ಲೆಯ ಖಾರಿ ಬೇರಿ ಗ್ರಾಮದ ಬಳಿ ಈ ಅಪಘಾತ ಸಂಭವಿಸಿದೆ. ಗುಜರಾತ್‌ನ ಬನಸ್ಕಂತ ಮತ್ತು ಧನ್ಸುರದಿಂದ ಸುಮಾರು 20 ಯಾತ್ರಿಕರನ್ನು ಕರೆದೊಯ್ಯುತ್ತಿದ್ದ ಟೆಂಪೊಗೆ ಮತ್ತೊಂದು ಬದಿಯಿಂದ ವೇಗವಾಗಿ ಬಂದ ಟ್ರಂಕ್ ಡಿಕ್ಕಿ ಹೊಡೆದಿದೆ ಎಂದು ಹಿರಿಯ ಪೊಲೀಸ್ ಅಧಿಕಾರಿ ಮಾಹಿತಿ ನೀಡಿದ್ದಾರೆ. ಘಟನೆಯಲ್ಲಿ ಮೂವರು ಮಹಿಳೆಯರು ಸ್ಥಳದಲ್ಲೇ ಮೃತಪಟ್ಟರೆ, ಇತರ ಮೂವರು ಮಹಿಳೆಯರು ಆಸ್ಪತ್ರೆಗೆ ಸಾಗಿಸುವ ವೇಳೆ ಕೊನೆಯುಸಿರೆಳೆದಿದ್ದಾರೆ. ಗಾಯಾಳುಗಳನ್ನು ಜೋಧಪುರದ ಎಂಡಿಎಂ ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ಅವರು ತಿಳಿಸಿದ್ದಾರೆ.

ಮೋಜು ಮಸ್ತಿ ತಾಣವಾಗಿರುವ ಹಾರಂಗಿ ಹಿನ್ನೀರು ಹೇರೂರು ಪ್ರದೇಶ

● ಕಾವಲು ಸಿಬ್ಬಂದಿಯಿಲ್ಲದ ಚೆಕ್ ಪೋಸ್ಟ್ ● ಕಾರ್ಯ ನಿರ್ವಹಿಸದ ಸಿಸಿ ಕ್ಯಾಮೆರಾ

ಮಡಿಕೇರಿ, ನ.16– ಹಾರಂಗಿ ಹಿನ್ನೀರು ನಿಂತಿರುವ ಹಾದ್ರೆ ಹೇರೂರು ಪ್ರದೇಶ ಸಾರ್ವಜನಿಕರಿಗೆ ಎಷ್ಟು ಸುರಕ್ಷಿತ ಎಂಬ ಪ್ರಶ್ನೆ ಉದ್ಭವಿಸಿದೆ. ವಾರಾಂತ್ಯದಲ್ಲಿ ಅಥವಾ ರಜಾದಿನಗಳಲ್ಲಿ ಇಲ್ಲಿಗೆ ಅತಿ ಹೆಚ್ಚಿನ ಪ್ರವಾಸಿಗರು ಆಗಮಿಸುತ್ತಾರೆ. ಇದರೊಂದಿಗೆ ವಿದ್ಯಾರ್ಥಿಗಳು ಸಹ ಹಾರಂಗಿ ಹಿನ್ನೀರು ಪ್ರದೇಶಕ್ಕೆ ಆಗಾಗ್ಗೆ ಆಗಮಿಸುವುದರಿಂದ ಇದು ಮೋಜು ಮಸ್ತಿಯ ತಾಣವಾಗಿ ಪರಿವರ್ತಿತವಾಗಿದೆ.

'ಹಾರಂಗಿ ಹಿನ್ನೀರಿನಲ್ಲಿ ಯಾಮಾರಿದ್ರೆ ಜೀವಕ್ಕೆ ಎಳ್ಳು ನೀರು' ಎನ್ನುವ ಸ್ಥಿತಿ ಎದುರಾಗಿದೆ. ಇಲ್ಲಿಗೆ ಆಗಮಿಸುವ ಸಾರ್ವಜನಿಕರಿಗೆ ಮಾಹಿತಿ ಕೊರತೆಯ ಕಾರಣದಿಂದ ಹಿನ್ನೀರಿನಲ್ಲಿ ಈಜಲು ತೆರಳಿ ಸಾವಿನ ಮನೆಯ ಕದ ತಟ್ಟುತ್ತಿದ್ದಾರೆ.

ಕುಶಾಲನಗರದಿಂದ ಬಸವನಹಳ್ಳಿ ಮಾರ್ಗವಾಗಿ ಹೇರೂರು ಕಡೆಗೆ ಬರುವಂತಹ ರಸ್ತೆಯ ಮಾರ್ಗ ಮಧ್ಯೆ ಅರಣ್ಯ ಇಲಾಖೆಯ ಚೆಕ್‌ಪೋಸ್ಟ್ ಇದ್ದರೂ ಸಹ ಇದು ಆಟಕ್ಕುಂಟು ಲೆಕ್ಕಕ್ಕಿಲ್ಲ ಎಂಬಂತಾಗಿದೆ. ಹಗಲು ವೇಳೆಯಲ್ಲಿ ಇಲ್ಲಿ ಯಾವುದೇ ಸಿಬ್ಬಂದಿಗಳು ಕಾವಲು ಇರುವುದಿಲ್ಲ. ಹೀಗಾಗಿ ಮೋಜು ಮಸ್ತಿಯ ನೆಪದಲ್ಲಿ ಇಲ್ಲಿಗೆ ಬರುವ ವಾಹನಗಳ ತಪಾಸಣೆಯನ್ನೂ ಮಾಡುವವರಿಲ್ಲ. ಚೆಕ್ ಪೋಸ್ಟ್‌ನಲ್ಲಿ ಸಿ.ಸಿ ಕ್ಯಾಮೆರ ಇದೆಯಾದರೂ ಯಾವುದೇ ಉಪಯೋಗವಾಗುತ್ತಿಲ್ಲ. ವನ್ಯಜೀವಿ ಸಂರಕ್ಷಣಾ ವಲಯ ವಾಹನಗಳನ್ನು ನಿಧಾನವಾಗಿ ಚಲಾಯಿಸಿ ಎಂಬ ಬೋರ್ಡ್ ಅಳವಡಿಸಲಾಗಿದೆ. ಅಲ್ಲದೇ ಇಲ್ಲಿ ಕಾಡಾನೆಗಳ ಹಾವಳಿಯೂ ವಿಪರೀತವಾಗಿರುವುದರಿಂದ ವಾಹನಗಳ ಮೇಲೆ ಕಾಡಾನೆಗಳು ದಾಳಿ ನಡೆಸಿರುವ ಘಟನೆಯೂ ನಡೆದಿದೆ. ಚೆಕ್‌ಪೋಸ್ಟ್‌ನಲ್ಲಿ ಕಾರ್ಯನಿರ್ವಹಿಸುವ ಅರಣ್ಯ ಇಲಾಖೆಯ ಗುತ್ತಿಗೆ ನೌಕರರನ್ನು ಈ ಬಗ್ಗೆ ಪ್ರಶ್ನಿಸಿದರೆ ಉಡಾಫೆಯ ಉತ್ತರ ನೀಡುತ್ತಾರೆ ಎಂಬುದು ಇಲ್ಲಿನ ಸ್ಥಳೀಯರ ಆರೋಪವಾಗಿದೆ.



ಕಾವಲು ಸಿಬ್ಬಂದಿಗಳಿಲ್ಲದ ಚೆಕ್‌ಪೋಸ್ಟ್


ಸೌಕರ್ಯಗಳಿಲ್ಲದ ಹಿನ್ನೀರು ಪ್ರದೇಶ

ಹಾರಂಗಿ ಹಿನ್ನೀರು ಪ್ರದೇಶದಲ್ಲಿ ಮೂರ್ನಾಲ್ಕು ಕಡೆಗಳಲ್ಲಿ ಕಾವೇರಿ ನೀರಾವರಿ ನಿಗಮದ ವತಿಯಿಂದ ಹಾರಂಗಿ ಜಲಾಶಯ ವ್ಯಾಪ್ತಿಯ ನಿರ್ಬಂಧಿತ ಪ್ರದೇಶದಲ್ಲಿ ಸಾರ್ವಜನಿಕರ ಅನಧಿಕೃತ ಪ್ರವೇಶವನ್ನು ಸಂಪೂರ್ಣವಾಗಿ ನಿಷೇಧಿಸಿದೆ. ತಪ್ಪಿದ್ದಲ್ಲಿ ಕಾನೂನು ರೀತಿ ಶಿಸ್ತು ಕ್ರಮ ಜರುಗಿಸಲಾಗುವುದು. ಸಿ.ಸಿ ಕ್ಯಾಮೆರ ಅಳವಡಿಸಲಾಗಿದೆ ಎಂಬ ಎಚ್ಚರಿಕೆಯ ನಾಮಫಲಕವನ್ನು ಅಳವಡಿಸಲಾಗಿದೆ. ಆದರೆ ಇಲ್ಲಿ ಬೋರ್ಡ್ ಅಳವಡಿಕೆ ಕೇವಲ ನಾಮಕಾವಸ್ಥೆಗೆಂಬಂತೆ ಇದೆ. ಇಲ್ಲಿ ಸಂಭವಿಸುವ ದುರಂತವನ್ನು ತಡೆಗಟ್ಟಲು ಇಲ್ಲಿ ಕಾವಲು ಸಿಬ್ಬಂದಿಗಳಿಲ್ಲದಿರುವುದು ಸೋಜಿಗವೆನಿಸಿದೆ. ಅಪಾಯಕಾರಿ ಪ್ರದೇಶವಾಗಿರುವ ಇಲ್ಲಿಗೆ ಬರುವ ಸಾರ್ವಜನಿಕರಲ್ಲಿ ಎಚ್ಚರಿಕೆ ಮೂಡಿಸಿದ್ದಲ್ಲಿ ದುರಂತಗಳನ್ನು ತಡೆಗಟ್ಟಬಹುದು ಎಂಬುದು ಸಾರ್ವ ಜನಿಕರ ಅಭಿಪ್ರಾಯವಾಗಿದೆ. ಪ್ರತಿ ವರ್ಷವೂ ಹಾರಂಗಿ ಹಿನ್ನೀರಿನಲ್ಲಿ ಇಂತಹ ಸಾವಿನ ಪ್ರಕರಣಗಳು ಜರುಗುತ್ತಲೇ ಇದ್ದು, ಸ್ಥಳೀಯರು ಕಲ್ಲು ಬಂಡೆ ಗಳನ್ನು ಜೋಡಿಸಿ ವಾಹನಗಳು ಇಳಿಯದಂತೆ ಕ್ರಮ ಜರುಗಿಸಿದರೂ ಕೂಡ ಕೆಲವರು ಪುಂಡಾಟ ನಡೆಸುತ್ತಾ ಸಾವನ್ನು ಆಹ್ವಾನಿಸಲು ಇಲ್ಲಿಗೆ ಧಾವಿಸುತ್ತಲೇ ಇದ್ದಾರೆ.

ಈ ಅಪಾಯಕಾರಿ ಸ್ಥಳದ ಬಗ್ಗೆ ಸ್ಥಳೀಯರಿಗೆ ಅರಿವಿರುತ್ತದೆ. ಆದರೆ ಹೊರಗಿನಿಂದ ಬರುವವರಿಗೆ ಅಪಾಯದ ಅರಿವಿರುವುದಿಲ್ಲ. ಇಲ್ಲಿಗೆ ಆಗಮಿಸುವಾಗ ಮೂರ್ನಾಲ್ಕು ಕಡೆಗಳಲ್ಲಿ ಎಚ್ಚರಿಕೆಯ ಫಲಕಗಳನ್ನು ಅಳವಡಿಸಲಾಗಿದೆ. ಆದರೆ ಇಲ್ಲಿಗೆ ಕಾವಲು ಸಿಬ್ಬಂದಿಗಳನ್ನು ನಿಯೋಜನೆ ಮಾಡಿಲ್ಲ. ಕಾವಲು ಸಿಬ್ಬಂದಿಗಳನ್ನು ನೇಮಿಸಿದ್ದಲ್ಲಿ ಜೀವ ಹಾನಿಯಂತಹ ದುರಂತ ಘಟನೆಗಳನ್ನು ತಡೆಗಟ್ಟಲು ಸಾಧ್ಯವಿದೆ. ವಾರಾಂತ್ಯದಲ್ಲಿ ಮತ್ತು ರಜಾ ದಿನಗಳಲ್ಲಿ ಇಲ್ಲಿಗೆ ಹೆಚ್ಚಿನ ಸಂಖ್ಯೆಯಲ್ಲಿ ಪ್ರವಾಸಿಗರು, ವಿದ್ಯಾರ್ಥಿಗಳು ಬರುವುದರಿಂದ ಅಗತ್ಯ ತಪಾಸಣೆ ನಡೆಸಿದಲ್ಲಿ ದುರಂತಗಳಿಗೆ ಕಡಿವಾಣ ಹಾಕ ಬಹುದು.

ಹಿನ್ನೀರು ಪ್ರದೇಶಕ್ಕೆ ವಾಹನಗಳು ತೆರಳದಂತೆ ಕಂದಕ ನಿರ್ಮಿಸುವ ಬಗ್ಗೆಯೂ ಗ್ರಾಮ ಪಂಚಾಯಿತಿಯಲ್ಲಿ ಚರ್ಚಿಸಲಾಗಿದೆ ಕಾಂಗ್ರೆಸ್ ಮುಖಂಡ ತೆನ್ನಿರಾ ಮೈನಾ ಮತ್ತು ನಾಕೂರು ಶಿರಂಗಾಲ ಗ್ರಾಮ ಪಂಚಾಯ್ತಿ ಅಧ್ಯಕ್ಷ ಮಂದೋಡಿ ಜಗನ್ನಾಥ್ ಅಭಿಪ್ರಾಯ ವ್ಯಕ್ತಪಡಿಸಿ, ಅಪಾಯಕಾರಿ ಪ್ರದೇಶದಲ್ಲಿ ಸೂಕ್ತ ಬಂದೋಬಸ್ತ್ ವ್ಯವಸ್ಥೆ ಕಲ್ಪಿಸಬೇಕೆಂದು ಒತ್ತಾಯಿಸಿದರು.

ಕಾಫಿ ತೋಟಗಳ ನಡುವೆ ಸದ್ದು ಮಾಡಿದ ಕಾರುಗಳು, ಪೈಪೋಟಿ ನೀಡಿದ ರ್‍ಯಾಲಿ ಪಟುಗಳು



ಸಿದ್ದಾಪುರ, ನ.16– ಕಾಫಿ ತೋಟಗಳ ನಡುವೆ ಸದ್ದು ಮಾಡಿದ ಕಾರುಗಳು; ಪಲ್ಟಿಯಾದ ಎರಡು ಕಾರು. ಅದಕ್ಕನುಗುಣವಾಗಿ ಪೈಪೋಟಿ ನೀಡಿದ ರ್‍ಯಾಲಿ ಪಟುಗಳು–2ನೇ ದಿನವಾದ ಭಾನುವಾರ ಕಂಡು ಬಂದ ದೃಶ್ಯ.

ಬ್ಲೂ ಬ್ಯಾಂಡ್ ಎಫ್‌ಎಂ ಎಸ್‌ಸಿಐ ಇಂಡಿಯನ್ ನ್ಯಾಷನಲ್ ರ್‍ಯಾಲಿ ಚಾಂಪಿಯನ್‌ಷಿಪ್ ನೇತೃತ್ವದಲ್ಲಿ ರೋಬಸ್ಟಾ ಸ್ಪೋರ್ಟ್ಸ್ ಅಂಡ್ ಅಡ್ವೆಂಚರ್ ಅಕಾಡೆಮಿ ಸಹಕಾರದೊಂದಿಗೆ ರೋಬಸ್ಟಾ ರ್‍ಯಾಲಿಯು ಪಾಲಿಬೆಟ್ಟ ಸುತ್ತಮುತ್ತಲ ಕಾಫಿ ತೋಟಗಳಲ್ಲಿ ಕಡಿದಾದ ರಸ್ತೆಯಲ್ಲಿ ಸಂಚರಿಸಿ, ಗುರಿ ಮುಟ್ಟಲು ಹರಸಹಾಸ ಪಟ್ಟರು.

ನಿಗದಿತ ಸಮಯದಲ್ಲಿ ಗುರಿ ಮುಟ್ಟಲು ತಾ ಮುಂದು ನಾ ಮುಂದು ಎಂಬಂತೆ ಕಾರುಗಳು ಶರವೇಗದಲ್ಲಿ ಸಂಚರಿಸಿ ರಸ್ತೆಯುದ್ದಕ್ಕೂ ಧೂಳೆಬ್ಬಿಸಿದವು. ಕರ್ನಾಟಕ, ತಮಿಳುನಾಡು, ಆಂಧ್ರ, ಕೇರಳ, ಮಹಾರಾಷ್ಟ್ರ, ಪಾಂಡಿಚೇರಿ, ಗೋವಾ, ಪೂನಾ, ಚಂಡಿಗಡ್, ಕಲ್ಕತ್ತಾ ಸೇರಿದಂತೆ ವಿವಿಧ ರಾಜ್ಯ ಗಳಿಂದ 58 ಸ್ಪರ್ಧಿಗಳು ಪಾಲ್ಗೊಂಡಿದ್ದರು.

ಪತ್ನಿಗೆ ವಿಡಿಯೋ ಕಾಲ್ ಮಾಡಿ ನೇಣಿಗೆ ಕೊರಳೊಡ್ಡಿದ ಪತಿ

ಮಡಿಕೇರಿ: ತೋಟವೊಂದರಲ್ಲಿ ಕಾಳು ಮೆಣಸು ಕದ್ದು ಜೈಲು ಪಾಲಾಗಿದ್ದ ಯುವಕನೋರ್ವ ಜಾಮೀನಿನಲ್ಲಿ ಹೊರಗೆ ಬಂದ ಎರಡು ವಾರಗಳ ನಂತರ ಪತ್ನಿಗೆ ಲೈವ್ ವಿಡಿಯೋ ಮಾಡಿ ನೇಣಿಗೆ ಕೊರಳೊಡ್ಡಿರುವ ಘಟನೆ ಮಡಿಕೇರಿ ಗ್ರಾಮಾಂತರ ಪೊಲೀಸ್ ಠಾಣಾ ವ್ಯಾಪ್ತಿಯ ಸಿಂಕೋನ ಬಳಿ ನಡೆದಿದೆ.

ಕಿಬ್ಬೆಟ್ಟ ಗ್ರಾಮದ ಕೀರ್ತಿ ಎಂಬಾತನೇ ಈ ರೀತಿ ಆತ್ಮಹತ್ಯೆ ಮಾಡಿಕೊಂಡವನಾಗಿದ್ದಾನೆ. ಈತ ಯಡವಾರೆಯ ಕಾಫಿ ತೋಟದಲ್ಲಿ ಕಾಳು ಮೆಣಸು ಕದ್ದು ಬಂಧನಕ್ಕೊಳಗಾಗಿ ಜೈಲು ಸೇರಿದ್ದು, 15 ದಿನಗಳ ಹಿಂದೆ ಜಾಮೀನು ಪಡೆದು ಹೊರಗೆ ಬಂದಿದ್ದ. ನಿನ್ನೆ ಮಧ್ಯಾಹ್ನ ತಾಲೂಕಿನ ಬೋಯಿ ಕೇರಿ ಸಮೀಪದ ಸಿಂಕೋನದಲ್ಲಿರುವ ದೇವಸ್ಥಾನ ಸಮೀಪ ತೋಟವೊಂದಕ್ಕೆ ತೆರಳಿ ಊರಿನಲ್ಲಿದ್ದ ಪತ್ನಿಗೆ ವಿಡಿಯೋ ಕಾಲ್‌ಮಾಡಿ ಮನೆಗೆ ಬರುವಂತೆ ಕರೆ ದಾಗ ಆಕೆ ಮನೆಗೆ ಬರಲು ನಿರಾಕರಿಸಿದ್ದಳೆನ್ನಲಾಗಿದೆ. ಇದರಿಂದ ಮನನೊಂದು ವಿಡಿಯೋ ಕಾಲ್‌ನಲ್ಲಿ ಮಾತನಾಡುತ್ತಾ ಮರಕ್ಕೆ ಹಗ್ಗ ಬಿಗಿದು ಕುಣಿಕೆ ಯೊಂದಿಗೆ ಕೆಳಗೆ ಜಿಗಿದು ಇಹಲೋಕ ತ್ಯಜಿಸಿದ್ದಾನೆ. ಗ್ರಾಮಾಂತರ ಪೊಲೀಸರು ಅಸಹಜ ಸಾವು ಪ್ರಕರಣ ದಾಖಲಿಸಿಕೊಂಡು ಮುಂದಿನ ಕಾನೂನು ಕ್ರಮ ಕೈಗೊಂಡಿದ್ದಾರೆ.

ಏರ್ ರೈಫಲ್ ಶೂಟಿಂಗ್ ಸ್ಪರ್ಧೆ

ಸಾಧನೆ ಮಾಡಿದ ಕೊಡಗಿನ ಪ್ರಥಮ ಬಾಲಕ


ಉದಾಂತ್ ಉತ್ತಯ್ಯ

ಮಡಿಕೇರಿ: ಒಡಿಶಾ ರಾಜ್ಯದ ರೂರ್ಕೆಲಾದಲ್ಲಿ ನಡೆದ ಏಕಲವ್ಯ ಮಾದರಿ ವಸತಿ ಶಾಲೆಗಳ 14 ವರ್ಷದೊಳಗಿನ ರಾಷ್ಟ್ರೀಯ ಏರ್ ರೈಫಲ್ 10 ಮೀ. ಶೂಟಿಂಗ್ ಸ್ಪರ್ಧೆಯಲ್ಲಿ ಪೊನ್ನೀರ ಉದಾಂತ್ ಉತ್ತಯ್ಯ ಚಾಂಪಿಯನ್ ಆಗಿ ಹೊರ ಹೊಮ್ಮಿದ್ದಾರೆ. ಈ ಮೂಲಕ ಈ ಸಾಧನೆ ಮಾಡಿದ ಕೊಡಗಿನ ಪ್ರಥಮ ಬಾಲಕ ಎಂಬ ಇತಿಹಾಸವನ್ನು ಉದಾಂತ್ ನಿರ್ಮಿಸಿದ್ದಾರೆ. ನ.10ರಿಂದ 15ರವರೆಗೆ ನಡೆದ ಸ್ಪರ್ಧೆಯಲ್ಲಿ ವಿವಿಧ ರಾಜ್ಯಗಳ 50ಕ್ಕೂ ಅಧಿಕ ಸ್ಪರ್ಧಿಗಳು ಭಾಗವಹಿಸಿದ್ದರು. ರಾಜ್ಯ ಮಟ್ಟದ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಪಡೆದ ಉದಾಂತ್ ಉತ್ತಯ್ಯ ರಾಜ್ಯದ ಏಕೈಕ ಶೂಟಿಂಗ್ ಸ್ಪರ್ಧಿಯಾಗಿ ರಾಷ್ಟ್ರ ಮಟ್ಟಕ್ಕೆ ಆಯ್ಕೆಯಾಗಿದ್ದರು. ಪೊನ್ನೀರ ಉದಾಂತ್ ಮೋಹನ್–ಪ್ರೇಮಿ ದಂಪತಿ ಪುತ್ರನಾಗಿದ್ದು ಬಾಳುಗೋಡು ಏಕಲವ್ಯ ವಸತಿ ಶಾಲೆಯಲ್ಲಿ 8ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿದ್ದಾನೆ.

ಪುರಸಭೆಗೆ ಆಡಳಿತ ಅಧಿಕಾರಿಯಾಗಿ ನಿತಿನ್ ಚಕ್ಕಿ



ವಿರಾಜಪೇಟೆ: ಪುರಸಭೆ ಆಡಳಿತದ ಚುನಾಯಿತ ಸದಸ್ಯರ ಅವಧಿ ನ.4ಕ್ಕೆ ಮುಗಿದಿರುವ ಹಿನ್ನೆಲೆಯಲ್ಲಿ ಪುರಸಭೆಗೆ ನೂತನ ಆಡಳಿತ ಅಧಿಕಾರಿಯಾಗಿ ಉಪ ವಿಭಾಗಾಧಿಕಾರಿ ನಿತಿನ್ ಚಕ್ಕಿ ಅವರು ಅಧಿಕಾರ ವಹಿಸಿಕೊಂಡಿದ್ದಾರೆ.

ಮುಖ್ಯಾಧಿಕಾರಿ ಪಿ.ಕೆ.ನಾಚಪ್ಪ ಆಡಳಿತ ಅಧಿಕಾರಿಯನ್ನು ಹೂ ಗುಚ್ಛ ನೀಡಿ ಸ್ವಾಗತಿಸಿದರು. ಪುರಸಭೆ ಅಧಿಕಾರಿ ಮತ್ತು ಸಿಬ್ಬಂದಿ ಸಭೆ ನಡೆಸಿ, ಪ್ರಗತಿಯಲ್ಲಿರುವ ಕಾಮಗಾರಿಗಳ ಬಗ್ಗೆ ಹಾಗೂ ಹಿಂದಿನ 3 ವರ್ಷಗಳಿಂದ ಬಿಡುಗಡೆಯಾದ ಅನುದಾನದ ಬಗ್ಗೆ ಮಾಹಿತಿ ನೀಡುವಂತೆ ಸೂಚಿಸಿದ ಆಡಳಿತ ಅಧಿಕಾರಿ ಸರಕಾರದ ಕೆಲಸ ಸಾರ್ವಜನಿಕರಿಗೆ ಅನುಕೂಲವಾಗುವಂತೆ ಸರಿಯಾದ ಸಮಯಕ್ಕೆ ಮಾಡಬೇಕು ಎಂದರು. ಮುಖ್ಯಾಧಿಕಾರಿ ಪಿ.ಕೆ. ನಾಚಪ್ಪ ಮಾತನಾಡಿದರು. ಪರಿಸರ ಅಭಿಯಂತರ ರೀತುಸಿಂಗ್, ವ್ಯವಸ್ಥಾಪಕ ಸುಜಾತ, ರಾಧ, ಹಾಗೂ ಸಿಬ್ಬಂದಿ ಹಾಜರಿದ್ದರು.

ಕಾರ್ಯಾಗಾರದಲ್ಲಿ ಪ್ರಶಂಸನಾ ಪತ್ರ ಪಡೆದ ರಜಿತ ಕಾರ್ಯಪ್ಪ



ವಿರಾಜಪೇಟೆ: ಬೆಂಗಳೂರಿನ ಹಲಸೂರಿನಲ್ಲಿರುವ ರ್‍ಯಾಡಿಸನ್ ಬೆಂಗಳೂರು ಸಿಟಿ ಸೆಂಟರ್ ಸಭಾಂಗಣದಲ್ಲಿ ಆಯೋಜಿಸಲಾಗಿದ್ದ ಮಹಿಳಾ ಮತ್ತು ಮಕ್ಕಳ ಸಂಬಂಧಿ ಆರೋಗ್ಯ ಕಾರ್ಯಾಗಾರದಲ್ಲಿ ಕೊಡಗಿನ ಸಾಹಿತಿ ಪತ್ರಕರ್ತೆ ರಜಿತ ಕಾರ್ಯಪ್ಪ ಪ್ರಶಂಸನಾ ಪತ್ರ ಪಡೆದುಕೊಂಡಿದ್ದಾರೆ.

ರಾಷ್ಟ್ರೀಯ ಕಿಶೋರ ಸ್ವಾಸ್ಥ್ಯ ಕಾರ್ಯಕ್ರಮದ ಉಪನಿರ್ದೇಶಕಿ ಡಾ. ಇಂದುಮತಿ, ಮೈಸೂರು ವಿವಿ ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ ಅಧ್ಯಯನ ವಿಭಾಗದ ಪ್ರಾಧ್ಯಾಪಕಿ ಡಾ.ಸಪ್ನ, ಯುನಿಸೆಫ್‌ನ ಭಾರತೀಯ ಘಟಕದ ವೈದ್ಯಕೀಯ ಸಲಹೆಗಾರ ಡಾ.ಶ್ರೀಧರ್ ಪ್ರಹ್ಲಾದ್, ಹೈದರಾಬಾದ್ ಯುನಿಸೆಫ್‌ನ ಪ್ರಾದೇಶಿಕ ಕಛೇರಿಯ ಮುಖ್ಯಸ್ಥ ಡಾ, ಪ್ರೊಸುನ್‌ಸೇನ್ ಮತ್ತಿತರರಿದ್ದರು.

ಆದಿವಾಸಿಗಳ ಹಕ್ಕುಗಳಿಗಾಗಿ ಹೋರಾಡಿದ ಬಿರ್ಸಾ ಮುಂಡಾ


ಬಿರ್ಸಾಮುಂಡಾ 150ನೇ ಜಯಂತಿಯನ್ನು ಕೇಂದ್ರ ಮಾಜಿ ಸಚಿವೆ ಭಾರತಿಪ್ರವೀಣ್ ಪವಾರ್ ಉದ್ಘಾಟಿಸಿದರು. ವಿಪಕ್ಷನಾಯಕ ಆರ್. ಅಶೋಕ್ ಮೊದಲಾದವರು ಉಪಸ್ಥಿತರಿದ್ದರು.

ಚಾಮರಾಜನಗರ, ನ.16–ಭಗವಾನ್ ಬಿರ್ಸಾ ಮುಂಡಾ ಬ್ರಿಟಿಷ್ ಆಳ್ವಿಕೆಯ ವಿರುದ್ಧ ದಂಗೆ ಎದ್ದು ಆದಿವಾಸಿಗಳ ಹಕ್ಕುಗಳಿಗಾಗಿ ಹೋರಾಡಿದರು ಎಂದು ವಿಪಕ್ಷ ನಾಯಕ ಆರ್.ಅಶೋಕ್ ಹೇಳಿದರು.

ನಗರದ ವರನಟ ಡಾ.ರಾಜ್‌ಕುಮಾರ್ ಕಲಾಮಂದಿರದಲ್ಲಿ ಬಿಜೆಪಿ ವತಿಯಿಂದ ನಡೆದ ಜನಜಾತೀಯ ಗೌರವ ದಿವಸ ಭಗವಾನ್ ಬಿರ್ಸಾ ಮುಂಡಾ ಅವರ 150ನೇ ಜಯಂತಿಯನ್ನು ಉದ್ಘಾಟಿಸಿದ ಅವರು, ಕೇವಲ 18 ವರ್ಷಕ್ಕೆ ಬುಡಕಟ್ಟು ಸಮುದಾಯವನ್ನು ಸಂಘಟಿಸಿ ಬ್ರಿಟಿಷರ ವಿರುದ್ಧ ಹೋರಾಟ ಮಾಡುವ ಮೂಲಕ ಬುಡಕಟ್ಟು ಸಂಸ್ಕೃತಿ ಸಂರಕ್ಷಣೆ ಮಾಡಿದರು. ಆ ಕಾಲದಲ್ಲಿ ಬ್ರಿಟಿಷರ ಮತಾಂತರ ವಿರುದ್ಧವೂ ಹೋರಾಟ ಮಾಡಿದ ಕೀರ್ತಿ ಅವರಿಗೆ ಸಲ್ಲುತ್ತದೆ ಎಂದರು.

ಬಿರ್ಸಾ ಮುಂಡಾ ಅವರು ದೇಶಕ್ಕೆ ಕೀರ್ತಿ ತರುವ ಕೆಲಸವನ್ನು ಮಾಡಿದರು. ಅವರ ಜಯಂತಿಯನ್ನು ಕೇಂದ್ರ ಸರ್ಕಾರ, ಬಿಜೆಪಿ ಆಚರಣೆ ಮಾಡುವ ಮೂಲಕ ಬುಡಕಟ್ಟು ಜನರ ಹಕ್ಕುಗಳನ್ನು ರಕ್ಷಣೆ ಮಾಡಲಾಗುತ್ತದೆ. ಸಮಾಜದಲ್ಲಿ ಒಂದಾಗಿ ಕೆಲಸ ಮಾಡುವ ಅವಕಾಶವನ್ನು ಮೋದಿಯವರು ಕಲ್ಪಿಸಿಕೊಡುತ್ತಿದ್ದಾರೆ. ಬಿರ್ಸಾಮುಂಡಾ ಅವರ ತ್ಯಾಗವು ಇಂದಿಗೂ ಆದಿವಾಸಿಗಳ ಸಮುದಾಯಗಳಿಗೆ ಮತ್ತು ಅನ್ಯಾಯದ ವಿರುದ್ಧ ಹೋರಾಡುವ ಇತರರಿಗೆ ಸ್ಫೂರ್ತಿಯಾಗಿದೆ ಎಂದರು.

ಕಾರ್ಯಕ್ರಮ ಉದ್ಘಾಟಿಸಿದ ಕೇಂದ್ರ ಮಾಜಿ ಸಚಿವೆ ಭಾರತಿಪ್ರವೀಣ್ ಪವಾರ್ ಮಾತನಾಡಿ, ನರೇಂದ್ರ ಮೋದಿ ಅವರ ನೇತೃತ್ವದ ಕೇಂದ್ರ ಸರ್ಕಾರ ಭಗವಾನ್ ಬಿರ್ಸಾಮುಂಡಾ ಜಯಂತಿ ಆಚರಣೆ ಮಾಡುವ ಅವರ ಜೀವನ ಚರಿತ್ರೆಯನ್ನು ದೇಶಕ್ಕೆ ತಿಳಿಸಿಕೊಡುವ ಕೆಲಸ ಮಾಡುತ್ತಿದೆ ಇಂತಹ ಕೆಲಸವನ್ನು ಬೇರೆ ಸರ್ಕಾರ ಮಾಡಿಲ್ಲ. ಅವರು ದೇಶಕ್ಕಾಗಿ, ಬುಡಕಟ್ಟು ಸಮುದಾಯಕ್ಕಾಗಿ ತ್ಯಾಗ ಮಾಡಿದ್ದಾರೆ ಎಂದರು.

ಅಧ್ಯಕ್ಷತೆ ವಹಿಸಿದ್ದ ಬಿಜೆಪಿ ಜಿಲ್ಲಾಧ್ಯಕ್ಷ ಸಿ.ಎಸ್.ನಿರಂಜನ್ ಕುಮಾರ್ ಮಾತನಾಡಿ, ಭಗವಾನ್ ಬಿರ್ಸಾಮುಂಡಾ ಅವರು ಬ್ರಿಟಿಷರ ವಿರುದ್ಧ ಹೋರಾಟ ಮಾಡಿ ಬುಡಕಟ್ಟು ಸಮುದಾಯಗಳ ರಕ್ಷಣೆ ಮಾಡಿದ ಮಹಾಪುರುಷರು. ಅವರನ್ನು ಸ್ಮರಣೆ ಮಾಡಿಕೊಳ್ಳುವುದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ ಎಂದರು. ಎಸ್‌ಟಿ ಮೋರ್ಚಾದ ರಾಜ್ಯಾಧ್ಯಕ್ಷ ಬಂಗಾರು ಹನುಮಂತು, ಮಾಜಿ ಸಚಿವ ಎನ್.ಮಹೇಶ್ ಮಾತನಾಡಿದರು.

ಮಾಜಿ ಶಾಸಕ ಎಸ್. ಬಾಲರಾಜು, ಪ್ರೊ.ಮಲ್ಲಿಕಾರ್ಜುನಪ್ಪ, ಕೇಂದ್ರ ಪರಿಹಾರ ಸಮಿತಿ ಮಾಜಿ ಅಧ್ಯಕ್ಷ ಎಂ.ರಾಮಚಂದ್ರ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಪಿ.ವೃಷಭೇಂದ್ರಪ್ಪ, ಮೂಡ್ನಾಕೂಡು ಪ್ರಕಾಶ್, ಹೊನ್ನೂರು ಮಹಾದೇವಸ್ವಾಮಿ, ಜಿಲ್ಲಾ ಉಪಾಧ್ಯಕ್ಷ ಶಿವುವಿರಾಟ್, ನಗರಸಭಾ ಮಾಜಿ ಅಧ್ಯಕ್ಷ ಸುರೇಶ್, ಮಾಜಿ ಮೇಯರ್ ಶಿವಕುಮಾರ್, ಬಿಜೆಪಿ ಮಾಜಿ ಅಧ್ಯಕ್ಷ ಆರ್. ಸುಂದರ್, ಮುಖಂಡ ಅಪ್ಪಣ್ಣ ಎಸ್‌ಟಿ ಮೋರ್ಚಾದ ರಾಜ್ಯ ಕಾರ್ಯದರ್ಶಿ ಜಯಸುಂದರ್, ಜಿಲ್ಲಾಧ್ಯಕ್ಷ ಚಂದ್ರಶೇಖರ್, ಜಿಪಂ ಮಾಜಿ ಸದಸ್ಯ ಬಾಲರಾಜು, ಗ್ರಾಮಾಂತರ ಮಂಡಲ ಅಧ್ಯಕ್ಷ ಕಾಡಹಳ್ಳಿ ಕುಮಾರ್, ನಗರ ಮಂಡಲ ಅಧ್ಯಕ್ಷ ಶಿವರಾಜ್, ಚೂಡಾ ಮಾಜಿ ಅಧ್ಯಕ್ಷ ಬಾಲಸುಬ್ರಹ್ಮಣ್ಯಂ, ಜಿಲ್ಲಾ ಉಪಾಧ್ಯಕ್ಷ ಶಿವುವಿರಾಟ್, ತಾಲೂಕು ಪ್ರಧಾನ ಕಾರ್ಯದರ್ಶಿಗಳಾದ ಕೂಸಣ್ಣ, ಮಹೇಶ್, ರಾಮಸಮುದ್ರ ಶಿವಣ್ಣ, ಜಿಲ್ಲಾಮೋರ್ಚಾದ ಅಧ್ಯಕ್ಷೆ ಕಮಲಮ್ಮ, ಪ್ರಧಾನ ಕಾರ್ಯದರ್ಶಿ ಶೈಲಜಾ ಇತರರು ಹಾಜರಿದ್ದರು.

ಬಿಹಾರ ಚುನಾವಣೆ: ಗುಂಡ್ಲುಪೇಟೆಯಲ್ಲಿ ಸಂಭ್ರಮಾಚರಣೆ

ಗುಂಡ್ಲುಪೇಟೆ, ನ.16(ಸೋಮ್.ಜಿ)– ಬಿಹಾರದಲ್ಲಿ ಎನ್‌ಡಿಎ ಮೈತ್ರಿಕೂಟ ಅಭೂತಪೂರ್ವ ಜಯಗಳಿಸಿದ ಹಿನ್ನೆಲೆಯಲ್ಲಿ ಪಟ್ಟಣದಲ್ಲಿ ಬಿಜೆಪಿ ಕಾರ್ಯಕರ್ತರು ಸಂಭ್ರಮಾಚರಣೆ ಮಾಡಿದರು.

ಜಿಲ್ಲಾಧ್ಯಕ್ಷ ಸಿ.ಎಸ್.ನಿರಂಜನಕುಮಾರ್ ನೇತೃತ್ವದಲ್ಲಿ ಶುಕ್ರವಾರ ಪಟ್ಟಣದ ಬಸವೇಶ್ವರ ವೃತ್ತದಲ್ಲಿ ಸೇರಿ ಬಿಜೆಪಿ ಕಾರ್ಯಕರ್ತರು ಪಟಾಕಿ ಸಿಡಿಸಿ ಸಿಹಿ ಹಂಚಿ ಸಂಭ್ರಮಾಚರಣೆ ಮಾಡಿದರು. ಮೋದಿ ಪ್ರಧಾನಿಯಾದ ನಂತರ ವಿದೇಶಗಳಲ್ಲಿ ದೇಶದ ಘನತೆ ಹೆಚ್ಚಿದ್ದು, ಮತದಾರರು ಅವರ ನಿಸ್ವಾರ್ಥ ಅಭಿವೃದ್ಧಿ ಕಾರ್ಯಗಳನ್ನು ಒಪ್ಪಿಕೊಂಡಿದ್ದಾರೆ. ನಿತೀಶ್ ಕುಮಾರ್ ಎನ್‌ಡಿಎ ಮೈತ್ರಿ ನಂತರ ಅತ್ಯಂತ ವೇಗವಾಗಿ ಅಭಿವೃದ್ಧಿ ಹೊಂದಿದ್ದು ಬಿಹಾರ ಜನತೆಗೆ ಮನವರಿಕೆಯಾಗಿದ್ದರಿಂದ ಈ ಮಟ್ಟದ ಅಪೂರ್ವ ಗೆಲುವು ಸಾಧ್ಯವಾಗಿದೆ. ದೇಶವು ಕಾಂಗ್ರೆಸ್ ಮುಕ್ತವಾಗುವ ಸನಿಹದಲ್ಲಿದೆ ಎಂದು ಹೇಳಿದರು. ಮಂಡಲಾಧ್ಯಕ್ಷ ಸಿ.ಮಹದೇವಪ್ರಸಾದ್, ಪುರಸಭೆ ಸದಸ್ಯ ನಾಗೇಶ್, ಮಹೇಂದ್ರ, ಬಸವರಾಜು, ಪ್ರಣಯ್, ಮಂಜು ಮೊದಲಾದವರು ಇದ್ದರು.

ರಾಗಾ ಪಾರ್ಟ್ ಟೈಂ ರಾಜಕಾರಣಿ: ಅಶೋಕ್ ವ್ಯಂಗ್ಯ

ಚಾಮರಾಜನಗರ, ನ.16– ರಾಹುಲ್ ಗಾಂಧಿ ಓರ್ವ ಪಾರ್ಟ್ ಟೈಂ ರಾಜಕಾರಣಿ, ಚುನಾವಣೆ ವೇಳೆ ಚುನಾವಣೆ ನಂತರ ಫಾರೀನ್‌ಗೆ ಹೋಗ್ತಾರೆ ಎಂದು ವಿಪಕ್ಷ ನಾಯಕ ಅಶೋಕ್ ವ್ಯಂಗ್ಯವಾಡಿದ್ದಾರೆ.

ಬಿಜೆಪಿ ಬಿರ್ಸಾ ಮುಂಡಾ ಜಯಂತಿ ಸಮಾರಂಭದಲ್ಲಿ ಮಾತನಾಡಿದ ಅವರು, ಬರಿ ದೇಶ ವಿದೇಶ ಸುತ್ತೋದೆ ಇವರ ಕೆಲಸವಾಗಿದೆ ರಾಹುಲ್ ಗಾಂಧಿಯವರಿಗೆ ಪಕ್ಷ ಬಲವರ್ಧನೆ ಬಗ್ಗೆ ಕಿಂಚಿತ್ತೂ ಆಸಕ್ತಿಯಿಲ್ಲ ಎಂದು ಸುದ್ದಿಗಾರರ ಬಳಿ ಮೂದಲಿಸಿದರು.

ಚುನಾವಣೆಯಲ್ಲಿ ಕಾಂಗ್ರೆಸ್ ಗೆದ್ರೆ ಮಾತ್ರ ಇವಿಎಂ ಸರಿಯಾಗಿರುತ್ತೆ. ಬಿಜೆಪಿ ಅಥವಾ ಬೇರೆ ಪಕ್ಷ ಗೆದ್ರೆ ಇವಿಎಂನಲ್ಲಿ ಇವರ ಪ್ರಕಾರ ಮೋಸ ಆಗಿರುತ್ತೆ ಇವರ ಮತ ಚೋರಿ ಸುಳ್ಳಿನ ಕಂತೆಯನ್ನ ದೇಶದ ಜನ ಒಪ್ಪಿಲ್ಲ, ಬಿಹಾರ ಚುನಾವಣೆ ಫಲಿತಾಂಶದಿಂದ ಕಾಂಗ್ರೆಸ್ ಎಲ್ಲ ಉಲ್ಟಾ ಆಗೋಗಿದೆ ಗಾಂಧಿ ಕುಟುಂಬದ ಆಟ ದೇಶದಲ್ಲಿ ಇನ್ನು ಯಾವುದೇ ಕಾರಣಕ್ಕೂ ನಡೆಯುವುದಿಲ್ಲ ಎಂದು ಟೀಕಿಸಿದರು.

ಬಿಹಾರದ ಚುನಾವಣೆಯಲ್ಲಿ ಕಾಂಗ್ರೆಸ್ ಸೋತ ನಂತರ ರಾಹುಲ್ ಗಾಂಧಿ ವೀಕ್ ಆಗಿದ್ದಾರೆ. ಇನ್ನೇನಿದ್ರೂ ಕಾಂಗ್ರೆಸ್‌ನಲ್ಲಿ ಸಿದ್ದರಾಮಯ್ಯ ಅವರದೇ ಪವರ್. ಹಾಗಾಗಿ, ಇಷ್ಟು ದಿನ ರಾಹುಲ್ ಹೇಳಿದಂಗೆ ಸಿದ್ದರಾಮಯ್ಯ ಕೇಳುತ್ತಿದ್ದರು. ಇನ್ಮುಂದೆ ಸಿದ್ದರಾಮಯ್ಯ ಹೇಳಿದಂಗೆ ರಾಹುಲ್ ಗಾಂಧಿ ಕೇಳಬೇಕು ಎಂದು ವಿಪಕ್ಷ ನಾಯಕ ಆರ್. ಅಶೋಕ್ ವ್ಯಂಗ್ಯವಾಡಿದರು.


ನಗರದ ಶ್ರೀಚಾಮರಾಜೇಶ್ವರ ದೇವಸ್ಥಾನದ ಮುಂಭಾಗ ಮೆರವಣಿಗೆಗೆ ಅಶೋಕ್ ಚಾಲನೆ ನೀಡಿದರು.

ಮುಖ್ಯಮಂತ್ರಿಯಾಗಲು ಡಿ.ಕೆ. ಶಿವಕುಮಾರ್ ಅವರು ಬ್ರಹ್ಮನನ್ನು ಬಿಟ್ಟು ಈಶ್ವರ, ವೆಂಕಟೇಶ್ವರ, ನಾರಾಯಣ ಸೇರಿದಂತೆ ಎಲ್ಲಾ ದೇವರನ್ನು ನೋಡಿ ಬಿಟ್ಟಿದ್ದಾರೆ. ಡಿಕೆಶಿ ಪಾಲಿಗೆ ಬಿಹಾರ ಚುನಾವಣೆ ಬ್ರಹ್ಮ ಇದ್ದಂಗೆ. ಬ್ರಹ್ಮ ಹಣೆಬರಹದ ವರ ಕೊಡಲಿಲ್ಲ. ಅದಕ್ಕೆ ಈಗ ಸಿದ್ದರಾಮಯ್ಯ ಆಟ ಶುರು ಮಾಡಿದ್ದಾರೆ. ಹೀಗಾಗಿ, ಡಿಕೆಶಿ ಸಿಎಂ ಆಗುವುದು ಅನುಮಾನವಾಗಿದೆ. ಈ ಬಗ್ಗೆ ಡಿಕೆಶಿ ಅವರೇ ಹೇಳಬೇಕು ಎಂದು ಲೇವಡಿ ಮಾಡಿದರು.

ಇಷ್ಟು ದಿನ ಎಲ್ಲಿಗೂ ಹೋಗದೇ ಇರುವ ಸಿದ್ದರಾಮಯ್ಯ ಅವರು ಈಗ ದೆಹಲಿಯಲ್ಲೇ ಠಿಕಾಣಿ ಹೂಡುತ್ತಿದ್ದಾರೆ. ಈ ಮೂಲಕ ಕೇಂದ್ರದ ಕಾಂಗ್ರೆಸ್‌ಗಿಂತ ನಾನೇ ಪವರ್‌ಫುಲ್ ಅಂತ ತೋರಿಸುತ್ತಿದ್ದಾರೆ. ಹೀಗಾಗಿ ನವೆಂಬರ್–ಡಿಸೆಂಬರ್‌ನಲ್ಲಿ ಈ ಕಾಂತ್ರಿಗಳೆಲ್ಲ ಗೊತ್ತಾಗಲಿದೆ. ಬದಲಾವಣೆಗಳು ಎಲ್ಲವೂ ನೋಡೋಣ ಎಂದರು.

ಕುಣಿತಕ್ಕೆ ಹೆಜ್ಜೆ ಹಾಕಿದ ಅಶೋಕ್: ನಗರದ ಶ್ರೀಚಾಮರಾಜೇಶ್ವರ ದೇವಸ್ಥಾನದ ಮುಂಭಾಗ ಮೆರವಣಿಗೆಗೆ ಚಾಲನೆ ನೀಡಿದ ಅಶೋಕ್, ಜಿಲ್ಲಾಡಳಿತ ಭವನ ಮುಂಭಾಗ ಗೊರವರ ಕುಣಿತಕ್ಕೆ ಹೆಜ್ಜೆ ಹಾಕಿದರು. ಢಮರುಗ ಹಿಡಿದು ನೃತ್ಯ ಮಾಡಿದ ಅಶೋಕ್ ಅವರಿಗೆ ಬಿಜೆಪಿ ಮುಖಂಡರಾದ ಬಂಗಾರು ಹನುಮಂತು, ಸಿ.ಎಸ್.ನಿರಂಜನ ಕುಮಾರ್, ರಾಮಚಂದ್ರು ಸಾಥ್ ಕೊಟ್ಟರು.

ಬಿಜೆಪಿ ಸೇರ್ಪಡೆ : ಪದವಿಪೂರ್ವ ಶಿಕ್ಷಣ ಇಲಾಖೆಯ ನಿವೃತ್ತ ಉಪನಿರ್ದೇಶಕ ಸಾಹಿತಿ ಕೋಡಿಉಗನೆ ಮಂಜು ಹಾಗೂ ಬೆಂಬಲಿಗರು ಇಂದು ಬಿಜೆಪಿ ಸೇರ್ಪಡೆಯಾದರು.

ಭಗವಾನ್ ಬಿರ್ಸಾಮುಂಡಾ 150ನೇ ಜಯಂತಿ ಸಮಾರಂಭದಲ್ಲಿ ಸಾಹಿತಿ ಕೋಡಿಉಗನೆ ಮಂಜು, ಬೆಂಬಲಿಗರಾದ ಗ್ರಾಪಂ ಮಾಜಿ ಸದಸ್ಯ ರಂಗಸ್ವಾಮಿ, ಪಿಎಸಿಸಿ ಬ್ಯಾಂಕ್ ನಿರ್ದೇಶಕ ಬಸವಾಪುರ ರಂಗಸ್ವಾಮಿ, ಮಹದೇವಯ್ಯ, ಬೆಂಡರವಾಡಿ ಮಹದೇವು, ಸಿದ್ದಯ್ಯನಪುರ ಮಂಜು, ಮೂಡಳ್ಳಿ ಮಹದೇವಯ್ಯ, ಅಂಕಯ್ಯ ಸೇರಿದಂತೆ 20ಕ್ಕೂ ಹೆಚ್ಚು ಮಂದಿ ಬಿಜೆಪಿಗೆ ಸೇರ್ಪಡೆಯಾದರು. ಅವರನ್ನು ವಿಪಕ್ಷನಾಯಕ ಆರ್. ಅಶೋಕ್, ಬಿಜೆಪಿ ಜಿಲ್ಲಾಧ್ಯಕ್ಷ ನಿರಂಜನ್ ಕುಮಾರ್ ಪಕ್ಷದ ಶಲ್ಯ ಹಾಕಿ ಸ್ವಾಗತಿಸಿ ಬರಮಾಡಿಕೊಂಡರು.

ಪತ್ರಕರ್ತರ ಸಂಘಕ್ಕೆ ಆಯ್ಕೆಯಾದವರಿಗೆ ಸನ್ಮಾನ



ಯಳಂದೂರು, ನ.16(ವಿ.ನಾಗರಾಜು)–ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘಕ್ಕೆ ಆಯ್ಕೆಯಾದವರನ್ನು ಎ.ಆರ್.ಕೃಷ್ಣಮೂರ್ತಿ ಅಭಿಮಾನಿ ಬಳಗದ ವತಿಯಿಂದ ಶನಿವಾರ ಸನ್ಮಾನಿಸಲಾಯಿತು.

ಕಾರ್ಯದರ್ಶಿಯಾಗಿ ಆಯ್ಕೆಯಾದ ಯರಿಯೂರು ನಾಗೇಂದ್ರ, ನಿರ್ದೇಶಕರಾಗಿ ಆಯ್ಕೆಯಾದ ಭಾನುಪ್ರಕಾಶ್, ವೈ.ಕೆ.ಮೋಳೆ. ಎಂ.ಬಸವರಾಜು ರವರನ್ನು ಸನ್ಮಾನಿಸಲಾಯಿತು. ತಾಲೂಕು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ಕಿನಕಹಳ್ಳಿ ಪ್ರಭುಪ್ರಸಾದ್, ಅಭಿಮಾನಿ ಬಳಗದ ಕಂದಹಳ್ಳಿ ನಂಜುಂಡಸ್ವಾಮಿ, ಹೊನ್ನೂರು ರಾಘವೇಂದ್ರ ಪ್ರಸಾದ್, ದುಗ್ಗಹಟ್ಟಿ ಜಿ.ಮಾದೇಶ್, ಪಪಂ ನಾಮ ನಿರ್ದೇಶಿತ ಸದಸ್ಯ ಮುನಾವರ್ ಬೇಗ್, ಮುಖಂಡರಾದ ಶಿವನಂಜಯ್ಯ, ಸೋಮನಾಯಕ, ತಾಲೂಕು ಯೂತ್ ಕಾಂಗ್ರೆಸ್ ಅಧ್ಯಕ್ಷ ವಿಜಯ್ ಕುಮಾರ್ ಇದ್ದರು.

ಅಮಚವಾಡಿಯಲ್ಲಿ ಮಕ್ಕಳ ದಿನಾಚರಣೆ

ಚಾಮರಾಜನಗರ, ನ.16– ತಾಲೂಕು ಗಡಿ ಗ್ರಾಮ ಅಮಚವಾಡಿ ಸರ್ಕಾರಿ ಪದವಿ ಪೂರ್ವ ಕಾಲೇಜು ಆವರಣದಲ್ಲಿ ಪೋಷಕ ಉಪನ್ಯಾಸಕರ ಮಹಾಸಭೆ ಹಾಗೂ ಮಕ್ಕಳ ದಿನಾಚರಣೆ ಸಂಭ್ರಮ ಸಡಗರದಿಂದ ಜರುಗಿತು.

ವಿದ್ಯಾರ್ಥಿ ಪೋಷಕರಾದ ಪುಟ್ಟಮ್ಮ, ಸೋಮಣ್ಣ, ಕುಮಾರ್, ಪುಟ್ಟಲಕ್ಷ್ಮಿ ತುಳಸಿ ನಾಗಶೆಟ್ಟಿ ದೀಪ ಬೆಳಗಿಸಿ ಉದ್ಘಾಟಿಸಿದರು. ಹಿರಿಯ ಉಪನ್ಯಾಸಕ ಮೂರ್ತಿ ಮಾತನಾಡಿ ಪೋಷಕರು ಉಪನ್ಯಾಸಕರು ಸದಾ ಮಕ್ಕಳ ಕಲಿಕೆಗೆ ಸ್ಫೂರ್ತಿ ತುಂಬಬೇಕು ಎಂದರು.

ಉಪನ್ಯಾಸಕ ಸುರೇಶ್ ಎನ್ ಋಗ್ವೇದಿ ಮಾತನಾಡಿ ಬಡತನ ಮತ್ತು ಇತರ ಕಾರಣಗಳಿಂದ ಶಿಕ್ಷಣ ಪಡೆಯಲು ತೊಡಕಾಗಬಾರದು. ಬಡತನದ ನೋವಿನಲ್ಲಿ ಜನ್ಮತಾಳಿದ ಅನೇಕರು ಶ್ರೇಷ್ಠರು ಹಾಗೂ ವಿಶ್ವ ಪ್ರಸಿದ್ಧರಾಗಿದ್ದಾರೆ. ಕಲಿಕೆಯ ಗುರಿ ಬಹಳ ಮುಖ್ಯವಾದದ್ದು, ನಮ್ಮ ಎಲ್ಲಾ ಮೂಲ ಸಮಸ್ಯೆಗಳಿಗೆ ಪರಿಹಾರ ಶಿಕ್ಷಣವನ್ನು ಪಡೆಯುವುದರಲ್ಲಿ ಅಡಗಿದೆ ಎಂದರು. ಉಪನ್ಯಾಸಕರಾದ ಶಿವರಾಮು, ಬಸವಣ್ಣ, ರಮೇಶ್, ಸುರೇಶ್, ದೊಡ್ಡಮ್ಮ ಹಾಗೂ ಪೋಷಕರು ಮಾತನಾಡಿದರು.


ಅಮಚವಾಡಿ ಸರ್ಕಾರಿ ಪಿಯು ಕಾಲೇಜಿನಲ್ಲಿ ಮಕ್ಕಳ ದಿನಾಚರಣೆ ಸಂಭ್ರಮ ಸಡಗರದಿಂದ ಜರುಗಿತು.

ಪ್ರತಿಭಾ ವಿದ್ಯಾರ್ಥಿಗಳನ್ನು ಗೌರವಿಸಲಾಯಿತು ಮಕ್ಕಳ ದಿನಾಚರಣೆ ಅಂಗವಾಗಿ ಎಲ್ಲಾ ವಿದ್ಯಾರ್ಥಿಗಳಿಗೂ ಪೆನ್ನು ಮತ್ತು ಪುಸ್ತಕಗಳನ್ನು ನೀಡಲಾಯಿತು. ಸಭೆಯ ಅಧ್ಯಕ್ಷತೆಯನ್ನು ಪ್ರಾಚಾರ್ಯ ಶಿವನಂಜಪ್ಪ ವಹಿಸಿದ್ದರು.

ಪಾದಚಾರಿಗೆ ಡಿಕ್ಕಿ : ಬೈಕಿನ ಹಿಂಬದಿ ಸವಾರ ಸಾವು

ಕೊಳ್ಳೇಗಾಲ, ನ.16–ಪಾದಚಾರಿಗೆ ಡಿಕ್ಕಿ ಹೊಡೆದ ಪರಿಣಾಮ ಬೈಕ್‌ನ ಹಿಂಬದಿ ಸವಾರ ಸ್ಥಳದಲ್ಲೇ ಸಾವನ್ನಪ್ಪಿರುವ ಘಟನೆ ತಾಲೂಕಿನ ಕೊಂಗರಹಳ್ಳಿ ಗ್ರಾಮದ ರಸ್ತೆಯಲ್ಲಿ ಇಂದು ಜರುಗಿದೆ.

ಮಳವಳ್ಳಿ ತಾಲೂಕಿನ ರಾವಂದೂರು ಗ್ರಾಮದ ಮನೋಹರ್(18) ಮೃತ ದುರ್ದೈವಿ. ಬೈಕ್‌ನ ಸವಾರ ಮದ್ದೂರು ರವಿಕುಮಾರ್ ಹಾಗೂ ಪಾದಚಾರಿ ಕಾಮಗೆರೆ ಸುರೇಶ್ ಗಾಯಗೊಂಡು ಕಾಮಗೆರೆ ಆಸ್ಪತ್ರೆಯಲ್ಲಿ ಚಿಕಿತ್ಸೆಗೆ ದಾಖಲಾಗಿದ್ದಾರೆ.

ಬೈಕ್ ಸವಾರರಿಬ್ಬರು ಬೆಂಗಳೂರಿನ ಕಂಪನಿಯೊಂದರಲ್ಲಿ ಕೆಲಸ ಮಾಡುತ್ತಿದ್ದು, ರಜಾ ದಿನವಾದ ಇಂದು ಮಲೈಮಹದೇಶ್ವರ ಬೆಟ್ಟಕ್ಕೆ ತನ್ನ ಸ್ನೇಹಿತರ ಜೊತೆ ತೆರಳಿ ವಾಪಸ್ಸು ಬರುವಾಗ ಕೊಂಗರಹಳ್ಳಿ ಗ್ರಾಮದ ರಸ್ತೆಯಲ್ಲಿ ಪಾದಚಾರಿಗೆ ಡಿಕ್ಕಿ ಹೊಡೆದ ಪರಿಣಾಮ ಬೈಕ್ ಹಿಂಬದಿಯಲ್ಲಿ ಕುಳಿತಿದ್ದ ಮನೋಹರ್ ರಸ್ತೆ ಮೇಲೆ ಬಿದ್ದು ತೀವ್ರವಾಗಿ ಗಾಯಗೊಂಡು ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿಕೊಂಡು, ವಾಹನ ವಶಪಡಿಸಿಕೊಂಡು ಮುಂದಿನ ತನಿಖೆ ನಡೆಸುತ್ತಿದ್ದಾರೆ.

ಮೈಸೂರು ಮಿತ್ರ

ಸೋಮವಾರ 17 ನವೆಂಬರ್ 2025

ಒಂದನೇ ಪುಟದಿಂದ

13 ಕೆರೆಗಳ ಪುನರುಜ್ಜೀವನ

ಜಿಲ್ಲಾಧಿಕಾರಿಗಳೂ ಆದ ಮೈಸೂರು ಅಭಿವೃದ್ಧಿ ಪ್ರಾಧಿಕಾರದ ಆಯುಕ್ತ ಜಿ. ಲಕ್ಷ್ಮೀಕಾಂತ ರೆಡ್ಡಿ ಅವರ ಅಧ್ಯಕ್ಷತೆಯಲ್ಲಿ ಇತ್ತೀಚೆಗಷ್ಟೇ ಜಿಲ್ಲಾ ಪಂಚಾಯತ್ ಕಚೇರಿಯಲ್ಲಿ ನಡೆದ ಕೆರೆ ಅಭಿವೃದ್ಧಿ ಕುರಿತ ಏಕ-ಗವಾಕ್ಷಿ ಸಭೆಯಲ್ಲಿ ಈ ಮಹತ್ವಾಕಾಂಕ್ಷಿ ಯೋಜನೆಯನ್ನು ಅನುಷ್ಠಾನಗೊಳಿಸಲು ಅನುಮೋದನೆ ನೀಡಲಾಗಿತ್ತು.

ಈ ಸಂಬಂಧ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಎಂಡಿಎ ಆಯುಕ್ತ ಕೆ.ಆರ್.ರಕ್ಷಿತ್ ಅವರು, ಪ್ರಾಧಿಕಾರ ನೀಡುತ್ತಿರುವ ವಿವಿಧ ಸೇವೆಗಳಿಗೆ ಸಾರ್ವಜನಿಕರಿಂದ ಸಂಗ್ರಹಿಸುತ್ತಿರುವ ಶುಲ್ಕದೊಂದಿಗೆ 50 ಕೋಟಿ ರೂ. ಕೆರೆ ಅಭಿವೃದ್ಧಿ ಸೆಸ್ ಸಹ ಸೇರಿದ್ದು, ಅದನ್ನು ನಿಗದಿತ ಉದ್ದೇಶಕ್ಕೇ ಬಳಸಬೇಕೆಂಬ ನಿಯಮವನ್ನು ಸಾಕಾರಗೊಳಿಸಲು ಮುಂದಾಗಿದ್ದೇವೆ ಎಂದರು. ಅದಕ್ಕಾಗಿಯೇ ಪಕ್ಷಿ ಸಂಕುಲಕ್ಕೆ ಅನುಕೂಲವಾಗುವಂತೆ ಹಾಗೂ ನೈಸರ್ಗಿಕ ಜಲ ಸಂಪನ್ಮೂಲವನ್ನು ರಕ್ಷಿಸಿ ಅಂತರ್ಜಲ ವೃದ್ಧಿಸುವುದು ಈ ಯೋಜನೆಯ ಮುಖ್ಯ ಉದ್ದೇಶವಾಗಿದೆ. ಕೆರೆಗಳ ಹೂಳು ತೆಗೆಯುವುದು, ಕೆರೆ ಬಂಡ್ ಅಭಿವೃದ್ಧಿ, ವಾಕಿಂಗ್ ಪಾತ್ ಸೇರಿದಂತೆ ಹಲವು ಕಾಮಗಾರಿಗಳನ್ನು ಕೈಗೊಂಡು ಕೆರೆಗಳನ್ನು ಪುನರುಜ್ಜೀವನಗೊಳಿಸಲು ಮುಂದಾಗಿದ್ದೇವೆ ಎಂದ ರಕ್ಷಿತ್, ಒಂದು ವೇಳೆ ನಾವು ಈ ಅನುದಾನವನ್ನು ಬಳಸದೇ ಇದ್ದಲ್ಲಿ ಸರ್ಕಾರ ಈ ಹಣವನ್ನು ಸಣ್ಣ ನೀರಾವರಿ ಇಲಾಖೆಗೆ ವರ್ಗಾಯಿಸಲು ಸೂಚನೆ ನೀಡುತ್ತಿತ್ತು ಎಂದು ತಿಳಿಸಿದರು.

ನಿತೀಶ್‌ಕುಮಾರ್ ಪ್ರಮಾಣವಚನ

ಫಲಿತಾಂಶವನ್ನು ರಾಜ್ಯಪಾಲ ರಾಜೇಂದ್ರ ಅರ್ಲೇಕರ್ ಅವರಿಗೆ ಸಲ್ಲಿಸಿದೆ. ಇದರ ನಂತರ ಹೊಸ ವಿಧಾನಸಭೆಯನ್ನು ರಚಿಸುವ ಅಧಿಸೂಚನೆ ಹೊರಡಿಸಲಾಗುವುದು. ಇದರೊಂದಿಗೆ ಮಾದರಿ ನೀತಿ ಸಂಹಿತೆಯೂ ಅಧಿಕೃತವಾಗಿ ಅಂತ್ಯಗೊಳ್ಳಲಿದೆ.

ಇಂದು ಸಂಪುಟ ಸಭೆ: ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರು ಸೋಮವಾರ ಸಂಪುಟ ಸಭೆ ಕರೆದಿದ್ದು, ಹಾಲಿ 17ನೇ ವಿಧಾನಸಭೆಯನ್ನು ವಿಸರ್ಜಿಸಲು ಅನುಮೋದನೆ ಪಡೆಯಲಿದ್ದಾರೆ. ಬಳಿಕ ಅವರು ರಾಜಭವನಕ್ಕೆ ಭೇಟಿ ನೀಡಿ ತಮ್ಮ ರಾಜೀನಾಮೆಯನ್ನು ಸಲ್ಲಿಸುವ ನಿರೀಕ್ಷೆಯಿದೆ. ಅವರು ಅಧಿಕಾರದಿಂದ ಕೆಳಗಿಳಿದ ನಂತರ ಎನ್‌ಡಿಎ ಪಕ್ಷಗಳು ತಮ್ಮ ಶಾಸಕಾಂಗ ಪಕ್ಷದ ಸಭೆಗಳನ್ನು ನಡೆಸಿ, ಮೈತ್ರಿಕೂಟದ ಮುಂದಿನ ನಾಯಕನನ್ನು ಆಯ್ಕೆ ಮಾಡಲಿವೆ. ನಂತರ ಆಯ್ಕೆಯಾದ ನಾಯಕ ರಾಜ್ಯಪಾಲರ ಮುಂದೆ ಸರ್ಕಾರ ರಚನೆಗೆ ಹಕ್ಕು ಮಂಡಿಸಲಿದ್ದಾರೆ.

ಬಿಹಾರದ 18ನೇ ವಿಧಾನಸಭೆಯಲ್ಲಿ ಎನ್‌ಡಿಎ ಸ್ಪಷ್ಟ ಬಹುಮತ ಗಳಿಸಿದೆ. ಬಿಜೆಪಿ 89 ಸ್ಥಾನಗಳೊಂದಿಗೆ ಅತಿ ದೊಡ್ಡ ಪಕ್ಷವಾಗಿ ಹೊರಹೊಮ್ಮಿದೆ. ನಿತೀಶ್ ಕುಮಾರ್ ಅವರ ಜೆಡಿಯು 85 ಸ್ಥಾನಗಳನ್ನು ಪಡೆದು ಎರಡನೇ ಸ್ಥಾನದಲ್ಲಿದೆ. ಎಲ್‌ಜೆಪಿ 19 ಸ್ಥಾನ, ಹೆಚ್‌ಎಎಂ 5 ಸ್ಥಾನ, ಮತ್ತು ರಾಷ್ಟ್ರೀಯ ಲೋಕ ಮೋರ್ಚಾ 4 ಸ್ಥಾನಗಳನ್ನು ಗೆದ್ದಿವೆ. ಮಹಾಘಟಬಂಧನ್ ಕೇವಲ 35 ಸ್ಥಾನಗಳನ್ನು ಮಾತ್ರ ಪಡೆಯಲು ಶಕ್ತವಾಗಿದೆ.

ವಿರೋಧ ಪಕ್ಷಗಳು ಸಂಪೂರ್ಣ ಕುಸಿತ: 2025ರ ಈ ಫಲಿತಾಂಶವು 2020ರ ಚುನಾವಣೆಗೆ ಸಂಪೂರ್ಣ ವ್ಯತಿರಿಕ್ತವಾಗಿದೆ. ಆಗ ಮಹಾಘಟಬಂಧನ್ ರಾಜ್ಯಾದ್ಯಂತ ಪ್ರಬಲ ಸ್ಪರ್ಧಿಯಾಗಿತ್ತು. ಆದರೆ ಈ ಬಾರಿ ವಿರೋಧ ಪಕ್ಷಗಳು ಸಂಪೂರ್ಣವಾಗಿ ಕುಸಿದಿವೆ. ಆರ್‌ಜೆಡಿ ಪಕ್ಷದ ಸಾಧನೆ ನಿರೀಕ್ಷೆಗಿಂತ ಬಹಳ ಕಡಿಮೆಯಾಗಿದೆ. ಕಾಂಗ್ರೆಸ್ ಪಕ್ಷವು ನಾಟಕೀಯ ಕುಸಿತವನ್ನು ಎದುರಿಸಿದ್ದು, ಕೇವಲ 6 ಸ್ಥಾನಗಳನ್ನು ಗೆದ್ದಿದೆ.

ತುರ್ತು ಚಿಕಿತ್ಸೆ ಕಡ್ಡಾಯ

ಸೌಲಭ್ಯಗಳಲ್ಲಿ ರೇಬಿಸ್-ವಿರೋಧಿ ಚಿಕಿತ್ಸೆಯ ಕಡ್ಡಾಯ ಲಭ್ಯತೆಯನ್ನು ಇದು ಒತ್ತಿಹೇಳಿದೆ. ಕರ್ನಾಟಕದಲ್ಲಿ ರೇಬಿಸ್ ಅನ್ನು 'ಅಧಿಸೂಚಿತ ಕಾಯಿಲೆ' ಎಂದು ಸರ್ಕಾರ ಘೋಷಿಸಿದೆ. ಎಲ್ಲಾ ಆಸ್ಪತ್ರೆಗಳು ರೇಬಿಸ್ ಲಸಿಕೆ ಮತ್ತು ಒಂದು ಬಾರಿಯ ಅಶ್ವ ಮೂಲದ ರೇಬಿಸ್ ಇಮ್ಯುನೊಗ್ಲಾಬ್ಯುಲಿನ್ ಅನ್ನು ಉಚಿತವಾಗಿ ಮತ್ತು ಸಕಾಲದಲ್ಲಿ ನೀಡಬೇಕು. ಈ ನಿರ್ದೇಶನವು 2030ರ ವೇಳೆಗೆ ನಾಯಿ-ಮೂಲದ ರೇಬಿಸ್‌ನಿಂದ ಮಾನವ ಸಾವುಗಳನ್ನು ಶೂನ್ಯಕ್ಕೆ ಇಳಿಸುವ ಭಾರತದ ಗುರಿಯನ್ನು ಬೆಂಬಲಿಸುತ್ತದೆ.

ಹಾವು ಕಡಿತದ ಸಂತ್ರಸ್ತರಿಗೆ ತುರ್ತು ಆರೈಕೆ: ಹಾವು ಕಡಿತದಿಂದಾಗುವ ಸಾವುಗಳು ಮತ್ತು ಗಂಭೀರ ಪರಿಣಾಮಗಳು ಇಂದಿಗೂ ಗಣನೀಯವಾಗಿವೆ ಎಂಬುದನ್ನು ಸರ್ಕಾರವು ಗಮನಿಸಿದೆ. ಹೀಗಾಗಿ ಹತ್ತಿರದ ಲಭ್ಯವಿರುವ ಆಸ್ಪತ್ರೆಯಲ್ಲಿ ಎಲ್ಲಾ ಹಾವು ಕಡಿತದ ಸಂತ್ರಸ್ತರಿಗೆ ಖಚಿತ ತುರ್ತು ಆರೈಕೆ ನೀಡುವಂತೆ ಆದೇಶಿಸಲಾಗಿದೆ.

ನಿಯಮ ಪಾಲಿಸದ ಆಸ್ಪತ್ರೆಗಳ ವಿರುದ್ಧ ಕ್ರಮ: ಆಸ್ಪತ್ರೆಗಳು ವಸೂಲಿ ಮಾಡಲು ಸಾಧ್ಯವಾಗದ ಚಿಕಿತ್ಸಾ ವೆಚ್ಚಗಳನ್ನು ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್ ಯೋಜನೆ ದರಗಳ ಅಡಿಯಲ್ಲಿ ಜಿಲ್ಲಾ ಮಟ್ಟದ ನೋಂದಣಿ ಮತ್ತು ಕುಂದು ಕೊರತೆ ಪ್ರಾಧಿಕಾರಗಳು ಮರುಪಾವತಿ ಮಾಡಲಿವೆ ಎಂದು ಸರ್ಕಾರ ಸ್ಪಷ್ಟಪಡಿಸಿದೆ. ಈ ನಿಯಮಗಳನ್ನು ಪಾಲಿಸಲು ವಿಫಲವಾದರೆ ಮತ್ತು ಕಡಿತಕ್ಕೆ ಒಳಗಾದ ರೋಗಿಯು ಮೃತಪಟ್ಟರೆ, ಅದನ್ನು ವೈದ್ಯಕೀಯ ನಿರ್ಲಕ್ಷ್ಯ ಎಂದು ಪರಿಗಣಿಸಲಾಗುತ್ತದೆ. ಇದು ಭಾರತೀಯ ನ್ಯಾಯ ಸಂಹಿತೆ, 2023ರ ಸೆಕ್ಷನ್ 106ರ ಅಡಿಯಲ್ಲಿ 2 ವರ್ಷಗಳವರೆಗೆ ಜೈಲು ಶಿಕ್ಷೆ ವಿಧಿಸಬಹುದಾದ ಕ್ರಿಮಿನಲ್ ಮೊಕದ್ದಮೆಗೆ ಆಹ್ವಾನ ನೀಡುತ್ತದೆ. ಗಂಭೀರ ಅಥವಾ ಪದೇ ಪದೇ ಕರ್ತವ್ಯ ಲೋಪವಾದರೆ ಆಸ್ಪತ್ರೆಗಳ ಪರವಾನಗಿಯನ್ನು ರದ್ದುಗೊಳಿಸುವ ಎಚ್ಚರಿಕೆಯನ್ನೂ ನೀಡಲಾಗಿದೆ.

ಆರ್‌ಎಸ್‌ಎಸ್ ಪಥಸಂಚಲನ



ಚಿತ್ತಾಪುರ ಪಟ್ಟಣದಲ್ಲಿ ಆರ್‌ಎಸ್‌ಎಸ್ ಗಣವೇಷಧಾರಿಗಳು ಪೊಲೀಸರ ಸರ್ಪಗಾವಲಿನ ನಡುವೆ ಪಥ ಸಂಚಲನ ನಡೆಸಿದರು. ಈ ವೇಳೆ ರಸ್ತೆಗಳ ಇಕ್ಕೆಲಗಳಲ್ಲಿ ನಿಂತಿದ್ದ ಜನತೆ ಹೂಮಳೆಗರೆದು ಗೌರವ ಅರ್ಪಿಸಿದರು.

50 ಘೋಷ್ ವಾದಕರು ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದರು. ಪಟ್ಟಣದ ಬಜಾಜ್ ಕಲ್ಯಾಣ ಮಂಟಪದಿಂದ ಪ್ರಾರಂಭವಾದ ಆರ್‌ಎಸ್‌ಎಸ್ ಪಥ ಸಂಚಲನ ವೀಕ್ಷಿಸಲು ಚಿತ್ತಾಪುರದ ರಸ್ತೆಗಳ ಇಕ್ಕೆಲಗಳಲ್ಲಿ ಜನತೆ ಕಿಕ್ಕಿರಿದು ಸೇರಿದ್ದರು. ಮಹಿಳೆಯರು ಸೇರಿದಂತೆ ಹಲವರು ಗಣವೇಷಧಾರಿಗಳ ಮೇಲೆ ಪುಷ್ಪದಳಗಳನ್ನು ಎರಚಿ ಗೌರವ ಅರ್ಪಿಸಿದರು. ನೆರೆದಿದ್ದ ನೂರಾರು ಮಂದಿ 'ಭಾರತ ಮಾತಾಕೀ ಜೈ', 'ವಂದೇ ಮಾತರಂ' 'ಜೈ ಶ್ರೀರಾಮ', 'ಜೈ ಭವಾನಿ, ಜೈ ಶಿವಾಜಿ' ಎಂದು ಘೋಷಣೆ ಮೊಳಗಿಸಿದರು. ನಿಗದಿತ ಪಟ್ಟಿದ್ದವರನ್ನು ಬಿಟ್ಟು ಗಣವೇಷ ಧರಿಸಿ ಬಂದಿದ್ದ ಇತರರನ್ನು ಪಥಸಂಚಲನದಲ್ಲಿ ಪಾಲ್ಗೊಳ್ಳದಂತೆ ಪೊಲೀಸರು ತಡೆದರು. ಮಾತ್ರವಲ್ಲ ಘೋಷಣೆ ಮೊಳಗಿಸುತ್ತಿದ್ದ ಯುವಕರನ್ನು ಪೊಲೀಸರು ತಡೆದು ಪಥಸಂಚಲನದ ಹಿಂದೆ ಬರುವಂತೆ ನೋಡಿಕೊಂಡರು.

ಶಾಂತಾಪಾಟೀಲ್ ನಿಧನ



ಮೈಸೂರು, ನ.16- ಮೈಸೂರು ಗೋಕುಲಂ ಡಾಕ್ಟರ್ ಕಾಲೋನಿ ನಿವಾಸಿ, ಜೆ.ಕೆ.ಟೈರ್ಸ್ ಕಾರ್ಖಾನೆ ನಿರ್ದೇಶಕರಾಗಿದ್ದ ಜ್ಯೋತಿರ್‌ಲಿಂಗನಗೌಡ ಪಾಟೀಲ್ ಅವರ ಪತ್ನಿ ಶಾಂತಾಪಾಟೀಲ್(68) ಭಾನುವಾರ ನಿಧನರಾದರು.

ಮೃತರು ಪತಿ, ಮಕ್ಕಳು, ಅಪಾರ ಬಂದು -ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸೋಮವಾರ ಮಧ್ಯಾಹ್ನ ನಡೆಯಲಿದೆ ಎಂದು ಕುಟುಂಬ ಮೂಲಗಳು ತಿಳಿಸಿವೆ.

ನಂದಿನಿ ತುಪ್ಪಕ್ಕೆ ಭಾರೀ ಬೇಡಿಕೆ: ಹೆಚ್ಚುವರಿ ಸಾವಿರ ಮೆಟ್ರಿಕ್ ಟನ್ ತುಪ್ಪಕ್ಕೆ ಟಿಟಿಡಿ ಆರ್ಡರ್

ಬೆಂಗಳೂರು, ನ.16- ತಿರುಪತಿಯಲ್ಲಿ ನಕಲಿ ತುಪ್ಪಕ್ಕೆ ಬ್ರೇಕ್ ಹಾಕುವ ನಿಟ್ಟಿನಲ್ಲಿ ಟಿಟಿಡಿ ನಂದಿನಿ ಖರೀದಿಗೆ ಮುಂದಾಗಿತ್ತು. ಇದೀಗ ಮತ್ತೆ ಟಿಟಿಡಿಯಿಂದ ನಂದಿನಿ ತುಪ್ಪಕ್ಕೆ ಭಾರೀ ಬೇಡಿಕೆ ಬಂದಿದೆ.



ನಮ್ಮ ರಾಜ್ಯದ ರೈತರ ಬೆನ್ನೆಲುಬು ನಮ್ಮ ಕೆಎಂಎಫ್‌ನ ನಂದಿನಿ ಬ್ರಾಂಡ್. ರಾಷ್ಟ್ರ ಮಟ್ಟದಲ್ಲಿ ನಂದಿನಿ ಹಾಲು ಫೇಮಸ್ ಆಗಿದೆ. ನಂದಿನಿ ಹಾಲಿನಂತೆ ನಂದಿನಿ ತುಪ್ಪ ಸಹ ಪ್ರಸಿದ್ಧವಾಗಿದೆ. ಆಂಧ್ರದ ತಿರುಪತಿಯಲ್ಲಿ ನಕಲಿ ತುಪ್ಪದ ಹಾವಳಿ ಬೆಳಕಿಗೆ ಬಂದ ನಂತರ 2024ರ ಆಗಸ್ಟ್‌ನಿಂದ ಟಿಟಿಡಿಯವರು ನಂದಿನಿ ತುಪ್ಪವನ್ನು ತಿರುಪತಿ ಲಾಡು ತಯಾರಿಕೆಗೆ ಬಳಸುತ್ತಿದ್ದಾರೆ.

ಇದೀಗ ನಂದಿನಿ ತುಪ್ಪಕ್ಕೆ ಭಾರೀ ಬೇಡಿಕೆ ಬಂದಿದ್ದು, ಹಿಂದಿಗಿಂತ ಹೆಚ್ಚುವರಿಯಾಗಿ ಒಂದು ಸಾವಿರ ಮೆಟ್ರಿಕ್ ಟನ್ ತುಪ್ಪಕ್ಕೆ ಟಿಟಿಡಿ ಬೇಡಿಕೆ ಇಟ್ಟಿದೆ. ಅದರಂತೆ ಕೆಎಂಎಫ್‌ನಿಂದ ಪ್ರತಿನಿತ್ಯ 3 ರಿಂದ 3.5 ಟನ್ ತುಪ್ಪ ಅಂದರೆ ತಿಂಗಳಿಗೆ ಸುಮಾರು 300 ಟನ್‌ನಷ್ಟು ತುಪ್ಪ ತಿರುಮಲಕ್ಕೆ ಸಪ್ಲೈ ಮಾಡುತ್ತಿದೆ.

ಪ್ರತಿನಿತ್ಯ ಟಿಟಿಡಿ ಸಿಬ್ಬಂದಿ, ಕೆಎಂಎಫ್ ನಂದಿನಿ ತುಪ್ಪ ಉತ್ಪಾದನಾ ಘಟಕಗಳಿಗೆ ಸ್ವತಃ ತೆರಳಿ, ವಾಹನವನ್ನು ಲಾಕ್ ಮಾಡಿಕೊಂಡು ತೆಗೆದುಕೊಂಡು ಹೋಗುತ್ತಾರೆ. ತಿರುಪತಿ ತಲುಪಿದ ನಂತರವೇ ಲಾಕ್ ಓಪನ್ ಮಾಡಲಾಗುತ್ತದೆ. ಜಿಪಿಎಸ್ ಸಿಸ್ಟಮ್ ಸಹ ಅಳವಡಿಕೆ ಮಾಡಿದ್ದು, ಬಿಗಿ ಭದ್ರತೆಯಲ್ಲಿ ತುಪ್ಪ ಹೋಗುತ್ತಿದೆ. ಹೀಗಾಗಿ ಟಿಟಿಡಿ ನಂದಿನಿ ತುಪ್ಪವನ್ನೇ ಪದೇ ಪದೇ ಕೇಳುತ್ತಿದೆ. ಒಟ್ಟಿನಲ್ಲಿ ನಂದಿನಿ ತುಪ್ಪ ರಾಷ್ಟ್ರ ಹಾಗೂ ಅಂತಾರಾಷ್ಟ್ರೀಯ ಮಟ್ಟದಲ್ಲಿ ಹೆಸರಾಗುತ್ತಿದ್ದು, ದಿನೇ ದಿನೇ ಬೇಡಿಕೆ ಹೆಚ್ಚುತ್ತಿದೆ.

ಬಿಜೆಪಿ ಸಂಭ್ರಮಾಚರಣೆ...



ಬಿಹಾರ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ನೇತೃತ್ವದ ಎನ್‌ಡಿಎ ಮೈತ್ರಿಕೂಟ ಅಭೂತಪೂರ್ವ ಗೆಲುವು ಸಾಧಿಸಿದ ಹಿನ್ನೆಲೆಯಲ್ಲಿ ಮೈಸೂರಿನ ಕೃಷ್ಣರಾಜ ಕ್ಷೇತ್ರದ ಬಿಜೆಪಿ ಪದಾಧಿಕಾರಿಗಳು ಹಾಗೂ ಮುಖಂಡರು ಚಾಮುಂಡಿಪುರಂ ವೃತ್ತದಲ್ಲಿ ಸಂಭ್ರಮಾಚರಿಸಿದರು.

ಮೈಸೂರು ಮಿತ್ರ 46 ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಸಹಕಾರ ಸಂಘಗಳು ರೈತರ ಆರ್ಥಿಕ ರಕ್ಷಾ ಕವಚ

ತಿ.ನರಸೀಪುರದಲ್ಲಿ 72ನೇ ಅಖಿಲ ಭಾರತ ಸಹಕಾರ ಸಪ್ತಾಹ: ಹಿರಿಯರಿಗೆ ಸನ್ಮಾನ

ತಿ.ನರಸೀಪುರ, ನ.16– ಸಹಕಾರ ಸಂಸ್ಥೆಗಳು ರೈತರ ಆರ್ಥಿಕ ರಕ್ಷಾ ಕವಚದಂತೆ ಕೆಲಸ ನಿರ್ವಹಿಸುತ್ತಿವೆ ಎಂದು ಮೈಮುಲ್ ನಿಕಟಪೂರ್ವ ಅಧ್ಯಕ್ಷ ಆರ್.ಚೆಲುವರಾಜು ಹೇಳಿದರು.

ಪಟ್ಟಣದ ಎಪಿಎಂಸಿ ಆವರಣದಲ್ಲಿರುವ ಮೈಮುಲ್ ಉಪ ಕಚೇರಿಯ ಸಭಾಂಗಣದಲ್ಲಿ ಭಾನುವಾರ ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ, ಜಿಲ್ಲಾ ಸಹಕಾರ ಒಕ್ಕೂಟ, ಸಹಕಾರ ಇಲಾಖೆ, ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಹಕಾರ ಸಂಘಗಳ ಒಕ್ಕೂಟ, ಮೈಸೂರು ಚಾಮರಾಜನಗರ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್, ತಾಲೂಕು ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘ, ಪ್ರಾಥಮಿಕ ಸಹಕಾರ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್ ಹಾಗೂ ತಾಲೂಕಿನ ಎಲ್ಲಾ ಸಹಕಾರ ಸಂಘಗಳ ಸಂಯುಕ್ತ ಆಶ್ರಯದಲ್ಲಿ ಆಯೋಜಿಸಿದ್ದ 72ನೇ ಅಖಿಲ ಭಾರತ ಸಹಕಾರ ಸಪ್ತಾಹ ಕಾರ್ಯಕ್ರಮದಲ್ಲಿ ಹಿರಿಯ ಸಹಕಾರಿಗಳನ್ನು ಸನ್ಮಾನಿಸಿ ಅವರು ಮಾತನಾಡಿದರು.

> ಸಹಕಾರ ಸಂಘಗಳಲ್ಲಿ ಅನಾರೋಗ್ಯಕರ ಸ್ಪರ್ಧೆ ಇರಬಾರದು.ಪ್ರಾಮಾಣಿಕರಿಗೆ ಅಧಿಕಾರ ಸಿಗಬೇಕು. ಆರೋಗ್ಯಕರ ಸ್ಪರ್ಧೆ ಉತ್ತಮ ಬೆಳವಣಿಗೆಯಾಗಿದ್ದು, ಸಂಘದ ಅಭಿವೃದ್ಧಿಗೆ ಗ್ರಾಮದ ಜನತೆಯ ಅನುಕೂಲಕ್ಕೆ ಪ್ರಾಮಾಣಿಕವಾದ ಕೆಲಸವನ್ನು ಎಲ್ಲರೂ ಮಾಡಬೇಕಿದೆ.
> – ಸಹಕಾರಿ ದುರೀಣ ವೈ.ಎನ್.ಶಂಕರೇಗೌಡ

ರೈತರ ಬದುಕಿನಲ್ಲಿ ಸದಾ ಬೆಂಬಲವಾಗಿ ನಿಲ್ಲುವ ಮೂಲಕ ರೈತರ ಆರ್ಥಿಕ ಪರಿಸ್ಥಿತಿ ಸುಧಾರಣೆಯಲ್ಲಿ ಸಹಕಾರ ಬ್ಯಾಂಕ್‌ಗಳು ಮಹತ್ವದ ಪಾತ್ರವನ್ನು ವಹಿಸುತ್ತವೆ, ಸಹಕಾರ ಕ್ಷೇತ್ರದಲ್ಲಿನ ಸಹಾಯದಿಂದ ರಾಜ್ಯದಲ್ಲಿ ಲಕ್ಷಾಂತರ ಕುಟುಂಬಗಳು ಬದುಕು ಕಟ್ಟಿಕೊಂಡಿವೆ. ಆದ್ದರಿಂದ ಸಹಕಾರ ಕ್ಷೇತ್ರಕ್ಕೆ ದಕ್ಷರು ಹಾಗೂ ಪ್ರಾಮಾಣಿಕರು ಬರಬೇಕು, ಸಹಕಾರ ಸಂಘಗಳ ಉಳಿವಿಗೆ ಶ್ರಮಿಸುವಂತಾಗಬೇಕು, ಸಹಕಾರ ಕ್ಷೇತ್ರ ಉಳಿದರೆ ಮಾತ್ರ ರೈತರ ಜೀವನ ಹಸನಾಗುತ್ತದೆ. ನಂದಿನಿ ಉತ್ಪನ್ನಗಳು ಇಂದು ಅಂತರ ರಾಷ್ಟ್ರೀಯ ಮಟ್ಟದಲ್ಲಿ ಹೆಸರುವಾಸಿಯಾಗಿವೆ. ಕೆಲವು ಕಂಪನಿಗಳು ನಂದಿನಿ ಬ್ರ್ಯಾಂಡ್‌ಗೆ ಕಪ್ಪು ಮಸಿ ಬಳಿಯಲು ನಂದಿನಿ ಹೆಸರಿನ ನಕಲಿ ತುಪ್ಪವನ್ನು ಮಾರಾಟ ಮಾಡಲು ಯತ್ನಿಸುತ್ತಿದ್ದು ನಾಗರೀಕ ಬಂಧುಗಳು ಇಂತಹ ಪ್ರಕರಣಗಳು ಕಂಡುಬಂದಲ್ಲಿ ಜಾಲವನ್ನು ಬಗ್ಗು ಬಡಿಯುವ ಕೆಲಸ ಮಾಡಬೇಕಿದೆ ಎಂದರು.

ಮೈಮುಲ್ ಅಧ್ಯಕ್ಷ ಕೆ.ಈರೇಗೌಡ ಮಾತನಾಡಿ, ಸಹಕಾರ ಚಳವಳಿ ಆರ್ಥಿಕ ಸುಧಾರಣೆಯೊಂದಿಗೆ ನಿರಂತರವಾಗಿ ಬೆಳೆಯುತ್ತಿರುವ ಪ್ರಕ್ರಿಯೆಯಾಗಿರುವುದರಿಂದ ಸಹಕಾರಿ ಕ್ಷೇತ್ರಕ್ಕೆ ರಾಜಕೀಯ ಮತ್ತು ಜಾತೀಯತೆಯನ್ನು ತರಬಾರದು. ಕೆನೆಭರಿತ ಹಸುವಿನ ಹಾಲಿಗೆ ನೀರನ್ನು ಬೆರೆಸಿದಂತೆ ಸಹಕಾರಿ ಚುನಾವಣೆ ಪ್ರಕ್ರಿಯೆಗಳಿಗೆ ರಾಜಕಾರಣವನ್ನು ಬೆರೆಸಬಾರದು. ಪ್ರತಿನಿಧಿಗಳು ಮತ್ತು ಸಿಬ್ಬಂದಿಗಳು ಸಹಕಾರಿ ತತ್ವವನ್ನು ಪಾಲಿಸಿ, ಕಾರ್ಯನಿರ್ವಹಿಸುತ್ತಿರುವುದರಿಂದ ಸಹಕಾರಿ ಸಂಸ್ಥೆಗಳು ಬೆಳವಣಿಗೆ ಹೊಂದಿವೆ ಎಂದು ತಿಳಿಸಿದರು.

ಜಿಲ್ಲಾ ಸಹಕಾರ ಯೂನಿಯನ್ ಒಕ್ಕೂಟದ ಉಪಾಧ್ಯಕ್ಷ ಬಿ.ಎನ್.ಸದಾನಂದ ಮಾತನಾಡಿದರು. ಸಹಕಾರ ರತ್ನ ಪ್ರಶಸ್ತಿಗೆ ಭಾಜನರಾದ ಯಾಚೇನಹಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಸಂಸ್ಥಾಪಕ ಅಧ್ಯಕ್ಷ ವೈ.ಎನ್. ಶಂಕರೇಗೌಡ ಸೇರಿದಂತೆ ಉತ್ತಮವಾಗಿ ಕಾರ್ಯನಿರ್ವಹಿಸಿದ ಬೀಡನಹಳ್ಳಿ ಶ್ರೀ ಚಾಮುಂಡೇಶ್ವರಿ ಮೀನುಗಾರರ ಸಹಕಾರ ಸಂಘದ ಅಧ್ಯಕ್ಷ ಬಿ.ಬಸವೇಗೌಡ, ಮೂಗೂರು ಹಾಲು ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷ ಎಂ.ಎಂ.ಬಸವಣ್ಣ, ಕಾರ್ಯದರ್ಶಿ ಎಂ.ನಾಗೇಂದ್ರ, ಮೇದಿನಿ ಹಾಲು ಉತ್ಪಾದಕರ ಮಹಿಳಾ ಸಂಘದ ಅಧ್ಯಕ್ಷೆ ರಾಜೇಶ್ವರಿ, ಕಾರ್ಯದರ್ಶಿ ವಿನೋದ, ಹಿರಿಯ ಸಹಕಾರಿಗಳಾದ ಕೇತುಪುರ ಪ್ರಭಾಕರ್, ಚಾಮನಹಳ್ಳಿ ಶಿವಣ್ಣ ಹಾಗೂ ತಾಲೂಕು ವ್ಯವಸಾಯ ಉತ್ಪನ್ನ ಸಹಕಾರ ಸಂಘದ ಅಧ್ಯಕ್ಷ ಟಿ.ಪಿ. ಸುಬ್ರಹ್ಮಣ್ಯ ಅವರನ್ನು ಸನ್ಮಾನಿಸಲಾಯಿತು.

ಜಿಲ್ಲಾ ಸಹಕಾರ ಒಕ್ಕೂಟದ ನಿರ್ದೇಶಕರಾದ ಹನುಮನಾಳು ಸಿದ್ದೇಗೌಡ, ಮಲ್ಲಣ್ಣ, ಎಂಡಿಸಿಸಿ ಬ್ಯಾಂಕ್ ನಿರ್ದೇಶಕ ಟಿ.ಪಿ.ಬೋರೇಗೌಡ ಪಿಕಾರ್ಡ್ ಬ್ಯಾಂಕ್ ನಿರ್ದೇಶಕ ಎಂ.ಎಸ್. ಶಿವಮೂರ್ತಿ, ಡೇರಿ ಅಧ್ಯಕ್ಷ ಮರೀಗೌಡ, ಸಹಕಾರ ಅಭಿವೃದ್ಧಿ ಅಧಿಕಾರಿ ಹಸೀನ, ಜಿಲ್ಲಾ ಸಹಕಾರ ಒಕ್ಕೂಟದ ಪ್ರಾಂಶುಪಾಲ ಡಾ.ಎಂ.ವಿಶ್ವೇಶ್ವರಯ್ಯ, ವ್ಯವಸ್ಥಾಪಕ ಪಿ.ಎಸ್. ಹರೀಶ್, ಮೈಮೂಲ್ ಮಾರ್ಗ ವಿಸ್ತರಣಾಧಿಕಾರಿ ಆರ್.ಪ್ರಮೋದ್, ಟಿಎಪಿಸಿಎಂಎಸ್ ಕಾರ್ಯದರ್ಶಿ ರಘುನಂದನ್, ತಾಲೂಕಿನ ಸಹಕಾರ ಸಂಘಗಳ ಅಧ್ಯಕ್ಷರು, ಮುಖ್ಯ ಕಾರ್ಯನಿರ್ವಾಹಕರು ಹಾಗೂ ಪ್ರತಿನಿಧಿಗಳು ಇದ್ದರು.



ತಿ.ನರಸೀಪುರ ಪಟ್ಟಣದ ಎಪಿಎಂಸಿ ಆವರಣದ ಮೈಮುಲ್ ಉಪ ಕಚೇರಿ ಸಭಾಂಗಣದಲ್ಲಿ ಭಾನುವಾರ ಆಯೋಜಿಸಿದ್ದ ಅಖಿಲ ಭಾರತ ಸಹಕಾರ ಸಪ್ತಹದಲ್ಲಿ ಉತ್ತಮವಾಗಿ ಕಾರ್ಯನಿರ್ವಹಿಸಿದ ಸಹಕಾರಿ ಸಂಸ್ಥೆಗಳ ಅಧ್ಯಕ್ಷರು, ಕಾರ್ಯನಿರ್ವಾಹಕರು ಹಾಗೂ ಹಿರಿಯ ಸಹಕಾರಿಗಳನ್ನು ಸನ್ಮಾನಿಸಲಾಯಿತು

ಪತ್ನಿಯ ಸ್ಕೆಚ್‌ನಿಂದ ಹಲ್ಲೆಗೊಳಗಾಗಿದ್ದ ಪತಿ ಸಾವು

ದರೋಡೆ ಸ್ಕೆಚ್ ಹಾಕಿ ಪತಿಯ ಹತ್ಯೆಗೆ ಸಂಚು ರೂಪಿಸಿದ್ದ ಪತ್ನಿ



ನಂಜನಗೂಡು, ನ.16– ದರೋಡೆ ಸ್ಕೆಚ್ ರೂಪಿಸಿ ಪತಿ ಕೊಲೆಗೆ ಪತ್ನಿ ಯತ್ನಿಸಿದ ಪ್ರಕರಣದಲ್ಲಿ ಗಂಭೀರ ಹಲ್ಲೆಗೊಳಗಾಗಿ ಆಸ್ಪತ್ರೆಯಲ್ಲಿದ್ದ ಪತಿ ಚಿಕಿತ್ಸೆ ಫಲಕಾರಿಯಾಗದೆ ಭಾನುವಾರ ಸಾವನ್ನಪ್ಪಿದ್ದಾರೆ.

ಡ್ರ್ಯಾಗರ್ ಹಾಗೂ ಲಾಂಗ್‌ನಿಂದ ಹಲ್ಲೆಗೆ ಒಳಗಾಗಿದ್ದ ರಾಜೇಂದ್ರ ಸುಮಾರು 20 ದಿನಗಳ ಕಾಲ ಸಾವು ಬದುಕಿನ ನಡುವೆ ಹೋರಾಟ ನಡೆಸಿ ಸಾವಿಗೆ ಶರಣಾಗಿದ್ದಾರೆ.

ತಾಲೂಕಿನ ಹದಿನಾರು ಗ್ರಾಮದ ರಾಜೇಂದ್ರ ತನ್ನ ಪತ್ನಿ ಸ್ಕೆಚ್‌ಗೆ ಬಲಿಯಾದ ದುರ್ದೈವಿಯಾಗಿದ್ದು ಪತಿಯ ಕೊಲೆಗೆ ದರೋಡೆ ಸ್ಕೆಚ್ ರೂಪಿಸಿದ್ದ ಪತ್ನಿ ಸಂಗೀತಾ ಹಾಗೂ ಇತರ ಮೂವರು ಈಗಾಗಲೇ ಜೈಲು ಪಾಲಾಗಿದ್ದಾರೆ. ಅ.26ರಂದು ನಂಜನಗೂಡಿನ ಹಂಡುವಿನಹಳ್ಳಿ ಬಡಾವಣೆಯಲ್ಲಿ ರಾಜೇಂದ್ರ ತಮ್ಮ ಪತ್ನಿ ಸಂಗೀತಾ ಜೊತೆ ಸ್ಕೂಟರ್‌ನಲ್ಲಿ ತೆರಳುತ್ತಿದ್ದ ವೇಳೆ ಕಾರ್‌ನಲ್ಲಿ ಬಂದ ಮೂವರು ಅಟ್ಯಾಕ್ ಮಾಡಿ ರಾಜೇಂದ್ರ ಮೇಲೆ ಮಾರಕಾಸ್ತ್ರಗಳಿಂದ ಗಂಭೀರ ಹಲ್ಲೆ ನಡೆಸಿ ಪರಾರಿಯಾಗಿದ್ದರು. ದರೋಡೆ ಪ್ರಕರಣ ದಾಖಲಿಸಿಕೊಂಡಿದ್ದ ನಂಜನಗೂಡು ಪಟ್ಟಣ ಠಾಣೆ ಪೊಲೀಸರು ವಿಶೇಷ ತಂಡ ರಚಿಸಿ ದುಷ್ಕರ್ಮಿಗಳ ಸೆರೆಗೆ ಜಾಲ ಬೀಸಿದ್ದರು. ಇನ್ನು ತನಿಖೆ ವೇಳೆ ಸಿಸಿ ಟಿವಿ ಫುಟೇಜ್ ಪರಿಶೀಲಿಸಿದ ಪೊಲೀಸರಿಗೆ ಪತ್ನಿಯೇ ಪತಿಯ ಕೊಲೆಗೆ ಸ್ಕೆಚ್ ಮಾಡಿರುವ ಬಗ್ಗೆ ಸುಳಿವು ಲಭ್ಯವಾಗಿದ್ದರಿಂದ ಆಕೆಯನ್ನು ವಶಕ್ಕೆ ಪಡೆದು ವಿಚಾರಣೆಗೊಳಪಡಿಸಿದಾಗ ಪತಿ ಕೊಲೆಗೆ ದರೋಡೆ ಬಣ್ಣ ಕಟ್ಟಿ ಆಕೆ ತನ್ನ ಸ್ವಂತ ತಮ್ಮನಿಗೇ ಸುಪಾರಿ ನೀಡಿ ಪತಿಯ ಹತ್ಯೆಗೆ ಯತ್ನಿಸಿದ ಸಂಚು ಬಯಲಾಗಿತ್ತು. ಇನ್ನು ಗಂಭೀರ ಹಲ್ಲೆಗೆ ಒಳಗಾಗಿದ್ದ ರಾಜೇಂದ್ರ ಮೈಸೂರಿನ ಖಾಸಗಿ ಆಸ್ಪತ್ರೆಯಲ್ಲಿ ದಾಖಲಾಗಿ ಚಿಕಿತ್ಸೆ ಪಡೆಯುತ್ತಿದ್ದರಾದರೂ ಇದೀಗ ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿದ್ದಾರೆ.

ಕರಿಯಪ್ಪ ಸ್ವಾಮಿಯ ಭಾವಚಿತ್ರ, ಪ್ರತಿಮೆ ನಿರ್ಮಾಣ ನಮ್ಮ ಆದ್ಯ ಕರ್ತವ್ಯ

ಬನ್ನೂರು, ನ.16– ಕರಿಯಪ್ಪ ಸ್ವಾಮಿಯವರಿಗೆ ಬಹಳಷ್ಟು ಇತಿಹಾಸವಿದೆ. ದೇಶದೆಲ್ಲೆಡೆ ನಾನಾ ಭಾಗಗಳಲ್ಲಿ ಅವರ ಅನುಯಾಯಿಗಳು ಇದ್ದು, ಪವಾಡ ಮೆರೆದ ಗುರುಗಳೆಂದು ಬಹಳಷ್ಟು ಪ್ರಖ್ಯಾತಿಗಳಿಸಿದ್ದಾರೆ. ಇವರು ವಿಶ್ವಕರ್ಮ ಜನಾಂಗಕ್ಕೆ ಸೇರಿದವರೆನ್ನುವುದು ವಿಶ್ವಕರ್ಮ ಸಮಾಜಕ್ಕೆ ದೊಡ್ಡ ಹೆಮ್ಮೆ. ಇಂತಹವರ ಭಾವಚಿತ್ರ ಹಾಗೂ ಪ್ರತಿಮೆ ನಿರ್ಮಾಣ ತಮ್ಮ ಮೊದಲ ಆದ್ಯ ಕರ್ತವ್ಯ ಆಗಿದೆ ಎಂದು ವಿಧಾನಪರಿಷತ್ ಮಾಜಿ ಸದಸ್ಯ ಕೆ.ಪಿ. ನಂಜುಂಡಿ ತಿಳಿಸಿದರು.

ಪಟ್ಟಣದ ಕರಿಯಪ್ಪ ದೇವಾಲಯಕ್ಕೆ ಭಾನುವಾರ ಭೇಟಿ ನೀಡಿ ಸಾರ್ವಜನಿಕರೊಂದಿಗೆ ಮಾತನಾಡಿದರು. ಪಟ್ಟಣದ ಕರಿಯಪ್ಪ ದೇವಾಲಯದಲ್ಲಿ ಪ್ರತಿ ವರ್ಷ ಭೀಮನ ಅಮಾವಾಸ್ಯೆಯಂದು ಅದ್ದೂರಿಯಾಗಿ ಜಾತ್ರಾ ಮಹೋತ್ಸವ ನಡೆಯಲಿದ್ದು, ಕರಿಯಪ್ಪ ಸ್ವಾಮಿಯ ದರ್ಶನಕ್ಕೆಂದು ರಾಜ್ಯದ ನಾನಾ ಭಾಗಗಳಿಂದ ಬರುತ್ತಾರೆ. ಆದರೆ ದೇವಾಲಯದಲ್ಲಿ ಕರಿಯಪ್ಪ ಸ್ವಾಮಿಯ ಭಾವಚಿತ್ರವಾಗಲಿ, ಪ್ರತಿಮೆಯಾಗಲಿ ಇಲ್ಲದೇ ಇರುವುದು ಕಂಡು ಎಲ್ಲರ ಒಪ್ಪಿಗೆಯನ್ನು ಪಡೆದುಕೊಂಡು ಭಾವಚಿತ್ರ ನಿರ್ಮಾಣಕ್ಕೆ ಮುಂದಾಗಿರುವುದಾಗಿ ತಿಳಿಸಿದರು.

ತಾವು ಈ ಹಿಂದೆ ವಿಶ್ವಕರ್ಮ ಸಂಘಟನೆಗೆಂದು ಬನ್ನೂರಿಗೆ ಬಂದ ಸಂದರ್ಭದಲ್ಲಿ ಕರಿಯಪ್ಪ ಸ್ವಾಮಿಯ ಭಾವಚಿತ್ರ ಇಲ್ಲದಿರುವುದನ್ನು ಕಂಡು ಅಂದೇ ಭಾವಚಿತ್ರ ನಿರ್ಮಾಣದ ಆಶ್ವಾಸನೆಯನ್ನು ನೀಡಿ, ಅದಕ್ಕೆ ಸಂಬಂಧಿಸಿದಂತೆ ಯಾರಾದರು ಅವರ ಬಗ್ಗೆ ಮಾಹಿತಿ ಇಲ್ಲವೇ ಭಾವಚಿತ್ರ ಇಟ್ಟುಕೊಂಡಿದ್ದಲ್ಲಿ ತಮ್ಮನ್ನು ಸಂಪರ್ಕಿಸುವಂತೆ ಕೋರಿಕೊಂಡ ಪರಿಣಾಮ ಹಲವಾರು ಭಾವಚಿತ್ರಗಳನ್ನು ಕಳುಹಿಸಿಕೊಟ್ಟಿದ್ದರು, ಇದಕ್ಕೆ ಸಂಬಂಧಿಸಿದಂತೆ ಊರಿನ ಮುಖಂಡರ ಜೊತೆಯಲ್ಲಿ ಚರ್ಚಿಸಿ ನಂತರ ಭಾವಚಿತ್ರ, ಪ್ರತಿಮೆರೂಪಿಸುವ ಉದ್ದೇಶದಿಂದ ಬನ್ನೂರಿಗೆ ಭೇಟಿ ನೀಡಿದ್ದಾಗಿ ಅವರು ತಿಳಿಸಿದರು.

ನಂತರ ಕರಿಯಪ್ಪ ದೇವಾಲಯದ ಆಡಳಿತ ಮಂಡಳಿಯ ಸಮಿತಿಯ ಸದಸ್ಯರು ಇದೇ ತಿಂಗಳ 20 ರಂದು ನಡೆಯುವ ಅಮಾವಾಸ್ಯೆಯಂದು ಸಭೆ ಸೇರಲಿದ್ದು, ಸಭೆಯಲ್ಲಿ ಕರಿಯಪ್ಪನವರ ಭಾವಚಿತ್ರವನ್ನು ಅಂತಿಮಗೊಳಿಸಿ ಕೆ.ಪಿ. ನಂಜುಂಡಿಯವರಿಗೆ ನೀಡುವುದಾಗಿ ಭರವಸೆಯನ್ನು ನೀಡಿದರು.

ಕಾರ್ಯಕ್ರಮದಲ್ಲಿ ಕಾಂಗ್ರೆಸ್ ಮುಖಂಡ ನಾಗರಾಜಾಚಾರ್, ಬೋರೇಗೌಡ, ದೇವಾಲಯದ ಗೌರವಾಧ್ಯಕ್ಷ ಬೋರೇಗೌಡ, ರಾಮಲಿಂಗೇಗೌಡ, ರಿಷಿ, ಸಿಟಿ ಆಚಾರ್, ಚೆಲುವರಾಜು, ಮಹದೇವು, ಲೋಕೇಶಾಚಾರ್, ಅರ್ಕೇಶಾಚಾರ್, ಎಚ್.ಎನ್. ಸಿದ್ದರಾಜು, ಸಿದ್ದರಾಜು, ಮಾದೇವು, ನರಸಿಂಹಮೂರ್ತಿ, ಯೋಗೇಶ, ಮಾಕನಹಳ್ಳಿ ನಾಗೇಂದ್ರ, ದೇವಲಿಂಗ, ಅತ್ತಹಳ್ಳಿ ಭೈರವ, ಶಿವಲಿಂಗು, ಪುಟ್ಟಸ್ವಾಮಿ, ಬಸವರಾಜು, ಸೀಹಳ್ಳಿ ಗೋವಿಂದ, ಹೇಮಂತ್, ಜಯರಾವ್, ದಿಲೀಪ್‌ಕುಮಾರ್, ಬಿ.ಎಂ. ಸೋಮಶೇಖರ್, ರಂಗಸಮುದ್ರ ಲಕ್ಷ್ಮಣ್, ಶಿವಮೂರ್ತಿ, ಶಿವಣ್ಣ, ಕೆಂಪಾಚಾರಿ, ಸಿದ್ದಪ್ಪಾಜಿ, ಬಸವನಹಳ್ಳಿ ದೇವರಾಜು, ಚಿನ್ನು, ರಾಘು, ಮಂಜು ಸೇರಿದಂತೆ ಪ್ರಮುಖರು ಇದ್ದರು.



ಬನ್ನೂರಿನ ಕರಿಯಪ್ಪ ದೇವಾಲಯದಲ್ಲಿ ಮಾಜಿ ವಿಧಾನಪರಿಷತ್ ಸದಸ್ಯ ಕೆ.ಪಿ. ನಂಜುಂಡಿ ಮಾತನಾಡಿದರು. ವಿಶ್ವಕರ್ಮ ಜನಾಂಗದ ಮುಖಂಡರಾದ ರಿಷಿ ವಿಶ್ವಕರ್ಮ, ನಾಗರಾಜಾಚಾರ್, ಶಿವಮೂರ್ತಿ, ಬೋರೇಗೌಡ ಸೇರಿದಂತೆ ಪ್ರಮುಖರು ಇದ್ದರು.

ಕರ್ನಾಟಕ ಸಂಪದ್ಭರಿತ ನಾಡು, ಇಲ್ಲಿ ನಾವು ಹುಟ್ಟಿರುವುದೇ ಪುಣ್ಯ



ಮರಡಿಯೂರು ಫಾದರ್ ಎ.ಜೋಸೆಫ್ ಮರಿಯ ಅವರನ್ನು ಸನ್ಮಾನಿಸಲಾಯಿತು.

ತಿ.ನರಸೀಪುರ, ನ.16– ಕರ್ನಾಟಕ ರಾಜ್ಯ ಇತರೆ ರಾಜ್ಯಗಳಂತಿರದೇ ಸಂಪದ್ಭರಿತವಾದ ನಾಡಾಗಿದ್ದು ಇಲ್ಲಿ ಹುಟ್ಟಿರುವುದೇ ನಮ್ಮೆಲ್ಲರ ಅದೃಷ್ಟ ಎಂದು ಮರಡಿಯೂರು ಬೆಳ್ಳಿಗುರು ಫಾದರ್ ಎ.ಜೋಸೆಫ್ ಮರಿ ಹೇಳಿದರು.

ಪಟ್ಟಣದ ಕ್ರೈಸ್ಟ್ ಪ್ರಾಥಮಿಕ ಶಾಲೆ ಮತ್ತು ಸಂತ ಜೋಸೆಫ್ ಪ್ರೌಢಶಾಲೆ ಸಂಯುಕ್ತಾಶ್ರಯದಲ್ಲಿ ಶಾಲಾವರಣದಲ್ಲಿ ಹಮ್ಮಿಕೊಳ್ಳಲಾಗಿದ್ದ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಕನ್ನಡ ನಾಡೆಂದರೆ ಅದು ಕಲೆಗಳ ಬೀಡಾಗಿದೆ. ಅಲ್ಲದೇ ಇತರೆ ರಾಜ್ಯಗಳಂತಿರದೇ ಸಂಪದ್ಭರಿತ ನಾಡಾಗಿದ್ದು, ಚಿನ್ನದ ಗಣಿ ಇರುವ ಕೋಲಾರ, ಚಿಕ್ಕಮಗಳೂರು, ಕುದುರೆ ಮುಖ ಹಾಗೂ ಬಳ್ಳಾರಿಯಲ್ಲಿ ಕಬ್ಬಿಣದ ಅದಿರು, ದಕ್ಷಿಣದಲ್ಲಿ ಕಾವೇರಿ–ಕಪಿಲಾ ಜೀವನದಿಗಳು ಹರಿಯುತ್ತಿದ್ದು ಇವುಗಳಿಂದ ನಾವು ನಮ್ಮ ಬದುಕನ್ನು ಕಟ್ಟಿಕೊಂಡಿದ್ದೇವೆ ಎಂದರು.

ಕನ್ನಡ ರಾಜ್ಯೋತ್ಸವ ಒಂದು ಸಂಭ್ರಮದ ಹಬ್ಬ. ಕರ್ನಾಟಕ ಒಂದು ಸುಂದರ ಬಿಡು ನಮ್ಮ ಕರ್ನಾಟಕ ಕಲೆ, ಸಾಹಿತ್ಯ, ನಾಟಕ, ನೃತ್ಯ ಮುಂತಾದ ಕಲೆಗಳಿಂದ ಶ್ರೀಮಂತವಾಗಿದೆ. ನಮ್ಮ ನಾಡು ನುಡಿ ಮತ್ತು ಕಲೆ ಸಂಸ್ಕೃತಿಯನ್ನು ಉಳಿಸಿ ಮುಂದಿನ ಪೀಳಿಗೆಗೆ ಉಳಿಸುವ ಜವಾಬ್ದಾರಿಯೂ ನಮ್ಮೆಲ್ಲರದು ಎಂದು ತಿಳಿಸಿದರು.

ಪುರಸಭೆ ಸದಸ್ಯ ಮೆಡಿಕಲ್ ನಾಗರಾಜು ಮಾತನಾಡಿ ಕನ್ನಡ ನಾಡಲ್ಲಿ ಹುಟ್ಟಿರುವುದು ನಮ್ಮೆಲ್ಲರ ಅದೃಷ್ಟ. ನವೆಂಬರ್ ತಿಂಗಳು ಪೂರ್ಣ ನಾವೆಲ್ಲರೂ ಅತ್ಯಂತ ಸಡಗರ, ಸಂಭ್ರಮದಿಂದ ಎಲ್ಲ ಜಾತಿ ಮತ ಧರ್ಮಗಳ ಜನರು ಸೇರಿ ಒಗ್ಗೂಡಿ ಕನ್ನಡ ರಾಜ್ಯೋತ್ಸವವನ್ನು ಆಚರಿಸುತ್ತೇವೆ. ನಾಡಿನ ಏಕತೆ, ಸಮಾನತೆ, ಸ್ವಾಭಿಮಾನ ಹಾಗೂ ಸಹಬಾಳ್ವೆಯ ಸಂಕೇತವೇ ರಾಜ್ಯೋತ್ಸವ ಎಂದು ಹೇಳಿದರು. ಕನ್ನಡ ಈ ವೇಳೆ ಹನೂರು ಪುದು ನಗರ ಸರ್ಕಾರಿ ಪ್ರಾಥಮಿಕ ಶಾಲೆಯ ರವಿರಾಜು,ಬಾಲ ಯೇಸು ದೇವಾಲಯದ ನಿರ್ಮಲಾ ಥಾಮಸ್,ಡೊನಾಲ್ಡ್ ಲ್ಯಾರಿ ಹಾಗು ಶಾಲಾ ವ್ಯವಸ್ಥಾಪಕ ಇ.ಆಂತೋನಿರಾಜ್ ಹಾಜರಿದ್ದರು.

ಸರಗೂರಲ್ಲಿ ಬೀದಿ ಬದಿ ವ್ಯಾಪಾರಿಗಳ ಸಂಘದಿಂದ ಕನ್ನಡ ರಾಜ್ಯೋತ್ಸವ ಆಚರಣೆ

ಸರಗೂರು, ನ.16– ಕನ್ನಡದ ಹಿರಿಮೆ–ಗರಿಮೆ ಸಾರುವ ಕೆಲಸ ಪ್ರತಿಯೊಬ್ಬ ಕನ್ನಡಿಗರ ಗುರಿಯಾಗಬೇಕು ಎಂದು ಶಾಸಕ ಅನಿಲ್ ಚಿಕ್ಕಮಾದು ಕರೆ ನೀಡಿದರು.

ಇಲ್ಲಿನ ಪಟ್ಟಣ ಪಂಚಾಯಿತಿ ಮುಂಭಾಗ ಶ್ರೀ ವಿನಾಯಕ ಬೀದಿ ಬದಿ ವ್ಯಾಪಾರಿಗಳ ಸಂಘದ ವತಿಯಿಂದ ನಡೆಸಲಾದ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಭುವನೇಶ್ವರಿ ಭಾವಾಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಅವರು ಮಾತನಾಡಿದರು.

ಕನ್ನಡಪರ ಕಾರ್ಯಕ್ರಮಗಳನ್ನು ನಿರಂತರ ಹಮ್ಮಿಕೊಂಡು ಕನ್ನಡ ರಾಜ್ಯೋತ್ಸವ ನಿತ್ಯೋತ್ಸವವಾಗಬೇಕು. ನಾಡು, ನುಡಿ, ಪರಂಪರೆ ಬಿಂಬಿಸುವ ಕಾರ್ಯವಾಗಬೇಕು, ತಾಲೂಕಿನ ಸಮಗ್ರ ಅಭಿವೃದ್ಧಿಗೆ ಶ್ರಮಿಸುವುದೇ ನಮ್ಮ ಗುರಿಯಾಗಿದೆ, ತಾಲೂಕು ಕೇಂದ್ರವಾಗಿ ವನಜಲ ಸಿರಿ ನಾಡಾದ ಸರಗೂರಿಗೆ ಅತ್ಯಂತ ಪ್ರಮುಖವೆನಿಸಿದ ಇಲ್ಲಿ ಶಾಸಕನಾಗಿರುವುದೆ ನನ್ನ ಪುಣ್ಯ. ಸೌಲಭ್ಯಗಳನ್ನು ಕಲ್ಪಿಸುವುದು ಮೊದಲ ಕಾರ್ಯವೆನಿಸಿದೆ ಎಂದರು.

ಮಿನಿ ವಿಧಾನಸೌಧ ಕಟ್ಟಡ ಕಾಮಗಾರಿ ಪ್ರಾರಂಭವಾಗಿದೆ. ನೂರು ಹಾಸಿಗೆಯ ಸುಸಜ್ಜಿತ ಆಸ್ಪತ್ರೆ, ನ್ಯಾಯಾಲಯ, ಅಗ್ನಿಶಾಮಕ ದಳ, ಸುಸಜ್ಜಿತ ಕ್ರೀಡಾಂಗಣ ಮುಂತಾದ ಸೌಲಭ್ಯಗಳನ್ನು ದೊರಕಿಸಲಾಗುವುದು. ಇವುಗಳನ್ನು ಕಾರ್ಯಗತಗೊಳಿಸುವುದು ಅತೀ ಮುಖ್ಯ. ಹಾಗೆ ತಮ್ಮ ತಂದೆ ಜನಪರ ಕಾರ್ಯಗಳನ್ನು ಕೈಗೊಂಡು ಬಹಳಷ್ಟು ಶ್ರಮಿಸಿದ್ದಾರೆ, ಬೀದಿ ಬದಿ ವ್ಯಾಪಾರಿಗಳಿಗೆ ನಿವೇಶನ, ಮನೆ ದೊರಕಿಸಿಕೊಡುವುದರೊಂದಿಗೆ ಅವರ ಏಳ್ಗೆಗಾಗಿ ಶ್ರಮಿಸುತ್ತೇನೆ ಎಂದರು,

ಜೆ.ಡಿ.ಎಸ್. ಮುಖಂಡರಾದ ಜಯಪ್ರಕಾಶ್ ಚಿಕ್ಕಣ್ಣ, ಶ್ರೀನಿವಾಸ್, ಮುಖಂಡರಾದ ನುಜುಂಡ ಸ್ವಾಮಿ, ಉದ್ಯಮಿ ನಿಂಗರಾಜು, ಮಾತನಾಡಿದರು, ಕಾರ್ಯಕ್ರಮದಲ್ಲಿ ಪಟ್ಟಣ ಪಂಚಾಯಿತಿ ಪ್ರಭಾರ ಅಧ್ಯಕ್ಷ ಶಿವಕುಮಾರ್, ಸದಸ್ಯರಾದ ಶ್ರೀನಿವಾಸ್, ಚಲುವಕೃಷ್ಣ, ಚಂದ್ರಕಲಾ ರಾಜಣ್ಣ, ಸ್ವಾಮಿ, ಕಸಾಪ ಅಧ್ಯಕ್ಷ ಕೆಂಡಗಣ್ಣ ಸ್ವಾಮಿ, ಹೆಚ್.ಡಿ. ಕೋಟೆ ವಿಧಾನ ಸಭಾ ಕ್ಷೇತ್ರ ಯೂತ್ ಕಾಂಗ್ರೆಸ್ ಅಧ್ಯಕ್ಷ ಕಂದೇಗಾಲ ಶಿವರಾಜು, ವಾಹನ ಚಾಲಕರ ಸಂಘದ ಅಧ್ಯಕ್ಷ ಬೀರ್ವಾಳ್ ಚಿಕ್ಕಣ್ಣ, ಅಂಬೇಡ್ಕರ್ ಭವನ ಟ್ರಸ್ಟ್ ಅಧ್ಯಕ್ಷ ಚನ್ನಿಪುರ ನಾಗರಾಜು, ಕಳಸೂರು ಬಸವರಾಜು, ಸೂಪರ್ ಮಾರ್ಕೆಟ್ ಮಾಲಿಕ ವರುಣ್, ಮಹೇಶ್ ಆರ್ಯ, ಶೇಷ, ಸಂಘದ ಸರ್ವಸದಸ್ಯರು ಭಾಗ ವಹಿಸಿದ್ದರು.



ಕನ್ನಡ ರಾಜ್ಯೋತ್ಸವ ಕಾರ್ಯಕ್ರಮ ಉದ್ಘಾಟಿಸಿದ ಶಾಸಕ ಅನಿಲ್ ಚಿಕ್ಕಮಾದು.

ಡಿ.23, ಇಲವಾಲದಲ್ಲಿ ರೈತ ನಾಯಕ ಕೆ.ಎಸ್.ಪುಟ್ಟಣ್ಣಯ್ಯ ಜಯಂತಿ ಆಚರಣೆ

ಪ್ರತಿಮೆ ಅನಾವರಣ, 300ಕ್ಕೂ ಹೆಚ್ಚು ಬೈಕ್ ರ‍್ಯಾಲಿ, ಸಾವಿರಾರು ರೈತರು ಬಾಗಿ



ಹುಣಸೂರಿನ ಎಪಿಎಂಸಿ ಸಭಾಂಗಣದಲ್ಲಿ ನಡೆದ ರೈತ ಸಂಘದ ಸಭೆ.

ಹುಣಸೂರು, ನ.16–ರೈತ ನಾಯಕ ಕೆ.ಎಸ್.ಪುಟ್ಟಣ್ಣಯ್ಯನವರ ಜಯಂತಿಯನ್ನು ಇಲವಾಲದಲ್ಲಿ ಡಿ.23ರಂದು ಆಚರಿಸಲಾಗುವುದು ಎಂದು ರೈತ ಸಂಘದ ಜಿಲ್ಲಾಧ್ಯಕ್ಷ ಹೊಸೂರ್ ಕುಮಾರ್ ತಿಳಿಸಿದ್ದಾರೆ. ಇಲ್ಲಿನ ಎಪಿಎಂಸಿ ಸಭಾಂಗಣದಲ್ಲಿ ನಡೆದ ಹುಣಸೂರು ತಾಲೂಕಿನ ರೈತ ಸಂಘದ ಸಭೆಯಲ್ಲಿ ಅವರು ಈ ವಿಷಯ ತಿಳಿಸಿದರು.

ಸಿದ್ಧತೆ ಬಗ್ಗೆ ಮಾತನಾಡಿದ ಹೊಸೂರ್ ಕುಮಾರ್ ಡಿ.23ರಂದು ವಿಶ್ವ ರೈತ ದಿನಾಚರಣೆ ಅಂದೇ, ಹುಟ್ಟಿದ ನಮ್ಮ ರೈತ ನಾಯಕ ಕೆ.ಎಸ್.ಪುಟ್ಟಣ್ಣಯ್ಯನವರ ಜಯಂತಿಯನ್ನು ಈಗಾಗಲೇ ಜಿಲ್ಲಾ ಸಮಿತಿ ಮತ್ತು ರಾಜ್ಯ ಸಮಿತಿ ಮೈಸೂರಿನ ಇಲವಾಲ ಗ್ರಾಮದಲ್ಲಿ ಆಚರಿಸಲು ತೀರ್ಮಾನಿಸಿರುವುದರಿಂದ ರೈತರು ರೈತ ಮುಖಂಡರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕು ಎಂದು ಮನವಿ ಮಾಡಿದರು.

ಈ ಕಾರ್ಯಕ್ರಮದಲ್ಲಿ ಕೆ.ಎಸ್.ಪುಟ್ಟಣ್ಣಯ್ಯನವರ ಪ್ರತಿಮೆಯನ್ನು ಇಲವಾಲ ಗ್ರಾಮದಲ್ಲಿ ಅನಾವರಣ ಮಾಡಲಾಗುವುದು. ಈ ಕಾರ್ಯಕ್ರಮದಲ್ಲಿ ರಾಜ್ಯ ಸಮಿತಿ ಸಹ ಭಾಗವಹಿಸಲಿದೆ. ಜಿಲ್ಲೆಯ ಮತ್ತು ರಾಜ್ಯದ ರೈತರ ಸಮಸ್ಯೆಗಳು ಸಾಕಷ್ಟಿದ್ದು ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರ ವಿವಿಧ ಕಾರ್ಯಕ್ರಮಗಳನ್ನು ಅನುಷ್ಠಾನಕ್ಕೆ ತಂದಿರುವುದರಿಂದ ರೈತರ ಸಮಸ್ಯೆಗಳನ್ನು ಪರಿಹರಿಸಲು ಸರ್ಕಾರದ ಗಮನ ಸೆಳೆಯುವ ಕಾರ್ಯಕ್ರಮವಾಗಿರುತ್ತದೆ ಎಂದರು. ಅಲ್ಲದೆ ಮನವಿ ಪತ್ರವನ್ನು ಕೂಡ ಜಿಲ್ಲಾಧಿಕಾರಿಗಳ ಮೂಲಕ ರಾಜ್ಯ ಮತ್ತು ಕೇಂದ್ರ ಸರ್ಕಾರಕ್ಕೆ ಸಲ್ಲಿಸಲಾಗುವುದು. ಸಭೆಯಲ್ಲಿ ಚರ್ಚಿಸಿದಂತೆ 300ಕ್ಕೂ ಮೋಟಾರ್ ಬೈಕುಗಳಲ್ಲಿ ರೈತರು ರ‍್ಯಾಲಿ ನಡೆಸಲಿದ್ದಾರೆ. ಸಭೆಯ ಅಧ್ಯಕ್ಷತೆ ವಹಿಸಿದ್ದ ಬೆಂಕಿಪುರ ಚಿಕ್ಕಣ್ಣನವರು ಮಾತನಾಡಿ, ಕೆ.ಎಸ್.ಪುಟ್ಟಯ್ಯಣ್ಣಯ್ಯ ಅವರು ನಿರಂತರ ರೈತಪರವಾಗಿ ಹೋರಾಟ ಮಾಡಿದ ರೈತ ನಾಯಕರಾಗಿದ್ದು ಇವರ ಜಯಂತಿಯನ್ನು ಹಬ್ಬದ ರೀತಿಯಲ್ಲಿ ಆಚರಣೆ ಮಾಡಲು ನಾವುಗಳು ನಮ್ಮ ತಾಲೂಕಿನ ಸಂಘದ ಎಲ್ಲರ ಸಹಕಾರದೊಂದಿಗೆ 600 ರಿಂದ 700 ಜನ ರೈತರು ಪಾಲ್ಗೊಳ್ಳುತ್ತೇವೆ ಎಂದು ವಿಶ್ವಾಸ ನಮಗಿದೆ ಎಂದು ತಿಳಿಸಿದರು.

ತಾಲೂಕಿನ ರೈತ ಸಂಘದ ಉಪಾಧ್ಯಕ್ಷ ವಿಷಕಂಠಪ್ಪ, ಜಿಲ್ಲಾ ಗೌರವಾಧ್ಯಕ್ಷ ರಾಮಕೃಷ್ಣೇಗೌಡ, ಉಪಾಧ್ಯಕ್ಷರುಗಳಾದ ತಿಪ್ಪೂರು ಸೋಮಶೇಖರ್, ವಿಷಕಂಠಪ್ಪ, ಸಂಚಾಲಕರಾದ ಬಸವರಾಜೇಗೌಡ ರಾಮಪಟ್ಟಣದ ರಾಜೇಗೌಡ ಧರ್ಮಪುರ ಗ್ರಾಮ ಘಟಕದ ಅಧ್ಯಕ್ಷ ವೆಂಕಟಚಲನಾಯಕ, ಕಲ್ಲಹಳ್ಳಿ ಘಟಕದ ಅಧ್ಯಕ್ಷ ಸತೀಶ್ ಗಾಗೇನಹಳ್ಳಿ ಘಟಕದ ಅಧ್ಯಕ್ಷ ಮಹಾದೇವ ಬಾಲರಾಮು, ಯುವ ಕಾರ್ಯದರ್ಶಿ ರವಿ ನಾರಾಯಣ್ ಹಾಗೂ ಕೆ.ಎಂ.ವಾಡಿ ಕೊಪ್ಪಲು ರೈತ ಐಟಿಸಿ ಸ್ವಾಮಿಗೌಡ ಇತರೆ ರೈತರು ಪಾಲ್ಗೊಂಡಿದ್ದರು.

ಕಣೆನೂರು ಹಾಲು ಉತ್ಪಾದಕರ ಸಹಕಾರ ಸಂಘ ಬಿಜೆಪಿ ತೆಕ್ಕೆಗೆ



ಕಣೆನೂರು ಡೇರಿ ಅಧ್ಯಕ್ಷ, ಉಪಾಧ್ಯಕ್ಷರನ್ನು ಅಭಿನಂದಿಸಲಾಯಿತು.

ನಂಜನಗೂಡು,ನ.16–ಕಣೆನೂರು ಹಾಲು ಉತ್ಪಾದಕರ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ಮಹದೇವಸ್ವಾಮಿ, ಉಪಾಧ್ಯಕ್ಷರಾಗಿ ನಾಗರಾಜು ಆಯ್ಕೆಯಾದರು.

12 ಸದಸ್ಯರ ಬಲವನ್ನು ಹೊಂದಿರುವ ಸಂಘದಲ್ಲಿ ಶನಿವಾರ ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಆಯ್ಕೆಗಾಗಿ ಚುನಾವಣೆಯನ್ನು ನಡೆಸಲಾಯಿತು. ಅಧ್ಯಕ್ಷ ಸ್ಥಾನಕ್ಕೆ ಬಿಜೆಪಿ ಬೆಂಬಲಿತ ಅಭ್ಯರ್ಥಿ ಮಹದೇವಸ್ವಾಮಿ, ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿ ರವಿಶಂಕರ್ ನಾಮಪತ್ರ ಸಲ್ಲಿಸಿದ್ದರು. ಮಹದೇವಸ್ವಾಮಿ 7 ಮತಗಳನ್ನು ಪಡೆದು ಅಧ್ಯಕ್ಷರಾಗಿ ಆಯ್ಕೆಯಾದರು. ರವಿಶಂಕರ್ 6 ಮತಗಳನ್ನು ಪಡೆದು ಸೋತರು. ಉಪಾಧ್ಯಕ್ಷ ಸ್ಥಾನಕ್ಕೆ ನಾಗರಾಜು ಮತ್ತು ಮಾದೇಗೌಡ ನಾಮಪತ್ರ ಸಲ್ಲಿಸಿದ್ದರು, ಇಬ್ಬರಿಗೂ ತಲಾ ಆರು ಮತಗಳು ಬಂದ ಕಾರಣ ಲಾಟರಿ ಮೂಲಕ ನಾಗರಾಜು ವಿಜಯ ಶಾಲಿಯಾದರು. ಚುನಾವಣಾ ಅಧಿಕಾರಿ ಭಾಗೀರಥಿ ಅಧ್ಯಕ್ಷ ಉಪಾಧ್ಯಕ್ಷ ಆಯ್ಕೆಯನ್ನು ಘೋಷಿಸಿದರು.

ನೂತನ ಅಧ್ಯಕ್ಷ ಮಹದೇವಸ್ವಾಮಿ ಮಾತನಾಡಿ ನನ್ನ ಆಯ್ಕೆಗೆ ಬಿಜೆಪಿ ಮಂಡಲ ಉಪಾಧ್ಯಕ್ಷ, ಹಾಗೂ ಸಂಘಟನಾ ಚತುರ ಎನಿಸಿರುವ ಕಣೆನೂರು ಪರಶಿವಮೂರ್ತಿ ಕಾರಣೀಭೂತರಾಗಿದ್ದಾರೆ, ಅವರ ಸಹಕಾರದಿಂದ ಮತ್ತು ಸಂಘದ ನಿರ್ದೇಶಕರ ಸಹಕಾರ ಪಡೆದು ಸಂಘವನ್ನು ಉನ್ನತಿಕರಿಸಲು ಶ್ರಮಿಸುತ್ತೇನೆ ಎಂದರು.

ಇದೇ ಸಂದರ್ಭದಲ್ಲಿ ಬಿಜೆಪಿ ಉಪಾಧ್ಯಕ್ಷ ಕಣೆನೂರು ಪರಶಿವಮೂರ್ತಿ, ಜಗದೀಶ್, ನಿರ್ದೇಶಕರಾದ ಯತೀಶ್, ಶಿವಶಂಕರ್, ಮಹದೇವಸ್ವಾಮಿ, ಗುರುಮೂರ್ತಿ, ಗುರುಪ್ರಸಾದ್, ಕೆಬಿ.ಮಹದೇವಸ್ವಾಮಿ, ಬಸವಣ್ಣ, ಮಂಜುನಾಥ ಕುಮಾರಸ್ವಾಮಿ ಉಪಸ್ಥಿತರಿದ್ದರು.

ಕನ್ನಡ ನೆಲ, ಜಲ, ಭಾಷೆಗೆ ಧಕ್ಕೆಯಾದರೆ ಹೋರಾಟಕ್ಕೆ ಸಿದ್ಧರಾಗಿರಿ

ಕುವೆಂಪು ವಿವಿ ವಿಶ್ರಾಂತ ಕುಲಪತಿ ಡಾ. ಕೆ.ಚಿದಾನಂದಗೌಡ ಕರೆ

ನಂಜನಗೂಡು, ನ.16– ಜ್ಞಾನ ಪಡೆಯಲು ಅನ್ಯ ಭಾಷೆಗಳನ್ನು ಬಳಕೆ ಮಾಡಬೇಕು, ಆದರೆ ಕನ್ನಡ ಭಾಷೆಯನ್ನು ಮರೆಯಬಾರದು, ಕನ್ನಡ ನೆಲ ಜಲ ಭಾಷೆಗೆ ಧಕ್ಕೆಯಾದರೆ ಹೋರಾಡಲು ನಾವೆಲ್ಲರೂ ಸಿದ್ಧರಾಗಿರಬೇಕು ಎಂದು ಕುವೆಂಪು ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿ ಡಾ. ಕೆ. ಚಿದಾನಂದಗೌಡ ಹೇಳಿದರು.

ತಾಲೂಕಿನ ತಾಂಡವಪುರ ಬಳಿ ಇರುವ ಮಹಾರಾಜ ತಾಂತ್ರಿಕ ಮಹಾವಿದ್ಯಾಲಯದಲ್ಲಿ ನಡೆದ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಕನ್ನಡ ಭಾಷೆಗೆ 2500 ವರ್ಷಗಳ ಇತಿಹಾಸವಿದ್ದು, ಭಾರತ ದೇಶದಲ್ಲಿ ಮೂರನೇ ಅತಿ ದೊಡ್ಡ ಭಾಷೆ ಎನಿಸಿದೆ, ಆದ್ದರಿಂದಲೇ ಸಾಕಷ್ಟು ಅನ್ಯ ಭಾಷೆಯರೂ ಕೂಡ ಕನ್ನಡದ ಬಗ್ಗೆ ಅಭಿಮಾನ ಬೆಳೆಸಿಕೊಂಡು ಕನ್ನಡ ಕಲಿತು ಎಲ್ಲರಿಗೂ ಮಾದರಿಯಾಗಿದ್ದಾರೆ, ಕಿಟ್ಟೆಲ್ ರವರು ವಿದೇಶಿಯರಾಗಿದ್ದರು ಸಹ ಕನ್ನಡ ಭಾಷೆಯನ್ನು ಕಲಿತು, ಕನ್ನಡದ ಅರ್ಥಕೋಶವನ್ನು ಬರೆದಿದ್ದಾರೆ, ಕನ್ನಡದ ಸಾಕಷ್ಟು ಸಾಹಿತಿಗಳು, ಕನ್ನಡದ ಪದಗಳ ಅರ್ಥಕ್ಕಾಗಿ ಇಂದಿಗೂ ಕೂಡ ಕಿಟಲ್ ರವರ ಅರ್ಥಕೋಶ ನಿಘಂಟು ಕೃತಿಯನ್ನು ಅವಲಂಬಿಸಿದ್ದಾರೆ, ಜೊತೆಗೆ ವಿನೋಬಾ ಭಾವೆ ರವರು ಕನ್ನಡ ಭಾಷೆಯನ್ನು ವಿಶ್ವದ ಲಿಪಿಗಳ ರಾಣಿ ಎಂದು ವರ್ಣಿಸಿದ್ದಾರೆ ಇಂತಹ ಐತಿಹಾಸಿಕ ಭಾಷೆಯನ್ನು ಉಳಿಸಿ ಬೆಳೆಸುವ ಸಲುವಾಗಿ ಇಂದಿನ ಪೀಳಿಗೆಯವರು ಕಡ್ಡಾಯವಾಗಿ ಕನ್ನಡ ಬಳಕೆ ಮಾಡುವ ಜೊತೆಗೆ ಅನ್ಯ ಭಾಷೆಯವರಿಗೂ ಕನ್ನಡ ಕಲಿಸಬೇಕು ಎಂದರು.

ಮಂಡ್ಯದ ಮಂಕುತಿಮ್ಮ ಟ್ರಸ್ಟ್ ಸಂಸ್ಥಾಪಕ ಅಧ್ಯಕ್ಷ ವಿಜಯ್ ಕುಮಾರ್ ಮಾತನಾಡಿ ಇಂಗ್ಲಿಷ್ ಭಾಷೆಯ ವ್ಯಾಮೋಹದಿಂದ, ಮತ್ತು ಇಂಗ್ಲಿಷ್ ಮಾತನಾಡಿದರೆ ಶ್ರೇಷ್ಠ ಎಂಬ ಮನೋಭಾವನೆ ಎಲ್ಲರಲ್ಲೂ ಮೂಡಿರುವುದರಿಂದ ಪ್ರಸ್ತ ದಿನಮಾನದಲ್ಲಿ ಕನ್ನಡ ಭಾಷೆಯನ್ನು ಸ್ಪಷ್ಟವಾಗಿ ಬರೆಯುವವರ ಸಂಖ್ಯೆ ಶೇಕಡ 10ಕ್ಕೆ ಇಳಿದಿದೆ, ಮುಂದಿನ 10 ವರ್ಷಗಳಲ್ಲಿ ಕನ್ನಡ ಭಾಷೆ ಕೇವಲ ಆಡುವ ಭಾಷೆಯಾಗಿ ಉಳಿಯಲಿದ್ದು ಬರವಣಿಗೆಯನ್ನು ಮರೆಯುವುದರಿಂದ ಕನ್ನಡ ಲಿಪಿಯು ಮರೆಯಾಗುವ ಆತಂಕ ಎದುರಾಗಿದೆ, ಕನ್ನಡ ಭಾಷೆಯನ್ನು ಕೈ ಬರವಣಿಗೆಯಲ್ಲಿ ಬರೆಯುವುದರಿಂದ ಕ್ರಿಯಾಶೀಲತೆ ಹೆಚ್ಚಾಗಲಿದೆ ಆದ್ದರಿಂದ ವಿದ್ಯಾರ್ಥಿಗಳು ತಾಂತ್ರಿಕ ಶಿಕ್ಷಣದಲ್ಲೂ ಸಹ ಕನ್ನಡ ಭಾಷೆಯನ್ನು ಅಳವಡಿಕೆ ಮಾಡಿಕೊಳ್ಳುವುದನ್ನು ಕಲಿಯಬೇಕು ಎಂದು ಸಲಹೆ ನೀಡಿದರು.


ಕನ್ನಡ ಹಿನ್ನೆಲೆ ಗಾಯಕ ನವೀನ್ ಸಜ್ಜು ಮಾತನಾಡಿ ಎಲ್ಲರೂ ಸೇರಿ ಕನ್ನಡ ರಾಜ್ಯೋತ್ಸವ ಆಚರಿಸುವ ಸಂಭ್ರಮ ಎದುರಾಗಬೇಕು, ನಮ್ಮ ನೆಲ ಜಲ ಭಾಷೆಗೆ ಧಕ್ಕೆಯಾದರೆ ಸಂಘಟನೆಯವರು ಮಾತ್ರ ಹೋರಾಡುತ್ತಾರೆ ಎಂಬ ಭಾವನೆಯನ್ನು ಬದಿಗಿಟ್ಟು ಎಲ್ಲರೂ ಹೋರಾಟ ನಡೆಸಲು ಸಿದ್ಧರಾಗಬೇಕು ಎಂದರು.

ಕಾರ್ಯಕ್ರಮದಲ್ಲಿ ಕಾಲೇಜಿನ ಪ್ರಾಂಶುಪಾಲರಾದ ಡಾ.ವೈ.ಟಿ.ಕೃಷ್ಣೇಗೌಡ, ಯಾಂತ್ರಿಕ ವಿಭಾಗದ ಮುಖ್ಯಸ್ಥರಾದ ಡಾ.ಕೆ.ಕೃಷ್ಣಮೂರ್ತಿ, ಆಡಳಿತ ವಿಭಾಗದ ಎಚ್. ಕೆ. ಚೇತನ್, ಮಹಾರಾಜ ಎಜುಕೇಶನ್ ಟ್ರಸ್ಟ್ ಉಪಾಧ್ಯಕ್ಷ ಡಾ.ಹೇಮಂತಕುಮಾರ, ಸೇರಿದಂತೆ ಕಾಲೇಜಿನ ಪ್ರಾಧ್ಯಾಪಕರು, ಮತ್ತು ವಿದ್ಯಾರ್ಥಿಗಳು ಉಪಸ್ಥಿತರಿದ್ದರು.



ಮಹಾರಾಜ ತಾಂತ್ರಿಕ ಮಹಾವಿದ್ಯಾಲಯದಲ್ಲಿ ಕನ್ನಡ ರಾಜ್ಯೋತ್ಸವವನ್ನು ವಿಶ್ರಾಂತ ಕುಲಪತಿ ಡಾ. ಕೆ.ಚಿದಾನಂದಗೌಡ ಉದ್ಘಾಟಿಸಿದರು.

ಅಡಿಕೆ ಮಹದೇವಶೆಟ್ಟಿ ನಿಧನ



ಕಂಪಲಾಪುರ, ನ.16– ಗ್ರಾಮದ ಅಡಿಕೆ ವ್ಯಾಪಾರಿ ಮಹದೇವಶೆಟ್ಟಿ (95) ಅನಾರೋಗ್ಯದಿಂದ ಭಾನುವಾರ ಸಂಜೆ ನಿಧನ ಹೊಂದಿದ್ದಾರೆ. ಮೃತರು ಪತ್ನಿ, ನಾಲ್ವರು ಪುತ್ರರು, ನಾಲ್ವರು ಪುತ್ರಿಯರು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಸೋಮವಾರ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿದೆ.

ಐಪಿಎಲ್ 2026 ಮಿನಿ ಹರಾಜು: ಎಲ್ಲಾ 10 ತಂಡಗಳು ಉಳಿಸಿಕೊಂಡ–ಕೈಬಿಟ್ಟ ಆಟಗಾರರ ಸಂಪೂರ್ಣ ವಿವರ



ಮೈಸೂರು, ನ.16(ವಿವಿಹೆಚ್)– ಇದೇ ಡಿ.16 ರಂದು ಐಪಿಎಲ್ (ಇಂಡಿಯನ್ ಪ್ರೀಮಿಯರ್ ಲೀಗ್) ಮಿನಿ ಹರಾಜು ಪ್ರಕ್ರಿಯೆ ನಡೆಯಲಿದೆ. ಈ ಬಾರಿಯ ಹರಾಜಿಗೂ ಮುನ್ನಾ ಎಲ್ಲ 10 ಫ್ರಾಂಚೈಸಿಗಳಿಗೆ ನವೆಂಬರ್ 15 ರೊಳಗೆ ತಮಗೆ ಬೇಕಾದ ಆಟಗಾರರ ರಿಟೈನ್ ಮಾಡಿಕೊಳ್ಳುವ ಹಾಗೂ ಕೆಲವರನ್ನ ಕೈಬಿಡುವ ಮಾಹಿತಿಯನ್ನು ಒದಗಿಸುವಂತೆ ಐಪಿಎಲ್ ಕೇಳಿತ್ತು. ಅದರಂತೆ ಶನಿವಾರ ಎಲ್ಲಾ ಫ್ರಾಂಚೈಸಿಗಳು ತಾವು ಉಳಿಸಿಕೊಂಡ ಹಾಗೂ ಕೈಬಿಟ್ಟ ಆಟಗಾರರ ಪಟ್ಟಿಯನ್ನು ಬಿಡುಗಡೆಗೊಳಿಸಿವೆ. ಕೆಲವು ತಂಡಗಳು ಇತರೆ ತಂಡಗಳೊಂದಿಗೆ ಸ್ವಾಪ್ ಡೀಲ್ ಕೂಡ ಮಾಡಿಕೊಂಡಿದ್ದು, ಅವುಗಳ ಸಂಪೂರ್ಣ ಮಾಹಿತಿಯನ್ನು ಹಂಚಿಕೊಂಡಿವೆ. ನಮ್ಮ ಆರ್‌ಸಿಬಿ (ರಾಯಲ್ ಚಾಲೆಂಜರ್ಸ್ ಬೆಂಗಳೂರು) ಸಹ ಉಳಿಸಿಕೊಂಡ ಹಾಗೂ ಕೈಬಿಟ್ಟ ಆಟಗಾರರ ಪಟ್ಟಿಯನ್ನು ಬಿಡುಗಡೆ ಮಾಡಿದೆ. ಇದರಲ್ಲಿ 17 ಮಂದಿ ಆಟಗಾರರನ್ನು ಉಳಿಸಿಕೊಂಡು, 8 ಮಂದಿ (ಇಬ್ಬರು ಕನ್ನಡಿಗರು ಸೇರಿ) ಆಟಗಾರರನ್ನು ಕೈಬಿಟ್ಟಿದೆ. ಆರ್‌ಸಿಬಿ ಮಯಾಂಕ್ ಅಗರ್ವಾಲ್, ಇಂಗ್ಲೆಂಡ್‌ನ ಪವರ್ ಹಿಟ್ಟರ್ ಲಯಾಮ್ ಲಿವಿಂಗ್‌ಸ್ಟೋನ್ ಅವರನ್ನು ಕೈಬಿಟ್ಟು ಅಚ್ಚರಿ ಮೂಡಿಸಿದೆ.

ರಾಯಲ್ ಚಾಲೆಂಜರ್ಸ್ ಬೆಂಗಳೂರು

ಉಳಿಸಿಕೊಂಡ ಆಟಗಾರರು: ನಾಯಕ ರಜತ್ ಪಟಿದಾರ್, ವಿರಾಟ್ ಕೊಹ್ಲಿ, ಫಿಲ್ ಸಾಲ್ಟ್, ಕೃನಾಲ್ ಪಾಂಡ್ಯ, ಜೋಶ್ ಹೇಜಲ್‌ವುಡ್, ಟಿಮ್ ಡೇವಿಡ್, ಜಿತೇಶ್ ಶರ್ಮಾ, ದೇವದತ್ ಪಡಿಕ್ಕಲ್, ನುವಾನ್ ತುಷಾರಾ, ಭುವನೇಶ್ವರ್ ಕುಮಾರ್, ಜೇಕಬ್ ಬೆಥೆಲ್, ರೊಮಾರಿಯೊ ಶೆಫರ್ಡ್, ಸುಯಶ್ ಶರ್ಮಾ, ಸ್ವಪ್ನಿಲ್ ಸಿಂಗ್, ಯಶ್ ದಯಾಳ್, ಅಭಿನಂದನ್ ಸಿಂಗ್, ರಸಿಖ್ ದರ್.

ಕೈಬಿಟ್ಟ ಆಟಗಾರು: ರಾಯಲ್ ಚಾಲೆಂಜರ್ಸ್ ಬೆಂಗಳೂರು ಕನ್ನಡಿಗರಾದ ಮಯಾಂಕ್ ಅಗರ್ವಾಲ್ ಹಾಗೂ ಮನೋಜ್ ಭಂಡಗೆ ಸೇರಿದಂತೆ ಒಟ್ಟು 8 ಆಟಗಾರರನ್ನು ಕೈಬಿಟ್ಟಿದೆ. ಲಿಯಾಮ್ ಲಿವಿಂಗ್‌ಸ್ಟನ್, ಟಿಮ್ ಸೈಫರ್ಟ್, ಬ್ಲೆಸಿಂಗ್ ಮುಜರಬಾನಿ, ಸ್ವಸ್ತಿಕ್ ಚಿಕಾರಾ, ಮೋಹಿತ್ ರಾಠಿ ಹಾಗೂ ಲುಂಗಿ ಎನ್‌ಗಿಡಿ.



ಲಿವಿಂಗ್‌ಸ್ಟನ್ ಮಯಾಂಕ್ ಎನ್‌ಗಿಡಿ

ಚೆನ್ನೈ ಸೂಪರ್ ಕಿಂಗ್ಸ್

ಉಳಿಸಿಕೊಂಡ ಆಟಗಾರರು: ರುತುರಾಜ್ ಗಾಯಕ್ವಾಡ್ (ನಾಯಕ), ಆಯುಷ್ ಮ್ಹಾತ್ರೆ, ಎಂ.ಎಸ್. ಧೋನಿ, ಡಿವಾಲ್ಡ್ ಬ್ರೆವಿಸ್, ಉರ್ವಿಲ್ ಪಟೇಲ್, ಶಿವಮ್ ದೂಬೆ, ಜೇಮಿ ಓವರ್ಟನ್, ರಾಮಕೃಷ್ಣ ಘೋಷ್, ನೂರ್ ಅಹಮದ್, ಖಲೀಲ್ ಅಹಮದ್, ಅಂಶುಲ್ ಕಂಬೋಜ್, ಗುರ್ಜಪ್ನೀತ್ ಸಿಂಗ್, ಶ್ರೇಯಸ್ ಗೋಪಾಲ್, ಮುಕೇಶ್ ಚೌಧರಿ, ನಾಥನ್ ಎಲ್ಲಿಸ್

ಕೈಬಿಟ್ಟ ಆಟಗಾರರು: ರಾಹುಲ್ ತ್ರಿಪಾಠಿ, ವಂಶ್ ಬೇಡಿ, ಸಿ ಆಂಡ್ರೆ ಸಿದ್ಧಾರ್ಥ, ರಚಿನ್ ರವೀಂದ್ರ, ಡೆವಾನ್ ಕಾನ್ವೇ, ದೀಪಕ್ ಹೂಡಾ, ವಿಜಯ್ ಶಂಕರ್, ಶೈಕ್ ರಶೀದ್, ಕಾಮ್ಲೇಶ್ ನಾಗರಕೋಟಿ ಮತ್ತು ಮತೀಶ ಪತಿರಣ




ರಚಿನ್ ಡೆವಾನ್ ಕಾನ್ವೇ ಪತಿರಣ

ಕೋಲ್ಕತ್ತಾ ನೈಟ್‌ರೈಡರ್ಸ್

ಉಳಿಸಿಕೊಂಡ ಆಟಗಾರರು: ಅಜಿಂಕ್ಯ ರಹಾನೆ, ಅಂಗ್‌ಕೃಷ್ ರಘುವಂಶಿ, ಅನುಕುಲ್ ರಾಯ್, ಹರ್ಷಿತ್ ರಾಣಾ, ಮನೀಶ್ ಪಾಂಡೆ, ರಮಣ ದೀಪ್ ಸಿಂಗ್, ರಿಂಕು ಸಿಂಗ್, ರೋವ್‌ಮನ್ ಪೊವೆಲ್, ಸುನಿಲ್ ನರೇನ್, ಉಮ್ರಾನ್ ಮಲಿಕ್, ವೈಭವ್ ಅರೋರಾ, ವರುಣ್ ಚಕ್ರವರ್ತಿ

ಕೈಬಿಟ್ಟ ಆಟಗಾರರು: ಅನ್ರಿಚ್ ನಾರ್ಕಿಯಾ, ಆಂಡ್ರೆ ರಸೆಲ್, ಕ್ವಿಂಟನ್ ಡಿ ಕಾಕ್, ಮೊಯೀನ್ ಅಲಿ, ರಹಮಾನುಲ್ಲಾ ಗುರ್ಬಾಜ್, ಸ್ಪೆನ್ಸರ್ ಜಾನ್ಸನ್, ವೆಂಕಟೇಶ್ ಅಯ್ಯರ್, ಲುವ್ನಿತ್ ಸಿಸೋಡಿಯಾ, ಚೇತನ್ ಸಕರಿಯಾ



ರಸೆಲ್ ಡಿ ಕಾಕ್ ವೆಂಕಟೇಶ್

ಮುಂಬೈ ಇಂಡಿಯನ್ಸ್

ಉಳಿಸಿಕೊಂಡ ಆಟಗಾರರು: ಎಎಂ ಗಜನ್‌ಫರ್, ಅಶ್ವಿನ್ ಕುಮಾರ್, ಕಾರ್ಬಿನ್ ಬಾಷ್, ದೀಪಕ್ ಚಹಾರ್, ಹಾರ್ದಿಕ್ ಪಾಂಡ್ಯ, ಜಸ್‌ಪ್ರೀತ್ ಬುಮ್ರಾ, ಮಿಚೆಲ್ ಸ್ಯಾಂಟ್ನರ್, ನಮನ್ ಧೀರ್, ರಘು ಶರ್ಮಾ, ರಾಜ್ ಅಂಗದ್ ಬಾವಾ, ರಾಬಿನ್ ಮಿನ್ಜ್, ರೋಹಿತ್ ಶರ್ಮಾ, ರಯಾನ್ ರಿಕೆಲ್ಟನ್, ಸೂರ್ಯಕುಮಾರ್ ಯಾದವ್, ತಿಲಕ್ ವರ್ಮಾ, ಟ್ರೆಂಟ್ ಬೌಲ್ಟ್, ವಿಲ್ ಜ್ಯಾಕ್ಸ್

ಕೈಬಿಟ್ಟ ಆಟಗಾರರು: ಬೆವಾನ್ ಜಾಕಬ್ಸ್, ಕರ್ಣ್ ಶರ್ಮಾ, ಕೆಎಲ್ ಶ್ರೀಜಿತ್, ಲಿಜಾಡ್ ವಿಲಿಯಮ್ಸ್, ಮುಜೀಬ್ ಉರ್ ರಹಮಾನ್, ಪಿಎಸ್ಎನ್ ರಾಜು, ರೀಸ್ ಟೋಪ್ಲಿ ವಿಘ್ನೇಶ್ ಪುತೂರ್



ಜಾಕಬ್ಸ್ ಕರ್ಣ್ ಟೋಪ್ಲಿ

ಡೆಲ್ಲಿ ಕ್ಯಾಪಿಟಲ್ಸ್

ಉಳಿಸಿಕೊಂಡ ಆಟಾರರು: ಅಕ್ಷರ್ ಪಟೇಲ್, ಕೆಎಲ್ ರಾಹುಲ್, ಕರುಣ್ ನಾಯರ್, ಅಭಿಷೇಕ್ ಪೊರೇಲ್, ಟ್ರಿಸ್ಟನ್ ಸ್ಟಬ್ಸ್, ಸಮೀರ್ ರಿಜ್ವಿ, ಆಶುತೋಷ್ ಶರ್ಮಾ, ವಿಪ್ರಜ್ ನಿಗಮ್, ಅಜಯ್ ಮಂಡಲ್, ತ್ರಿಪುರಾನ ವಿಜಯ್, ಮಾಧವ್ ತಿವಾರಿ, ಮಿಚೆಲ್ ಸ್ಟಾರ್ಕ್, ಟಿ ನಟರಾಜನ್, ಮುಕೇಶ್ ಕುಮಾರ್, ದುಶ್ಮಂತ ಚಮೀರಾ, ಕುಲದೀಪ್ ಯಾದವ್

ಕೈಬಿಟ್ಟ ಆಟಗಾರರು: ಮೋಹಿತ್ ಶರ್ಮಾ, ಫಾಫ್ ಡು ಪ್ಲೆಸಿಸ್, ಸೆದೀಕುಲ್ಲಾ ಅತಾಲ್, ಜೇಕ್ ಫ್ರೇಸರ್–ಮೆಕ್‌ಗರ್ಕ್, ಮನ್ವಂತ್ ಕುಮಾರ್, ದರ್ಶನ್ ನಲ್ಕಂಡೆ



ಡು ಪ್ಲೆಸಿಸ್ ಮೋಹಿತ್ ಫ್ರೇಸರ್

ಪಂಜಾಬ್ ಕಿಂಗ್ಸ್

ಉಳಿಸಿಕೊಂಡ ಆಟಗಾರರು: ಪ್ರಭ್‌ಸಿಮ್ರನ್ ಸಿಂಗ್, ಪ್ರಿಯಾಂಶ್ ಆರ್ಯ, ಶ್ರೇಯಸ್ ಅಯ್ಯರ್, ಶಶಾಂಕ್ ಸಿಂಗ್, ನೆಹಾಲ್ ವಾಧೇರಾ, ಮಾರ್ಕಸ್ ಸ್ಟೋಯ್ನಿಸ್, ಅಜ್ಮತುಲ್ಲಾ ಒಮರ್ಜೈ, ಮಾರ್ಕೋ ಜಾನ್ಸೆನ್, ಹರ್‌ಪ್ರೀತ್ ಬ್ರಾರ್, ಯುಜ್ವೇಂದ್ರ ಚಹಲ್, ಅರ್ಶ್‌ದೀಪ್ ಸಿಂಗ್, ಮುಶೀರ್ ಖಾನ್, ಪ್ಯಾಲಾ ಅವಿನಾಶ್, ಹರ್ನೂರ್ ಪನ್ನು, ಸೂರ್ಯಾಂಶ್ ಶೆಡ್ಗೆ, ಮಿಚೆಲ್ ಓವೆನ್, ಕ್ಸೇವಿಯರ್ ಬಾರ್ಟ್ಲೆಟ್, ಲಾಕೀ ಫರ್ಗ್ಯೂಸನ್, ವೈಶಾಕ್ ವಿಜಯ ಕುಮಾರ್, ಯಶ್ ಠಾಕೂರ್, ವಿಷ್ಣು ವಿನೋದ್

ಕೈಬಿಟ್ಟ ಆಟಗಾರರು: ಗ್ಲೆನ್ ಮ್ಯಾಕ್ಸ್‌ವೆಲ್, ಜೋಶ್ ಇಂಗ್ಲಿಸ್, ಆರನ್ ಹಾರ್ಡಿ, ಕುಲದೀಪ್ ಸೇನ್



ಮ್ಯಾಕ್ಸ್‌ವೆಲ್ ಇಂಗ್ಲಿಸ್ ಕುಲದೀಪ್

ಸನ್‌ರೈಸರ್ಸ್ ಹೈದರಾಬಾದ್

ಉಳಿಸಿಕೊಂಡ ಆಟಗಾರರು: ಪ್ಯಾಟ್ ಕಮಿನ್ಸ್ (ನಾಯಕ), ಟ್ರಾವಿಸ್ ಹೆಡ್, ಅಭಿಷೇಕ್ ಶರ್ಮಾ, ಅನಿಕೇತ್ ವರ್ಮಾ, ಆರ್. ಸ್ಮರಣ್, ಇಶಾನ್ ಕಿಶನ್, ಹೈನ್ರಿಕ್ ಕ್ಲಾಸೆನ್, ನಿತೀಶ್ ಕುಮಾರ್ ರೆಡ್ಡಿ, ಹರ್ಷ್ ದುಬೇ, ಕಮಿಂದು ಮೆಂಡಿಸ್, ಹರ್ಷಲ್ ಪಟೇಲ್, ಬ್ರೈಡನ್ ಕಾರ್ಸ್, ಜಯದೇವ್ ಉನದ್ಕಟ್, ಏಶನ್ ಮಾಲಿಂಗ, ಝೀಶಾನ್ ಅನ್ಸಾರಿ.

ಕೈಬಿಟ್ಟ ಆಟಗಾರರು: ಆಡಮ್ ಜಂಪಾ, ರಾಹುಲ್ ಚಹಾರ್, ವಿಯಾನ್ ಮುಲ್ಡರ್, ಅಭಿನವ್ ಮನೋಹರ್, ಅಥರ್ವ ತೈದೆ, ಸಚಿನ್ ಬೇಬಿ



ಜಂಪಾ ರಾಹುಲ್ ಮುಲ್ಡರ್

ಲಕ್ನೋ ಸೂಪರ್ ಜೈಂಟ್ಸ್

ಉಳಿಸಿಕೊಂಡ ಆಟಗಾರರು: ಅಬ್ದುಲ್ ಸಮದ್, ಆಯುಷ್ ಬಡೋನಿ, ಏಡೆನ್ ಮಾರ್ಕ್ರಮ್, ಮ್ಯಾಥ್ಯೂ ಬ್ರೀಟ್ಝ್ಕೆ, ಹಿಮ್ಮತ್ ಸಿಂಗ್, ರಿಷಭ್ ಪಂತ್ (ನಾಯಕ), ನಿಕೋಲಸ್ ಪೂರನ್, ಮಿಚೆಲ್ ಮಾರ್ಷ್, ಶಹಬಾಜ್ ಅಹಮದ್, ಅರ್ಶಿನ್ ಕುಲಕರ್ಣಿ, ಮಯಾಂಕ್ ಯಾದವ್, ಆವೇಶ್ ಖಾನ್, ಮೊಹ್ಸಿನ್ ಖಾನ್, ಮಣಿಮಾರನ್ ಸಿದ್ಧಾರ್ಥ, ದಿಗ್ವೇಶ್ ರಾಠಿ, ಪ್ರಿನ್ಸ್ ಯಾದವ್, ಆಕಾಶ್ ಸಿಂಗ್.

ಕೈಬಿಟ್ಟ ಆಟಗಾರರು: ಆರ್ಯನ್ ಜುಯಾಲ್, ಡೇವಿಡ್ ಮಿಲ್ಲರ್, ಯುವರಾಜ್ ಚೌಧರಿ, ರಾಜ್‌ವರ್ಧನ್ ಹಂಗರ್ಗೇಕರ್, ಆಕಾಶ್ ದೀಪ್, ರವಿ ಬಿಷ್ಣೋಯ್, ಶಮಾರ್ ಜೋಸೆಫ್



ಮಿಲ್ಲರ್ ಬಿಷ್ಣೋಯ್ ಆಕಾಶ್

ರಾಜಸ್ಥಾನ್ ರಾಯಲ್

ಉಳಿಸಿಕೊಂಡ ಆಟಗಾರರು: ಶುಭಂ ದುಬೆ, ವೈಭವ್ ಸೂರ್ಯವಂಶಿ, ಕುಣಾಲ್ ರಾಠೋರ್, ಲುವಾನ್–ಡ್ರೆ ಪ್ರಿಟೋರಿಯಸ್, ಶಿಮ್ರಾನ್ ಹೆಟ್ಮಯರ್, ಯಶಸ್ವಿ ಜೈಸ್ವಾಲ್, ಧ್ರುವ್ ಜುರೇಲ್, ರಿಯಾನ್ ಪರಾಗ್, ಯುಧ್ವೀರ್ ಸಿಂಗ್ ಚರಕ್, ಜೋಫ್ರಾ ಆರ್ಚರ್, ಆಕಾಶ್ ಮಧ್ವಾಲ್, ಕುಮಾರ್ ಕಾರ್ತಿಕೇಯ ಸಿಂಗ್, ತುಷಾರ್ ದೇಶಪಾಂಡೆ, ಫಜಲ್ಹಕ್ ಫಾರೂಕಿ, ಕ್ವೆನಾ ಮಫಾಕಾ, ಅಶೋಕ್ ಶರ್ಮಾ, ನಾಂದ್ರೆ ಬರ್ಗರ್.

ಕೈಬಿಟ್ಟ ಆಟಗಾರರು: ವನಿಂದು ಹಸರಂಗ ಹಾಗೂ ಮಹೀಶ ತೀಕ್ಷಣ



ಹಸರಂಗ ಮಹೀಶ

ಗುಜರಾತ್ ಟೈಟನ್ಸ್

ಉಳಿಸಿಕೊಂಡ ಆಟಗಾರರು: ಶುಭ್‌ಮನ್ ಗಿಲ್ (ನಾಯಕ), ರಶೀದ್ ಖಾನ್, ಸಾಯಿ ಸುದರ್ಶನ್, ರಾಹುಲ್ ತೆವಾಟಿಯಾ, ಶಾರುಖ್ ಖಾನ್, ಕಗಿಸೊ ರಬಾಡ, ಜೋಸ್ ಬಟ್ಲರ್, ಮೊಹಮ್ಮದ್ ಸಿರಾಜ್, ಪ್ರಸಿದ್ಧ್ ಕೃಷ್ಣ, ನಿಶಾಂತ್ ಸಿಂಧು, ಕುಮಾರ್ ಕುಶಾಗ್ರ, ಅನುಜ್ ರಾವತ್, ಮನಾವ್ ಸುಥಾರ್, ವಾಷಿಂಗ್ಟನ್ ಸುಂದರ್, ಅರ್ಷದ್ ಖಾನ್, ಗುರ್ನೂರ್ ಬ್ರಾರ್, ಸಾಯಿ ಕಿಶೋರ್, ಇಶಾಂತ್ ಶರ್ಮಾ, ಜಯಂತ್ ಯಾದವ್, ಗ್ಲೆನ್ ಫಿಲಿಪ್ಸ್

ಕೈಬಿಟ್ಟ ಆಟಗಾರರು: ಕರೀಂ ಜನತ್, ಕುಲವಂತ್ ಖೇಜ್ರೋಲಿಯಾ, ಗೆರಾಲ್ಡ್ ಕೋಯೆಟ್ಜೀ, ದಸುನ್ ಶನಕ ಮತ್ತು ಮಹಿಪಾಲ್ ಲೋಮ್ರೋರ್



ಕೋಯೆಟ್ಜೀ ಲೋಮ್ರೋರ್ ಶನಕ

ಇನ್ನು ಕೆಲವರು ಸ್ವಾಪ್ ಡೀಲ್ ಮೂಲಕ ಟ್ರೇಡ್ ಆದರೆ, ಇನ್ನು ಕೆಲ ಆಟಗಾರು ಕ್ಯಾಶ್ ಡೀಲ್ ಮೂಲಕ ಬೇರೆ ತಂಡಗಳಿಗೆ ಸೇರ್ಪಡೆಯಾಗಿದ್ದಾರೆ. ಅದರಂತೆ ಹರಾಜಿಗೂ ಮುನ್ನ ಟ್ರೇಡ್ ಆಗಿರುವ ಆಟಗಾರರ ಸಂಪೂರ್ಣ ಪಟ್ಟಿ ಇಂತಿದೆ.

ಸಿಎಸ್‌ಕೆ: ಸಂಜು ಸ್ಯಾಮ್ಸನ್

ಆರ್‌ಆರ್: ಜಡೇಜಾ, ಸ್ಯಾಮ್ ಕರನ್, ಡೊನೊವನ್ ಫೆರೀರಾ

ಎಂಐ: ಮಯಾಂಕ್ ಮಾರ್ಕಂಡೆ, ಶೆರ್ಫೇನ್ ರದರ್‌ಫೋರ್ಡ್

ಎಲ್‌ಎಸ್‌ಜಿ: ಶಾರ್ದೂಲ್ ಠಾಕೂರ್, ಅರ್ಜುನ್ ತೆಂಡುಲ್ಕರ್, ಮೊಹಮ್ಮದ್ ಶಮಿ


ಡೆಲ್ಲಿ ಕ್ಯಾಪಿಟಲ್ಸ್: ನಿತೀಶ್ ರಾಣಾ



ಜಡೇಜಾ ಕರನ್ ಶಾರ್ದೂಲ್



ಅರ್ಜುನ್ ಶಮಿ ನಿತೀಶ್



18ನೇ ಐಪಿಎಲ್ ಟ್ರೋಫಿ ಗೆದ್ದಿದ್ದ ಆರ್‌ಸಿಬಿ

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ದಾವೂದ್ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ಐ ಆ್ಯಮ್ ಗಾಡ್ (ಕ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ದೇ ದೇ ಪ್ಯಾರ್ ದೇ–2 (ಹಿ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ಬ್ರ್ಯಾಟ್ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಕಾಂತಾರ ಚಾಪ್ಟರ್–1 (ಕ)	4 ಪ್ರದರ್ಶನಗಳು
ರಾಜಕಮಲ್	
ಅದರ್ಸ್ (ತ)	4 ಪ್ರದರ್ಶನಗಳು
ಸಂಗಂ	
ಗತವೈಭವ (ಕ)	4 ಪ್ರದರ್ಶನಗಳು
ಲಿಡೋ	
ಬ್ರ್ಯಾಟ್ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಯಜಮಾನ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	ಕಾಂತಾರ ಚಾಪ್ಟರ್ 1(ಕ): ಮ.1.25ಕ್ಕೆ, ಸಂ.4.45ಕ್ಕೆ
	ಪ್ರೆಡೆಟರ್ ಬ್ಯಾಡ್‌ಲ್ಯಾಂಡ್ಸ್ (ಇ): ಬೆ.11.00ಕ್ಕೆ, ರಾ.8.05, ರಾ.10.25ಕ್ಕೆ
ಸ್ಕ್ರೀನ್ 2	ಡೈಸ್ ಇರೇ (ಮ): ಬೆ.10.40ಕ್ಕೆ, ಆರೊಮಲೆ (ತ): ಮ.1.25ಕ್ಕೆ, ಬ್ರ್ಯಾಟ್(ಕ): ಸಂ.4.05ಕ್ಕೆ, ಸಂ.7.15ಕ್ಕೆ ಜಟಾಧರ (ತೆ): ರಾ.10.20ಕ್ಕೆ
ಸ್ಕ್ರೀನ್ 3	ಹಕ್ (ಹಿ): ಬೆ.10.35ಕ್ಕೆ, ಮ. 1.25ಕ್ಕೆ, ಸಂ. 7.15ಕ್ಕೆ ಲವ್ ಯು ಮುದ್ದು(ಕ): ಸಂ. 4.20ಕ್ಕೆ, ಇನ್ನೊಸೆಂಟ್ (ಮ): ರಾ.10.10ಕ್ಕೆ,
ಸ್ಕ್ರೀನ್ 4	ಕಾಂತಾರ ಚಾಪ್ಟರ್ 1(ಕ): ಸಂ. 7.00ಕ್ಕೆ, ಬ್ರ್ಯಾಟ್(ಕ): ಬೆ.10.20ಕ್ಕೆ, ಯಜಮಾನ(ಕ): ಮ.1.30ಕ್ಕೆ, ದಿ ಗರ್ಲ್‌ಫ್ರೆಂಡ್ (ತೆ): ಸಂ.4.10ಕ್ಕೆ, ರಾ. 10.20ಕ್ಕೆ

ಮೈಸೂರು ವಿಷನ್ ಸಿನಿಮಾ

ದೂ : 0821–2973519

- ಕಾಂತಾರ –1(ಕ): ಬೆ.10.30, ಮ.1.35, ರಾ.7.15ಕ್ಕೆ
- ಬ್ರ್ಯಾಟ್ (ಕ): ಬೆ.10.45ಕ್ಕೆ, ಮ.1.45, ಸಂ.4.45, ರಾ.7.45ಕ್ಕೆ
- ನಿಷಿದ್ಧ (ಕ): ಬೆ.10.50ಕ್ಕೆ, ದಿ ಗರ್ಲ್‌ಫ್ರೆಂಡ್ (ತೆ): ಬೆ.11, ಸಂ.6.30, ರಾ.9.15ಕ್ಕೆ
- ಕೋಣ (ಕ): ಮ.1.15ಕ್ಕೆ, ಐ ಆ್ಯಮ್ ಗಾಡ್ (ಕ): ಸಂ.3.40ಕ್ಕೆ,
- ಲವ್ ಯು ಮುದ್ದು(ಕ): ಸಂ.6.40ಕ್ಕೆ, ಡೈಸ್ ಇರೇ (ಮ): ರಾ. 9.15ಕ್ಕೆ,

ನೆಕ್ಸಸ್ ಮಾಲ್

- ಕಾಂತಾರ ಚಾಪ್ಟರ್ 1(ಕ) : ಬೆ: 10.00ಕ್ಕೆ, ಸಂ.4.15ಕ್ಕೆ, ರಾ.10.30ಕ್ಕೆ
- ಬ್ರ್ಯಾಟ್ (ಕ): ಬೆ: 9.45ಕ್ಕೆ, ಸಂ.4.05ಕ್ಕೆ.
- ದಿ ಗರ್ಲ್‌ಫ್ರೆಂಡ್ (ತೆ): ಬೆ: 9.55ಕ್ಕೆ, ಮ.12.50ಕ್ಕೆ, ಸಂ.6.55, ರಾ: 9.50ಕ್ಕೆ
- ಹಕ್ (ಹಿ): ಬೆ: 10.05ಕ್ಕೆ, ಮ.1.25, ಸಂ.7.40, ರಾ.10.00ಕ್ಕೆ
- ಪ್ರೆಡೆಟರ್ ಬ್ಯಾಡ್‌ಲ್ಯಾಂಡ್ಸ್ (ಇ): ಬೆ. 10.05ಕ್ಕೆ, ಮ.12.30, ಸಂ.7.15, ರಾ.9.40ಕ್ಕೆ
- ದಿ ತಾಜ್ ಸ್ಟೋರಿ (ಹಿ): ಬೆ: 10.05, ಮ: 3.50ಕ್ಕೆ,
- ಯಜಮಾನ (ಕ): ಮ: 12.40ಕ್ಕೆ, ಜಟಾಧರ (ತೆ): ಮ: 1.00ಕ್ಕೆ,
- ಡೈಸ್ ಇರೇ (ಮ): ಮ. 1.35ಕ್ಕೆ, ರಾ: 7.40ಕ್ಕೆ, ಬಾಹುಬಲಿ (ಹಿ): ಮ. 2.55ಕ್ಕೆ,
- ತಮ್ಮಾ (ಹಿ): ಮ.3.45ಕ್ಕೆ, ಚೆನ್ನೈ ಎಕ್ಸ್‌ಪ್ರೆಸ್ (ಹಿ): ಸಂ. 4.05ಕ್ಕೆ,
- ಆರೊಮಲೆ (ತ): ಸಂ.7.15ಕ್ಕೆ, ಏಕ್ ದಿವಾನೆ ಕಿ ದೀವಾನಿಯಾತ್ (ಹಿ): ಸಂ.7.15ಕ್ಕೆ
- ಇನ್ನೋಸೆಂಟ್(ಮ): ರಾ.10.10ಕ್ಕೆ, ಮರ್ಡರ್ ರಿಪೋರ್ಟ್(ಕೋ): ರಾ.10.20ಕ್ಕೆ,

ಗರುಡ ಮಾಲ್

- ಕಾಂತಾರ ಚಾಪ್ಟರ್ 1(ಕ) : ಬೆ: 9.50ಕ್ಕೆ, ಮ.1.10ಕ್ಕೆ, ಸಂ.7.05
- ಪ್ರೆಡೆಟರ್ ಬ್ಯಾಡ್‌ಲ್ಯಾಂಡ್ಸ್ (ಇ): ಬೆ. 10.00ಕ್ಕೆ, ಸಂ.4.45, ರಾ.10.20ಕ್ಕೆ
- ದಿ ಗರ್ಲ್‌ಫ್ರೆಂಡ್ (ತೆ): ಬೆ: 10.10ಕ್ಕೆ, ಸಂ.7.05, ರಾ.10.00ಕ್ಕೆ
- ಹಕ್ (ಹಿ): ಬೆ: 10.40ಕ್ಕೆ, ಸ.4.15, ರಾ.10.30ಕ್ಕೆ
- ಬಾಹುಬಲಿ (ತೆ): ಮ. 12.25ಕ್ಕೆ,
- ಬ್ರ್ಯಾಟ್ (ಕ): ಮ. 1.05ಕ್ಕೆ, ಸಂ.7.10ಕ್ಕೆ
- ಜಟಾಧರ (ತೆ): ಮ: 1.30ಕ್ಕೆ,
- ಲವ್ ಯು ಮುದ್ದು(ಕ): ಸಂ.4.20ಕ್ಕೆ, ಡೈಸ್ ಇರೇ (ಮ): ಸಂ.4.35, ರಾ.10.10ಕ್ಕೆ
- ಐ ಆ್ಯಮ್ ಗಾಡ್ (ಕ): ಸಂ.7.05ಕ್ಕೆ,

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಭಾರತ–ದಕ್ಷಿಣ ಆಫ್ರಿಕಾ: 93 ವರ್ಷಗಳ ಇತಿಹಾಸದಲ್ಲೇ ಹೀನಾಯ ದಾಖಲೆ ಬರೆದ ಭಾರತ



ಕೋಲ್ಕತಾ: ದಕ್ಷಿಣ ಆಫ್ರಿಕಾ ವಿರುದ್ಧ ಗೆಲ್ಲಬಹುದಾಗಿದ್ದ ಮೊದಲ ಟೆಸ್ಟ್ ಪಂದ್ಯವನ್ನು ಕೈ ಚೆಲ್ಲುವ ಮೂಲಕ ಭಾರತ ಕ್ರಿಕೆಟ್ ತಂಡ 93 ವರ್ಷಗಳ ಕ್ರಿಕೆಟ್ ಇತಿಹಾಸದಲ್ಲೇ ಕೆಟ್ಟ ದಾಖಲೆಯೊಂದನ್ನು ಬರೆದಿದೆ.

ಕೊಲ್ಕತ್ತಾದ ಈಡನ್ ಗಾರ್ಡನ್ಸ್ ಮೈದಾನದಲ್ಲಿ ನಡೆದ ಮೊದಲ ಟೆಸ್ಟ್ ಪಂದ್ಯದಲ್ಲಿ ಮೊದಲು ಬ್ಯಾಟ್ ಮಾಡಿದ ಸೌತ್ ಆಫ್ರಿಕಾ ತಂಡವು 159 ರನ್‌ಗಳಿಗೆ ಆಲೌಟಾದರೆ, ಟೀಂ ಇಂಡಿಯಾ ಪ್ರಥಮ ಇನಿಂಗ್ಸ್‌ನಲ್ಲಿ 189 ರನ್ ಕಲೆಹಾಕಿತು.

ಇನ್ನು ದ್ವಿತೀಯ ಇನಿಂಗ್ಸ್‌ನಲ್ಲಿ ಸೌತ್ ಆಫ್ರಿಕಾ 153 ರನ್‌ಗಳಿಗೆ ಆಲೌಟ್ ಆಗಿದೆ. ಮೊದಲ ಇನಿಂಗ್ಸ್‌ನಲ್ಲಿನ 30 ರನ್‌ಗಳ ಮುನ್ನಡೆಯೊಂದಿಗೆ ದ್ವಿತೀಯ ಇನಿಂಗ್ಸ್‌ನಲ್ಲಿ 124 ರನ್‌ಗಳ ಗುರಿ ಪಡೆದ ಟೀಂ ಇಂಡಿಯಾ ಕೇವಲ 93 ರನ್ ಗಳಿಸಿ ಆಲೌಟ್ ಆಗಿದೆ. ಭಾರತ ತಂಡ 30 ರನ್‌ಗಳಿಂದ ಸೋಲನುಭವಿಸಿದ್ದು, ಈ ಮೂಲಕ ಟೀಂ ಇಂಡಿಯಾಗೆ ತವರಿನಲ್ಲಿ ಹೀನಾಯ ಸೋಲುಣಿಸಿದ ಹೆಗ್ಗಳಿಕೆಯನ್ನು ಸೌತ್ ಆಫ್ರಿಕಾ ತಂಡ ತನ್ನದಾಗಿಸಿಕೊಂಡಿದೆ.

93 ವರ್ಷಗಳ ಹೀನಾಯ ದಾಖಲೆ: ಭಾರತ ತಂಡವು ಟೆಸ್ಟ್ ಕ್ರಿಕೆಟ್ ಆಡಲು ಶುರುವಾಗಿ ಬರೋಬ್ಬರಿ 93 ವರ್ಷಗಳಾಗಿದ್ದು, ಭಾರತ ತಂಡವು ಈ ಅತ್ಯಲ್ಪ ಮೊತ್ತವನ್ನು ಬೆನ್ನತ್ತಲಾಗದೇ ಸೋತು ಭಾರೀ ಮುಖಭಂಗ ಅನುಭವಿಸಿದೆ. ಭಾರತ ತಂಡವು ತವರು ಮೈದಾನದಲ್ಲಿ ಒಮ್ಮೆಯೂ 130 ಕ್ಕಿಂತ ಕಡಿಮೆ ಗುರಿಯನ್ನು ಬೆನ್ನತ್ತಲಾಗದೇ ಸೋತ ಚರಿತ್ರೆಯೇ ಇರಲಿಲ್ಲ.

2024 ರಲ್ಲಿ ಮುಂಬೈನ ವಾಂಖೆಡೆ ಸ್ಟೇಡಿಯಂನಲ್ಲಿ ನಡೆದ ನ್ಯೂಝಿಲೆಂಡ್ ವಿರುದ್ಧದ ಟೆಸ್ಟ್ ಪಂದ್ಯದ ಕೊನೆಯ ಇನಿಂಗ್ಸ್‌ನಲ್ಲಿ 147 ರನ್‌ಗಳ ಗುರಿ ಬೆನ್ನತ್ತಲಾಗದೇ ಟೀಮ್ ಇಂಡಿಯಾ 25 ರನ್‌ಗಳಿಂದ ಸೋತಿದ್ದು ತವರಿನಲ್ಲಿನ ಹೀನಾಯ ಸೋಲಾಗಿತ್ತು. ಇದೀಗ ಅದಕ್ಕಿಂತ ಕೆಟ್ಟ ದಾಖಲೆಯೊಂದನ್ನು ಟೀಮ್ ಇಂಡಿಯಾ ನಿರ್ಮಿಸಿದೆ.

ಭಾರತದಲ್ಲಿನ ಟೆಸ್ಟ್ ಪಂದ್ಯದಲ್ಲಿ ಅತೀ ಕಡಿಮೆ ಗುರಿ ಪಡೆದು 100 ರನ್ ಗಳಿಸಲಾಗದೇ ಟೀಮ್ ಇಂಡಿಯಾ ಸೋತಿರುವುದು ಇದೇ ಮೊದಲು. ಹೀಗಾಗಿ ಸೌತ್ ಆಫ್ರಿಕಾ ವಿರುದ್ಧದ ಭಾರತದ ಈ ಹೀನಾಯ ಸೋಲು ಕೂಡ ಇತಿಹಾಸ ಪುಟ ಸೇರಿದೆ.

ಏಷ್ಯನ್ ಮಾಸ್ಟರ್ಸ್ ಅಥ್ಲೆಟಿಕ್ ಚಾಂಪಿಯನ್‌ಶಿಪ್‌ನ ಪದಕ ವಿಜೇತರಿಗೆ ಸನ್ಮಾನ



ಚೆನ್ನೈನಲ್ಲಿ ನಡೆದ 23ನೇ ಏಷ್ಯನ್ ಮಾಸ್ಟರ್ಸ್ ಅಥ್ಲೆಟಿಕ್ಸ್ ಚಾಂಪಿಯನ್‌ಶಿಪ್‌ನಲ್ಲಿ ಚಿನ್ನ, ಬೆಳ್ಳಿ ಮತ್ತು ಕಂಚಿನ ಪದಕಗಳನ್ನು ಗೆದ್ದ 6 ಮಂದಿ ಕ್ರೀಡಾಪಟುಗಳನ್ನು ಮೈಸೂರು ಜಿಲ್ಲಾ ಮಾಸ್ಟರ್ಸ್ ಅಥ್ಲೆಟಿಕ್ಸ್ ಅಸೋಸಿಯೇಷನ್ ವತಿಯಿಂದ ಸನ್ಮಾನಿಸಲಾಯಿತು.

ಮೈಸೂರು,ನ.16(ಎಸ್‌ಪಿಎನ್)– ಚೆನ್ನೈನಲ್ಲಿ ನ.5 ರಿಂದ ನ.9 ರವರೆಗೆ ನಡೆದ 23ನೇ ಏಷ್ಯನ್ ಮಾಸ್ಟರ್ಸ್ ಅಥ್ಲೆಟಿಕ್ಸ್ ಚಾಂಪಿಯನ್‌ಶಿಪ್‌ನಲ್ಲಿ ಚಿನ್ನ, ಬೆಳ್ಳಿ ಮತ್ತು ಕಂಚಿನ ಪದಕ ವಿಜೇತರಾದ 6 ಮಂದಿ ಕ್ರೀಡಾಪಟುಗಳನ್ನು ಮೈಸೂರು ಜಿಲ್ಲಾ ಮಾಸ್ಟರ್ಸ್ ಅಥ್ಲೆಟಿಕ್ಸ್ ಅಸೋಸಿಯೇಷನ್ ವತಿಯಿಂದ ಸನ್ಮಾನಿಸಲಾಯಿತು,

ಪದಕ ಗೆದ್ದ ಕ್ರೀಡಾಪಟುಗಳನ್ನು ಖಾಸಗಿ ಹೋಟೆಲ್‌ನಲ್ಲಿ ಮೈಸೂರು ಅಥ್ಲೆಟಿಕ್ಸ್ ಕ್ಲಬ್‌ನಿಂದ ಎಂಡಿಎಂಎಎ ಅಧ್ಯಕ್ಷೆ ಸುಮನ್ ನರಸಿಂಹಮೂರ್ತಿ ಸನ್ಮಾನಿಸಿ, ಶುಭ ಹಾರೈಸಿದ್ದಾರೆ. 75 ವರ್ಷ ಪುರುಷರ ವಿಭಾಗದಲ್ಲಿ 4x100 ಮೀಟರ್ ರಿಲೇ ಓಟದಲ್ಲಿ ಚಿನ್ನದ ಪದಕ, 75 ಮೇಲ್ಪಟ್ಟ ಪುರುಷರ ವಿಭಾಗದ ಅಡಿಯಲ್ಲಿ 100 ಮೀಟರ್ ಓಟದಲ್ಲಿ ಬೆಳ್ಳಿ ಪದಕ ಬಲರಾಮೇಗೌಡ, 75 ವರ್ಷ ಮೇಲ್ಪಟ್ಟ ಮಹಿಳೆಯರ ವಿಭಾಗದ ಹ್ಯಾಮರ್ ಥ್ರೋನಲ್ಲಿ ಕಂಚಿನ ಪದಕ ಗೆದ್ದಿದ್ದ ಭಾರತಿ, 70 ವರ್ಷ ಮೇಲ್ಪಟ್ಟ ಮಹಿಳೆಯರ ವಿಭಾಗದಲ್ಲಿ 4x100 ಮೀಟರ್ ರಿಲೇಯಲ್ಲಿ ಮಂಜಮ್ಮ ಚಿನ್ನದ ಪದಕ ಗೆದ್ದಿದ್ದಾರೆ.

65 ವರ್ಷ ಮೇಲ್ಪಟ್ಟ ಮಹಿಳೆಯರ ವಿಭಾಗದಲ್ಲಿ ವಾಕಿಂಗ್ ಓಟದಲ್ಲಿ ಬಿ ಸಿ ಪಾರ್ವತಿ ಕಂಚಿನ ಪದಕ, 45 ವರ್ಷ ಮೇಲ್ಪಟ್ಟ ಮಹಿಳೆಯರ ವಿಭಾಗದಲ್ಲಿ 800 ಮೀಟರ್ ಓಟದಲ್ಲಿ ಕುಸುಮಾ ಬೆಳ್ಳಿ ಪದಕ, 40 ವರ್ಷ ಮೇಲ್ಪಟ್ಟ ಪುರುಷರ ವಿಭಾಗದಡಿಯಲ್ಲಿ 400 ಮತ್ತು 800 ಮೀಟರ್ ಓಟದಲ್ಲಿ ಚಿನ್ನದ ಪದಕ ಗೆದ್ದಿದ್ದ ಜಿ.ಜಿ.ರಘುನಂದನ್ ಅವರನ್ನು ಸನ್ಮಾನಿಸಲಾಯಿತು.

ಮೈಸೂರು ಜಿಲ್ಲಾ ಮಾಸ್ಟರ್ಸ್ ಅಥ್ಲೆಟಿಕ್ಸ್ ಅಸೋಸಿಯೇಷನ್ ಕಾರ್ಯದರ್ಶಿ ಸಿ.ಬಸವರಾಜ್, ಉಪಾಧ್ಯಕ್ಷ ಎಂ.ಯೋಗೇಂದ್ರ ಸಂಘಟನಾ ಕಾರ್ಯದರ್ಶಿ ಎಂ.ಪಿ.ಚಂದ್ರಶೇಖರ್, ಉಪಾಧ್ಯಕ್ಷ ಕೆ.ಎನ್.ಸೋಮಶೇಖರ್, ಉಪಾಧ್ಯಕ್ಷ ಕಾಂತರಾಜ್, ಕಾರ್ಯಕಾರಿ ಸದಸ್ಯರಾದ ಬಿ.ರಾಣಿ, ಎಸ್.ಮಹದೇವು, ಗಣೇಶ್, ಎಸ್.ಎಸ್.ಮಹೇಶ್ ಮತ್ತು ಬಿ.ಎನ್.ಸೋಮಶೇಖರ್ ಇದ್ದರು.

ಮಕ್ಕಳ ದಿನಾಚರಣೆ ಅಂಗವಾಗಿ ಸರ್ಕಾರಿ ಶಾಲೆಗಳಲ್ಲಿ ಕಂಪ್ಯೂಟರ್ ಪ್ರಯೋಗಾಲಯ ಆರಂಭ

ಮೈಸೂರು, ನ. 16– ಪ್ರಾಜೆಕ್ಟ್ ಶಿಕ್ಷಾದಡಿಯಲ್ಲಿ ಸರ್ಕಾರಿ ಶಾಲೆಗಳಿಗೆ ಡಿಜಿಟಲ್ ಕಲಿಕೆ ಪರಿಚಯಿಸುವ ಮೂಲಕ ಡಿಜಿಟಲ್ ಅಂತರ ಕಡಿಮೆ ಮಾಡುವುದನ್ನು ಜೀಟಾ ಮುಂದುವರೆಸಿದೆ. ಮಕ್ಕಳ ದಿನಾಚರಣೆಯ ಸಂದರ್ಭದಲ್ಲಿ ಚೀಮಸಂದ್ರ ಸರ್ಕಾರಿ ಶಾಲೆಯಲ್ಲಿ ತನ್ನ ಎರಡನೇ ಕಂಪ್ಯೂಟರ್ ಪ್ರಯೋಗಾಲಯ ಆರಂಭಿಸಿದೆ.

ಒಂದು ವರ್ಷದೊಳಗೆ 300ಕ್ಕೂ ಹೆಚ್ಚು ಹಿರಿಯ ಪ್ರಾಥಮಿಕ ಶಾಲಾ ವಿದ್ಯಾರ್ಥಿಗಳಿಗೆ ಡಿಜಿಟಲ್ ಕಲಿಕಾ ಪರಿಕರಗಳು ಮತ್ತು ರಚನಾತ್ಮಕ ಸ್ವರೂಪದ ಕಂಪ್ಯೂಟರ್ ಶಿಕ್ಷಣ ಒದಗಿಸಲು ಕಾರ್ಯಕ್ರಮ ವಿನ್ಯಾಸಗೊಳಿಸಲಾಗಿದೆ. ಒಂದು ವರ್ಷದೊಳಗೆ 300ಕ್ಕೂ ಹೆಚ್ಚು ಹಿರಿಯ ಪ್ರಾಥಮಿಕ ಶಾಲಾ ವಿದ್ಯಾರ್ಥಿಗಳಿಗೆ ಡಿಜಿಟಲ್ ಕಲಿಕಾ ಪರಿಕರಗಳು ಮತ್ತು ರಚನಾತ್ಮಕ ಕಂಪ್ಯೂಟರ್ ಶಿಕ್ಷಣ ಒದಗಿಸುವ ಮೂಲಕ ಅವರ ಬದುಕಿನ ಆರಂಭದಲ್ಲಿಯೇ ಅಗತ್ಯ ಡಿಜಿಟಲ್ ಕೌಶಲಗಳನ್ನು ಕರಗತ ಮಾಡಿಸಲು ಈ ಕಾರ್ಯಕ್ರಮ ವಿನ್ಯಾಸಗೊಳಿಸಲಾಗಿದೆ ಎಂದು ಜೀಟಾದ ಚೀಫ್ ಪೀಪಲ್ ಆಫೀಸರ್ ಶುಭಯು ಸೇನ್‌ಗುಪ್ತಾ ತಿಳಿಸಿದರು.

ಕಾರ್ತಿಕ ದೀಪೋತ್ಸವ



ಮೈಸೂರಿನ ಸಂಸ್ಕೃತಿ ಮಹಿಳಾ ಸಂಘಟನೆಯ ವತಿಯಿಂದ ಕಾರ್ತಿಕ ಸೋಮವಾರದ ಅಂಗವಾಗಿ ನಡೆದ ಓಂ ಶಿವೋಹಮ್ ಕಾರ್ಯಕ್ರಮದಲ್ಲಿ ರುದ್ರಾಭಿಷೇಕ, ಕಾರ್ತಿಕ ದೀಪೋತ್ಸವ, ಗೋ ಪೂಜೆ, 108 ವಿಶೇಷ ಆರತಿಯನ್ನು ಸಂಸ್ಥೆಯ ಅಧ್ಯಕ್ಷೆ ಶ್ರೀದೇವಿ ಬೂಪಾಲಮ್ ನೇತೃತ್ವದಲ್ಲಿ ವೈಭವದಿಂದ ಲಷ್ಕರ್ ಮೊಹಲ್ಲಾದ ಗೀತಾ ಮಂದಿರದಲ್ಲಿ ಆಚರಿಸಲಾಯಿತು. ಉದ್ಯಮಿ ಶ್ರೀಮತಿ ಖುಷಿ ವಿನು, ಸಂಸ್ಥೆಯ ಪದಾಧಿಕಾರಿಗಳಾದ ಪೂರ್ಣಿಮಾ ಸುನಿಲ್, ಕೀರ್ತಿ, ನಂದ, ಸುಮಾ ರಮೇಶ್, ರಶ್ಮಿ ನಾಗೇಂದ್ರ, ಸವಿತಾ ಕಸ್ತೂರಿ, ಕೃತಿ, ರೇಖಾ, ಶ್ವೇತ ಸ್ವರೂಪ್, ಶಿಲ್ಪ ಸಂದೀಪ್, ಅರ್ಚನಾ ಬಸವರಾಜು, ಸುಷ್ಮಾ, ಕಮಲ ಇನ್ನಿತರರು ಉಪಸ್ಥಿತರಿದ್ದರು.


ತಿ.ನರಸೀಪುರ ವಿಧಾನಸಭಾ ಕ್ಷೇತ್ರದ
ಜನಪ್ರಿಯ ಮಾಜಿ ಶಾಸಕರಾದ
ಸನ್ಮಾನ್ಯ ಶ್ರೀ
ಅಶ್ವಿನ್‌ಕುಮಾರ್.ಎಂ
ರವರಿಗೆ
ಜನ್ಮದಿನದ ಶುಭಾಶಯಗಳು
8105367007
ಶುಭಕೋರುವವರು: ನಾಡನಹಳ್ಳಿ ಕೆ.ಸಿದ್ದರಾಜು, ನಿಶಾಂತ್ (ದಾಸ್)